بِسْمِ اللهِ الرَّحْمٰنِ الرَّحِيْم نَحْمَدُهٗ وَنُصَلِّی عَلٰی رَسُوْلِهِ الْكَرِيْم وَعَلٰی عَبْدِهِ الْمَسِيْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 02

ಕನ್ನಡ ಬದರ್ ವಾರ ಪತ್ರಿಕೆ WEEKLY BADAR QADIAN KANNADA

ಸಂಚಿಕೆ: 02

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

14 ಜನವರಿ 2021, 14 ಸುಲಹ್ 1400 ಹಿಜರಿ ಶಮ್‌ಸಿ,
29 ಜಮಾದಿಉಲ್ ಅವ್ವಲ್ 1442 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– ಆಮೀನ್

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ۔

## ಅಲ್ಲಾಹನ ಉಪದೇಶ

يٰۤاَيُّهَا الَّذِيْنَ اٰمَنُوْا كُوْنُوْا قَوّٰمِيْنَ
بِالْقِسْطِ شُهَدَآءَ لِلّٰهِ وَلَوْ عَلٰۤى
اَنْفُسِكُمْ اَوِ الْوَالِدَيْنِ وَالْاَقْرَبِيْنَ

*(ಅನ್ನಿಸಾಅ್:136)*

ಅಂದರೆ: ಎಲೈ ವಿಶ್ವಾಸಿಗಳೇ, ನೀವು ಪರಿಪೂರ್ಣವಾದ ನ್ಯಾಯ ನಿಷ್ಠೆಯುಳ್ಳವರೂ ಅಲ್ಲಾಹನಿಗೋಸ್ಕರ ಸಾಕ್ಷ್ಯವಹಿಸುವವರೂ ಆಗಿರಿ; ಅದು ನಿಮಗೆ ಅಥವಾ (ನಿಮ್ಮ) ಮಾತಾಪಿತರಿಗೆ ಅಥವಾ ನಿಕಟ ಬಂಧುಗಳಿಗೆ ವಿರುದ್ಧವಾಗಿದ್ದರೂ ಸರಿ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ನಿಶ್ಶಬ್ಧವಾಗಿ ಹಾಗೂ ಗಮನವಿಟ್ಟು ಖುತ್‌ಬ ಆಲಿಸಬೇಕು

* ಹಝ್‌ರತ್ ಅಬು ಹುರೈರ(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ನುಡಿದರು: ಜುಮಅ ಸಮಯದಲ್ಲಿ ಇಮಾಮರು ಖುತುಬ ನೀಡುತ್ತಿರುವಾಗ ನೀವು ನಿಮ್ಮ ಸಂಗಡಿಗರಿಗೆ ಸುಮ್ಮನಿರು ಎಂದು ಹೇಳುವುದು ಸಹ ನಿಮ್ಮ ತಪ್ಪಾಗಿರುತ್ತದೆ. (ಸಹಿ ಬುಖಾರಿ ಸಂಪುಟ 2 ಕಿತಾಬುಲ್ ಜುಮುಅ)

* ಹಝ್‌ರತ್ ಇಬ್ನು ಅಬ್ಬಾಸ್(ರ) ರಿಂದ ವರದಿ ಇದೆ. ನಾನು ರಸೂಲುಲ್ಲಾಹ್(ಸ), ಹಝ್‌ರತ್ ಅಬೂಬಕರ್, ಹಝ್‌ರತ್ ಉಮರ್ ಮತ್ತು ಹಝ್‌ರತ್ ಉಸ್ಮಾನ್(ರ) ರೊಡನೆ ಕೂಡಿ ಈದ್ ನಮಾಝುಗಳನ್ನು ನಿರ್ವಹಿಸಿರುತ್ತೇನೆ. ಇವು ಖುತುಬಕ್ಕಿಂತ ಮುಂಚೆ ನಿರ್ವಹಿಸಿಕೊಡುತ್ತಿದ್ದರು.

* ಹಝ್‌ರತ್ ಇಬ್ನು ಅಬ್ಬಾಸ್ ವರದಿ ಮಾಡುತ್ತಾರೆ. ನಬಿ(ಸ) ಈದುಲ್–ಫಿತರ್ ದಿವಸ ಎರಡು ರಕಅತ್ ನಿರ್ವಹಿಸಿದರು. ಅವರು ಅದಕ್ಕಿಂತ ಮುಂಚೆಯಾಗಲಿ ನಂತರವಾಗಲಿ ಯಾವ ನಫಲ್ ನಮಾಝ್ ನಿರ್ವಹಿಸಲಿಲ್ಲ. ಮತ್ತೆ ಅವರು ಮಹಿಳೆಯರ ಕಡೆ ಬಂದರು. ಆಗ ಹಝ್‌ರತ್ ಬಿಲಾಲ್‌ರವರು ಅವರ ಜೊತೆಗಿದ್ದರು. ಅವರು ಮಹಿಳೆಯರಿಗೆ ಸದಖಾ (ದಾನ) ಮಾಡಲು ಆಜ್ಞಾಪಿಸಿದರು. ಆಗ ಅವರುಗಳು ದಾನ ಮಾಡತೊಡಗಿದರು. ಒಬ್ಬಳು ತನ್ನ ಬಾವಲಿ ಕೊಡುತ್ತಿದ್ದರೆ, ಇನ್ನೊಬ್ಬರು ತನ್ನ ಕೊರಳಿನ ಮಾಲೆಯನ್ನು ಕೊಡುತ್ತಿದ್ದರು. (ಸಹೀ ಬುಖಾರಿ ಸಂಪುಟ 2, ಕಿತಾಬುಲ್ ಈದೈನ್, ಮುದ್ರಣ ಖಾದಿಯಾನ್ 2006)

## ಅಲ್ಲಾಹನ ಅಭಯವನ್ನು ಪಡೆಯಿರಿ, ನಮಾಝುಗಳನ್ನು ಕ್ರಮಬದ್ಧವಾಗಿ ನಿರ್ವಹಿಸಿರಿ, ನಮಾಝುಗಳು ಕ್ಷಮಿಸಲ್ಪಡುವುದಿಲ್ಲ, ಪ್ರವಾದಿಗಳ ನಮಾಝ್ ಸಹ ಕ್ಷಮಿಸಲ್ಪಟ್ಟಿಲ್ಲ.

**ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

### ಊಲುಲ್ ಅಮ್‌ರ್ (ಅಧಿಕಾರಿಗಳ) ಅನುಸರಣೆ

ಪವಿತ್ರ ಖುರ್‌ಆನ್‌ನಲ್ಲಿ ಆಜ್ಞಾಪಿಸಲಾಗಿದೆ. **ಅತೀಉಲ್ಲಾಹ ವ ಅತೀಉರ್ರಸೂಲ ವ ಊಲಿಲ್‌ಅಮ್ರಿ ಮಿನ್ಕುಮ್** (ಅನ್ನಿಸಾಅ–60) ನಿಮ್ಮ ಅಧಿಕಾರಿಗಳಿಗೂ ವಿಧೇಯರಾಗಿರಿ. ಎಂಬ ಸ್ಪಷ್ಟವಾದ ಆಜ್ಞೆಯಿದೆ. ಯಾರಾದರೂ ಸರ್ಕಾರಗಳ ಪಾಲನೆ "ಮಿನ್‌ಕುಮ್" ಎಂಬುವುದರಲಿಲ್ಲ ಎಂದು ತಿಳಿದುಕೊಂಡರೆ ಅದು ಶುದ್ಧ ತಪ್ಪಾಗುತ್ತದೆ. ಸರ್ಕಾರ ಯಾವ ಮಾತುಗಳನ್ನು ಶರೀಅತ್‌ಗೆ (ಧರ್ಮ ಸಂಹಿತೆ) ಅನುಗುಣವಾಗಿ ವಿಧಿಸುತ್ತದೆಯೋ ಅದು "ಮಿನ್‌ಕುಮ್" ನಲ್ಲಿ ಒಳಗೊಂಡು ಯಾರು ನಮ್ಮನ್ನು ವಿರೋಧಿಸುವುದಿಲ್ಲ. ಅವರು ನಮ್ಮಲ್ಲಿ ಸೇರಿದವರಾಗಿದ್ದಾರೆ. ಪವಿತ್ರ ಖುರ್‌ಆನ್‌ನಿಂದ ಸಾಬೀತಾಗುವುದೇನೆಂದರೆ ಸರ್ಕಾರದ ಆದೇಶಗಳನ್ನು ಪಾಲಿಸಬೇಕು. ಅದರ ಆಜ್ಞೆಗಳನ್ನು ಮನ್ನಿಸಬೇಕಾಗುವುದು.

### ಶುಭಕರ ಹಾದಿಗಳನ್ನು ಅಪ್ಪಿಕೊಳ್ಳಿರಿ.

ಪುಣ್ಯಕಾರ್ಯ ಮತ್ತು ದೇವಭಕ್ತಿಯ ಕಡೆ ಗಮನ ವಹಿಸಿರಿ ಮತ್ತು ಶುಭಕರ ಹಾದಿಗಳನ್ನು ಅಪ್ಪಿಕೊಳ್ಳಿರಿ. ಆಗ ಮಾತ್ರ ಏನನ್ನಾದರೂ ಸಾಧಿಸಬಹುದು. **ಇನ್ನಲ್ಲಾಹ ಲಾ ಯುಗೈಯಿರು ಬಿಖೌಮಿನ್ ಹತ್ತಾ ಯುಗೈಯಿರು ಮಾ ಬಿ ಅನ್‌ಫುಸಿಹಿಮ್** (ಅರ್ರಆದ್–12) ಒಂದು ಸಮುದಾಯದವರು ತಮ್ಮ ಹೃದಯದಲ್ಲಿರುವುದಕ್ಕೆ ಸ್ವಯಂ ಮಾರ್ಪಾಟು ಮಾಡುವ ತನಕ ಅವರ ಸ್ಥಿತಿಗೆ ಅಲ್ಲಾಹನು ಮಾರ್ಪಾಟು ಮಾಡಲಾರನು. ಅವಶ್ಯವಾಗಿರುವುದೇನೆಂದರೆ ಜನರು ಅಲ್ಲಾಹನೆಡೆ ಮರಳಬೇಕು. ನಮಾಝ್ ನಿರ್ವಹಿಸಬೇಕು. ಝಕಾತ್ (ದಾನ) ನೀಡಬೇಕು. ಯಾರ ಹಕ್ಕುಗಳನ್ನು ದಮನಿಸಬಾರದು ಮತ್ತು ದುಷ್ಕರ್ಮಗಳಿಂದ ದೂರವಿರಬೇಕು. ಈ ಮಾತು ನಿಚ್ಚಳಗೊಂಡಿದೆ. ಕೆಲ ಸಂದರ್ಭಗಳಲ್ಲಿ ಒಬ್ಬನು ದುಷ್ಕರ್ಮಗೈದರೆ ಅದು ಇಡೀ ನಗರ ಮತ್ತು ಮನೆಗಳ ನಾಶಕ್ಕೆ ಕಾರಣವಾಗುತ್ತದೆ. ಆದುದರಿಂದ ದುಷ್ಕರ್ಮಿಗಳನ್ನು ತ್ಯಜಿಸಿರಿ. ಅದು ನಾಶಕ್ಕೆ ಕಾರಣವಾಗುವುದು. ನಮಾಝುಗಳನ್ನು ಕ್ರಮಬದ್ಧವಾಗಿ ಪ್ರಾಮಾಣಿಕತೆಯಿಂದ ನಿರ್ವಹಿಸಿರಿ. ಅಲ್ಲಾಹನ ಅಭಯವನ್ನು ಪಡೆಯಿರಿ.

### ನಮಾಝುಗಳನ್ನು ಕ್ರಮಬದ್ಧವಾಗಿ ಪ್ರಾಮಾಣಿಕತೆಯಿಂದ ನಿರ್ವಹಿಸಿರಿ.

ನಮಾಝುಗಳು ಕ್ಷಮಿಸಲ್ಪಡುವುದಿಲ್ಲ. ಪ್ರವಾದಿಗಳ ನಮಾಝು ಸಹ ಕ್ಷಮಿಸಲ್ಪಟ್ಟಿಲ್ಲ. ಒಂದು ಹದೀಸಿನಲ್ಲಿ ಬರುತ್ತದೆ. ರಸೂಲುಲ್ಲಾಹ್(ಸ) ರವರ ಬಳಿ ಒಂದು ಹೊಸ ವರ್ಗದವರು ಬಂದರು. ಅವರು ನಮಾಝುಗಳಿಂದ ಕ್ಷಮೆ (ವಿನಾಯಿತಿ) ಕೋರಿದರು ಅವರು ನುಡಿದರು ಯಾವ ಧರ್ಮದಲ್ಲಿ ಶಿಸ್ತು ನಿಯಮವಿಲ್ಲವೋ ಅದು ಧರ್ಮವೇ ಅಲ್ಲ.

**(ಮಲ್ಫೂಝಾತ್, ಸಂಪುಟ 1, ಪುಟ–238–240, ಮುದ್ರಣ ಖಾದಿಯನ್ 2018)**

**ಇವನು ಧರ್ಮದ ಸೇವೆಯಲ್ಲಿ ವಕ್ಫ್ (ಸಮರ್ಪಿತನು) ಆದರೆ ಇವನು ತನ್ನ ಸಹೋದರನ ಋಣದಲ್ಲಿರುವನು ಎಂದು ಏಕೆ ಹೇಳುತ್ತೀರಿ. ಅವನು ಧರ್ಮಸೇವೆ ಮಾಡುವ ಫಲದಿಂದಾಗಿ ಅಲ್ಲಾಹನು ಅವನ ಸಹೋದರನ ಆಹಾರದಲ್ಲಿ ಸಂಪನ್ನತೆ ಒದಗಿಸುವನು ಎಂದು ಏಕೆ ಹೇಳುವುದಿಲ್ಲ.**

ಸಯ್ಯದನಾ ಹಝ್‌ರತ್ ಮುಸ್ಲಿಹ್ ಮೌಊದ್(ರ) ನುಡಿಯುತ್ತಾರೆ

ನನಗೆ ನೆನಪಿದೆ. ಹಝ್‌ರತ್ ಖಲೀಫತುಲ್ ಮಸೀಹ್ ಅವ್ವಲ್ (ಪ್ರಥಮರು) (ರ) ರವರ ಸಮಯದಲ್ಲಿ ಮೀರ್ ಮುಹಮ್ಮದ್ ಇಸ್ಹಾಖ್ ಸಾಹಿಬರ ಶಿಕ್ಷಣದ ಸಮಯ ಬಂದಾಗ (ಮೀರ್ ಸಾಹಿಬರು ನನ್ನಿಂದ ಒಂದು ಮುಕ್ಕಾಲು ವರ್ಷಗಳ ಚಿಕ್ಕವರಾಗಿದ್ದರು) ಆಗ ನಮ್ಮ ಅಜ್ಜನವರಾದ ದಿವಂಗತರು ಹಝ್‌ರತ್ ಖಲೀಫತುಲ್ ಮಸೀಹ್ ಅವ್ವಲ್ ರಿಂದ ಸಲಹೆ ಕೇಳಿದರು. ಅವನಿಗೆ ಯಾವ ಶಿಕ್ಷಣ ನೀಡಬೇಕು. ಅವರು ಹೇಳಿದರು. ಧರ್ಮ ಶಿಕ್ಷಣವನ್ನು ನೀಡಿರಿ. ಒಬ್ಬ ಮಗನಿಗೆ ಲೌಕಿಕ ಶಿಕ್ಷಣ ನೀಡಿದ್ದೀರಿ. ಇವರಿಗೆ ಧರ್ಮ ಶಿಕ್ಷಣವನ್ನು ನೀಡಿರಿ. ಆಗ ದಿವಂಗತ ಅಜ್ಜನವರು ತಮ್ಮ ಕಡೆಯಿಂದ ಅಥವಾ ಅಜ್ಜಿಯ ಪರವಾಗಿ ಹೇಳಿದರು. ಹಾಗಾದರೆ ಇವನು ನನ್ನ ಸಹೋದರನ ಋಣದಲ್ಲಿ ಬದುಕುವನು. ಈ ಮಾತು ಕೇಳಿದ ತಕ್ಷಣ ಖಲೀಫರು ಹೇಳಿದರು. ಅಲ್ಲಾಹನು ಕೆಲ ಸಂದರ್ಭಗಳಲ್ಲಿ ಒಬ್ಬ ವ್ಯಕ್ತಿಗೆ ಇನ್ನೊಬ್ಬನ ನೆರವಿನಿಂದ ಆಹಾರ ಒದಗಿಸುತ್ತಾನೆ. ಇವನು ಧರ್ಮ ಸೇವೆಯಲ್ಲಿ ವಕ್ಫ್ (ಸಮರ್ಪಣೆ) ಆದರೆ ಇವನು ತನ್ನ ಸಹೋದರನ ಋಣದಲ್ಲಿರುವನು ಎಂದು ಏಕೆ ಹೇಳುತ್ತೀರಿ, ಅವನು ಧರ್ಮ ಸೇವೆ ಮಾಡುವ ಫಲದಿಂದಾಗಿ ಅಲ್ಲಾಹನು ಅವನ ಸಹೋದರನ ಆಹಾರದಲ್ಲಿ ಸಂಪನ್ನತೆ ಒದಗಿಸುವನು ಎಂದು ಏಕೆ ಹೇಳುವುದಿಲ್ಲ. ಮತ್ತೆ ಅವರು ಹಝ್‌ರತ್ ಅಬು ಹುರೈರ(ರ) ಅವರ ಘಟನೆ ವಿವರಿಸಿದರು. ಅವರು ಇಸ್ಲಾಮ್ ಧರ್ಮ ಸ್ವೀಕರಿಸಿದಾಗ ಅವರಿಗೆ ರಸೂಲೆ ಕರೀಂ(ಸ) ರವರ ಸಭೆಗಳಲ್ಲಿ ಭಾಗವಹಿಸುವ ಹಂಬಲ ಉಂಟಾಯಿತು. ಆದುದರಿಂದ ಅವರು ಹಗಲಿರುಳು ಮಸೀದಿಯಲ್ಲಿಯೇ ಕುಳಿತುಕೊಂಡಿದ್ದರು. ಏಕೆಂದರೆ ರಸೂಲುಲ್ಲಾಹ್(ಸ) ರವರ ಯಾವುದೇ ಮಾತುಗಳನ್ನು ಆಲಿಸುವುದರಿಂದ ವಂಚಿತರಾಗಿರಬಾರದು ಎಂದು. ಅವರ ಯಥೇಚ್ಛ ವರದಿಗಳನ್ನು ನೋಡಿ ಕೆಲವರು ಅವರನ್ನು ಹಳೆಯ ಸಹಾಬಿ ಎಂದು ಭಾವಿಸುತ್ತಾರೆ. ಅವರು ಹಳೆಯ ಸಹಾಬರಿಗೇನು ಅಲ್ಲ. ಅವರು ರಸೂಲುಲ್ಲಾಹ್(ಸ) ರವರ ನಿಧನಕ್ಕಿಂತ ಕೇವಲ ಮೂರು ವರ್ಷಗಳ ಹಿಂದೆ ವಿಶ್ವಾಸ ತಂದಿದ್ದರು. ಆದರೆ ಅವರ ವರದಿಗಳೇ ಹೆಚ್ಚಾಗಿವೆ. ಆ ಕಾರಣದಿಂದ ಜನರು ಹಳೆಯ ಸಹಾಬರಿಗಿಂತ ಹಝ್‌ರತ್ ಅಬು ಹುರೈರರನ್ನು ಗುರುತಿಸುತ್ತಾರೆ. ಏಕೆಂದರೆ ಹದೀಸುಗಳಲ್ಲಿ

*(ಪುಟ ಸಂಖೆ 07 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ನೀವು ಕೇಳಿದ್ದಕ್ಕಿಂತ ಉತ್ತಮವಾದುದನ್ನು ನಾನು ನಿಮಗೆ ಹೇಳಿಕೊಡಲೇ? ಅದೇನೆಂದರೆ, ನೀವು ಹಾಸಿಗೆಗಳಲ್ಲಿ ಮಲಗುವಾಗ, 34 ಸಲ ಅಲ್ಲಾಹು ಅಕ್ಬರ್, 33 ಬಾರಿ ಸುಬ್‌ಹಾನಲ್ಲಾಹ್, 33 ಸಲ ಅಲ್‌ಹಮ್ದುಲಿಲ್ಲಾಹ್ ಎಂದು ಹೇಳಿರಿ. ಇದು ನಿಮ್ಮಿಬ್ಬರಿಗೂ ಕೆಲಸಕ್ಕಾಗಿ ಸೇವಕನು ಲಭಿಸುವುದಕ್ಕಿಂತ ಉತ್ತಮವಾಗಿದೆ.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಅಳಿಯ ಹಾಗೂ ಅಬೂ ತುರಾಬ್ ಹಝ್ರತ್ ಅಲಿ(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಹಝ್ರತ್ ಅಲಿ(ರ) ಮತ್ತು ಹಝ್ರತ್ ಫಾತಿಮಾ(ರ) ಬಡತನದಲ್ಲಿದ್ದರೂ ಇದ್ದುವುದರಲ್ಲಿ ತೃಪ್ತಿ ಹೊಂದುವ ಕಾರ್ಯದಲ್ಲಿ ಮಾದರಿಯಾಗಿದ್ದರು.**

**ನಾಲ್ಕು ದಿವಂಗತರಾದ ಕೆನಡದ ಸನ್ಮಾನ್ಯ ಕಮಾಂಡರ್ ಚೌಧರಿ ಮುಹಮ್ಮದ್ ಅಸ್ಲಮ್ ಸಾಹಿಬ್, ನಝ್ಝಾರತ್ ಉಲ್‌ಯಾದ ಡ್ರೈವರ್ ಆದ ಖಮರ್ ಶಫೀಕ್ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ಶಾಹೀನ ಖಮರ್ ಸಾಹಿಬ ಮತ್ತು ಇವರ ಮಗನಾದ ಸಮರ್ ಅಹ್ಮದ್ ಸಾಹಿಬ್ ಹಾಗೂ ಮುಹಮ್ಮದ್ ಅಫ್‌ಝಲ್ ಖೋಖರ್ ಶಹೀದ್ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ಸಈದ ಅಫ್‌ಝಲ್ ಖೋಖರ್ ಸಾಹಿಬ ಅವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝು ಜನಾಝು ನಿರ್ವಹಣೆ**

**ಇತ್ತೀಚಿಗೆ ಪಾಕಿಸ್ತಾನದಲ್ಲಿ ಅಹ್ಮದಿಯರ ವಿರುದ್ಧ ಸ್ಥಿತಿಗತಿಗಳು ಹೆಚ್ಚು ಕಠಿಣವಾಗುತ್ತಿರುವ ಕಾರಣ ವಿಶೇಶ ದುಆ ಕೋರಿಕೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **04–12–2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಕಳೆದ ಖುತ್‌ಬದಲ್ಲಿ ಹಝ್ರತ್ ಅಲಿಯರ(ರ) ಪ್ರಸ್ತಾಪ ನಡೆಯುತ್ತಿತ್ತು. ಇಂದು ಸಹ ಅದಕ್ಕೆ ಸಂಬಂಧಿಸಿ ಪ್ರಸ್ತಾಪಿಸುವೆನು. ಹಝ್ರತ್ ಪೈಗಂಬರ್(ಸ) ಎರಡು ಸಲ ಹಝ್ರತ್ ಅಲಿಯನ್ನು(ರ) ತನ್ನ ಸಹೋದರನೆಂದು ಹೇಳಿದ್ದಾಗಿ ವರದಿಯಾಗಿದೆ. ಒಂದು ಬಾರಿ ಹಝ್ರತ್ ಪೈಗಂಬರ್(ಸ) ಮುಹಾಜಿರರ ನಡುವೆ ಮಕ್ಕದಲ್ಲಿ ಸಾಹೋದರ್ಯ ಸಂಬಂಧವನ್ನು ಸ್ಥಾಪಿಸಿದ್ದರು. ಮತ್ತೊಂದು ಸಲ ಮುಹಾಜಿರರ ಮತ್ತು ಅನ್ಸಾರರ ಮಧ್ಯ ಮದೀನದಲ್ಲಿ ಹಿಜ್ರತ್ ನಂತರ ಸಾಹೋದರ್ಯ ಸಂಬಂಧವನ್ನು ಸ್ಥಾಪಿಸಿದ್ದರು. ಈ ಎರಡು ಸಂದರ್ಭಗಳಲ್ಲೂ ಹಝ್ರತ್ ಅಲಿಯೊಡನೆ(ರ) ಹಝ್ರತ್ ಪೈಗಂಬರ್(ಸ) ಹೇಳಿದರು: **ಅಂತ ಅಖೀ ಫಿದ್ದುನ್‌ಯಾ ವಲ್‌ಆಖಿರ. ಎಂದರೆ,** ನೀವು ಇಹಲೋಕದಲ್ಲೂ ಪರಲೋಕದಲ್ಲೂ ನನ್ನ ಸಹೋದರನಾಗಿರುವಿ. (ಅಸದುಲ್‌ಗಾಬ ಲಿಮಾರಿಫತಿಸ್ಸಹಾಬ ಲಿಇಬ್ನೆ ಅಸೀರ್, ಸಂಪುಟ–4, ಪುಟ–88, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2016)

ಒಂದು ವರದಿಯ ಪ್ರಕಾರ, ಹಝ್ರತ್ ಅಲಿ ಬಿನ್ ಅಬೂತಾಲಿಬ್(ರ) ಮತ್ತು ಹಝ್ರತ್ ಸಹಲ್ ಬಿನ್ ಹುನೈಫ್ ಮಧ್ಯ ಹಝ್ರತ್ ಪೈಗಂಬರ್(ಸ) ಸಾಹೋದರ್ಯ ಸಂಬಂಧವನ್ನು ಸ್ಥಾಪಿಸಿದ್ದರು ಎಂದು ಬಂದಿದೆ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–16, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2017)

ಈ ಎರಡು ಬಾರಿಯ ಸಾಹೋದರ್ಯ ಸಂಬಂಧಗಳು ಯಾವಾಗ ಆಯಿತೆಂದು ಚರಿತ್ರೆಯಲ್ಲಿ ಬಂದಿದೆ. ಸಹೀಹ್ ಬುಖಾರಿಯ ವ್ಯಾಖ್ಯಾನಗಾರರಾದ ಅಲ್ಲಾಮ ಖುಸ್‌ತಲಾನಿ ಹೇಳುತ್ತಾರೆ: ಸಾಹೋದರ್ಯ ಸಂಬಂಧಗಳು ಎರಡು ಬಾರಿ ಸ್ಥಾಪಿಸಲಾಗಿದ್ದುವು. ಮೊದಲ ಬಾರಿ ಮಕ್ಕದಲ್ಲಿ ಹಿಜ್ರತಿಗೆ ಮುಂಚಿತವಾಗಿ ಮುಹಾಜಿರರ ನಡುವೆಯಾಗಿತ್ತು.ಹಝ್ರತ್ ಅಬೂಬಕ್ಕರ್ ಮತ್ತು ಹಝ್ರತ್ ಉಮರ್ ನಡುವೆ, ಹಝ್ರತ್ ಉಸ್ಮಾನ್ ಮತ್ತು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ನಡುವೆ, ಹಝ್ರತ್ ಝುಬೇರ್ ಮತ್ತು ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್ ನಡುವೆ ಮತ್ತು ಹಝ್ರತ್ ಪೈಗಂಬರ್(ಸ) ತನ್ನ ಮತ್ತು ಹಝ್ರತ್ ಅಲಿಯ ನಡುವೆ ಸಾಹೋದರ್ಯ ಸಂಬಂಧವನ್ನು ಸ್ಥಾಪಿಸಿದ್ದರು. ಅನಂತರ ಹಝ್ರತ್ ಪೈಗಂಬರ್(ಸ) ಮದೀನಕ್ಕೆ ಹೋದಾಗ, ಮುಹಾಜಿರರ ಮತ್ತು ಅನ್ಸಾರರ ನಡುವೆ ಹಝ್ರತ್ ಅನಸ್ ಬಿನ್ ಮಾಲಿಕ್‌ರ ಮನೆಯಲ್ಲಿ ಸಾಹೋದರ್ಯ ಸಂಬಂಧವನ್ನು ಸ್ಥಾಪಿಸಿದ್ದರು. ಇಬ್ನು ಸಅದ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ನೂರು ಸಹಾಬಿಯರ ನಡುವೆ ಸಾಹೋದರ್ಯ ಸಂಬಂಧವನ್ನು ಸ್ಥಾಪಿಸಿದ್ದರು. ಎಂದರೆ, ಐವತ್ತು ಮುಹಾಜಿರರ ಮತ್ತು ಐವತ್ತು ಅನ್ಸಾರರ ನಡುವೆ. (ಇರ್‌ಶಾದುಸ್ಸಾರಿ ಶರಹ್ ಸಹೀಹ್ ಬುಖಾರಿ, ಭಾಗ–8, ಪುಟ–410–411, ಹದೀಸ್–3937, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1996)

ಹಝ್ರತ್ ಅಲಿ(ರ) ಬದ್ರ್ ಯುದ್ಧ ಸಮೇತ ಮತ್ತು ತಬೂಕ್ ಯುದ್ಧ ಹೊರತುಪಡಿಸಿ ಬಾಕಿಯೆಲ್ಲ ಯುದ್ಧಗಳಲ್ಲಿ ಭಾಗಿಯಾಗಿದ್ದರು. ತಬೂಕ್ ಯುದ್ಧ ವೇಳೆಯಲ್ಲಿ ಹಝ್ರತ್ ಪೈಗಂಬರ್(ಸ) ಅವರನ್ನು ಕುಟುಂಬದವರ ಮೇಲ್ನೋಟ ವಹಿಸಲು ನಿಶ್ಚಯಿಸಿದ್ದರು. (ಅಸದುಲ್‌ಗಾಬ ಲಿ ಮಾರಿಫತಿಸ್ಸಹಾಬ ಲಿಇಬ್ನೆ ಅಸೀರ್, ಸಂಪುಟ–4, ಪುಟ–92, ದಾರುಲ್ ಫಿಕರ್ ಲಿತ್ತಬಾಅವನ್ನಶರ್ ವತ್ತವಾಝೀ ಬೈರೂತ್ 2003)

ಹಝ್ರತ್ ಸಅ್‌ಲಬ ಬಿನ್ ಅಬೂ ಮಾಲಿಕ್ ವರದಿ ಮಾಡುತ್ತಾರೆ: ಹಝ್ರತ್ ಸಅದ್ ಬಿನ್ ಉಬಾದ ಎಲ್ಲ ಸಂದರ್ಭದಲ್ಲೂ ಹಝ್ರತ್ ಪೈಗಂಬರರ(ಸ) ವತಿಯಿಂದ ಧ್ವಜ ಎತ್ತಿ ಹಿಡಿಯುವವರಾಗಿದ್ದರು. ಆದರೆ ಯುದ್ಧದ ಸಮಯವಾಗುವಾಗ, ಹಝ್ರತ್ ಅಲಿ ಬಿನ್ ಅಬೂತಾಲಿಬ್ ಧ್ವಜವನ್ನು ಅವರಿಂದ ಪಡೆಯುತ್ತಿದ್ದರು. (ಅಸದುಲ್‌ಗಾಬ ಲಿ ಮಾರಿಫತಿಸ್ಸಹಾಬ ಲಿಇಬ್ನೆ ಅಸೀರ್, ಸಂಪುಟ–4, ಪುಟ–93, ದಾರುಲ್ ಫಿಕರ್ ಲಿತ್ತಬಾಅವನ್ನಶರ್ ವತ್ತವಾಝೀ ಬೈರೂತ್ 2003)

ಉಶೈರ ಯುದ್ಧ ಜಮಾದಿಯುಲ್ ಊಲ ಹಿಜರೀ ಎರಡರಲ್ಲಿ ನಡೆದಿತ್ತು. ಇತಿಹಾಸ ಮತ್ತು ಜೀವನಚರಿತ್ರೆಯ ಗ್ರಂಥಗಳಲ್ಲಿ ಈ ಯುದ್ಧಕ್ಕೆ ಉಶೈರ ಯುದ್ಧ ಎಂಬ ಹೆಸರಲ್ಲದೆ, ಝುಲ್‌ಉಶೈರ ಝಾತುಲ್‌ಉಶೈರ ಮತ್ತು ಉಸೈರ ಎಂದೂ ವರದಿಯಾಗಿದೆ. ಉಶೈರ ಎಂಬುದು ಒಂದು ಕೋಟೆಯ ಹೆಸರಾಗಿದೆ. ಅದು ಹಿಜಾಝಿನಲ್ಲಿ ಯನ್‌ಬುಅ್ ಮತ್ತು ಝುಲ್‌ಮರ್‌ವ ನಡುವೆ ಇದೆ. ಇದರ ಬಗ್ಗೆಗಿನ ವಿವರಣೆಯನ್ನು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್‌ರು ಹೀಗೆ ಬರೆದಿದ್ದಾರೆ: ಜಮಾದಿಲ್ ಊಲ ಹಿಜರೀ 2ರಲ್ಲಿ ಮಕ್ಕದ ಖುರೈಶಿಯರ ಕಡೆಯಿಂದ ಲಭಿಸಿದ ಮಾಹಿತಿ ಪ್ರಕಾರ, ಹಝ್ರತ್ ಪೈಗಂಬರ್(ಸ) ಮುಹಾಜಿರರ ಒಂದು ಸಂಘದೊಂದಿಗೆ ಮದೀನದಿಂದ ಹೊರಟರು. ತನ್ನ ಹಿಂದೆ ತನ್ನ ಸಾಕುತಾಯಿ ಸಂಬಂಧದ ಸಹೋದರರಾದ ಅಬೂ ಸಲ್ಮ ಬಿನ್ ಅಬ್ದುಲ್ ಅಸದ್‌ರನ್ನು ಅಮೀರ್ ಆಗಿ ನಿಶ್ಚಯಿಸಿದರು. ಈ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ) ಬಹುದೂರಕ್ಕೆ ಹೋಗುತ್ತಾ ಕೊನೆಗೆ ಸಮುದ್ರ ತೀರದ ಸಮೀಪವಿರುವ ಉಶೈರ ಎಂಬ ಪ್ರದೇಶಕ್ಕೆ ತಲುಪಿದರು. ಖುರೈಶಿಯರೊಡನೆ ಯುದ್ಧ ನಡೆಯಲಿಲ್ಲವಾದರೂ ಹಝ್ರತ್ ಪೈಗಂಬರ್(ಸ) ಬನೂ ಮುದ್‌ಲಿಜ್ ಗೋತ್ರದೊಂದಿಗೆ ಒಂದು ಒಪ್ಪಂದವನ್ನು ಮಾಡಿಕೊಂಡು ಮರಳಿ ಬಂದರು. (ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–329) (ಲುಗಾತುಲ್ ಹದೀಸ್, ಸಂಪುಟ–3, ಪುಟ–110–111) (ಅಸ್ಸೀರತುಲ್ ಹಲಬೀಯ, ಸಂಪುಟ–2, ಪುಟ–175, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002) (ಅದ್ದಲಾಎಲುನ್ನಬುವ ಲಿಲ್ ಬೈಹಖಿ, ಸಂಪುಟ–5, ಪುಟ–460, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1988)

ಹಝ್ರತ್ ಅಲಿ(ರ) ಈ ಯುದ್ಧದಲ್ಲಿ ಭಾಗವಹಿಸಿದ್ದರು. ಇದಕ್ಕೆ ಸಂಬಂಧಿಸಿ ಮುಸ್ನದ್ ಬಿನ್ ಹಂಬಲಿನ ವರದಿ ಈ ರೀತಿಯಿದೆ: ಹಝ್ರತ್ ಅಮ್ಮಾರ್ ಬಿನ್ ಯಾಸಿರ್ ವರದಿ ಮಾಡುತ್ತಾರೆ: ಝಾತುಲ್‌ಉಶೈರ್ ಯುದ್ಧದಲ್ಲಿ ಹಝ್ರತ್ ಅಲಿ(ರ) ನನ್ನ ಸಹ ಪ್ರಯಾಣಿಕರಾಗಿದ್ದರು. ಹಝ್ರತ್ ಪೈಗಂಬರ್(ಸ) ಅಲ್ಲಿಗೆ ತಲುಪಿದ ನಂತರ ಅಲ್ಲಿ ತಂಗಿದಾಗ, ಖರ್ಜೂರದ ತೋಟಗಳಲ್ಲಿ ಒಂದು ಕಾರಂಜಿಯ ಬಳಿ, ಬನೂ ಮುದ್‌ಲಿಜಿನ ಜನರು ಕೆಲಸ ಮಾಡುತ್ತಿರುವುದಾಗಿ ನಾವು ನೋಡಿದೆವು. ಹಝ್ರತ್ ಅಲಿ(ರ) ನನ್ನೊಡನೆ ಕೇಳಿದರು: ಹೇ ಅಬೂ ಯಖ್‌ಝಾನ್ ನಾವು ಅವರ ಬಳಿಗೆ ಹೋಗಿ, ಅವರು ಏನು ಮಾಡುತ್ತಿರುವರು ಎಂಬುದನ್ನು ನೋಡಿಕೊಂಡು ಬರುವುದರ ಬಗ್ಗೆ ನಿನ್ನ ಅಭಿಪ್ರಾಯವೇನು? ಹೀಗೆ ನಾವು ಅವರ ಬಳಿಗೆ ಹೋದೆವು ಮತ್ತು ಅವರ ಕೆಲಸಗಳನ್ನು ಸ್ವಲ್ಪ ಸಮಯ ನೋಡಿದ ನಂತರ ನಿದ್ದೆ ಬಂದಾಗ, ಹಝ್ರತ್ ಅಲಿ(ರ) ಮತ್ತು ನಾನು ಅಲ್ಲಿಂದ ಹೊರಟುಕೊಂಡು ಖರ್ಜೂರಗಳ ಮಧ್ಯ ಮಣ್ಣಿನ ಮೇಲೆಯೇ ಮಲಗಿದೆವು. ಅಲ್ಲಾಹನಾಣೆ, ನಮ್ಮನ್ನು ಹಝ್ರತ್ ಪೈಗಂಬರ್(ಸ) ಎಬ್ಬಿಸಿದರು. ಹಝ್ರತ್ ಪೈಗಂಬರ್(ಸ) ನಮ್ಮನ್ನು ತಮ್ಮ ಕಾಲಿನಿಂದ ಮುಟ್ಟಿ ಎಬ್ಬಿಸಿದರು. ನಮ್ಮ ದೇಹದಲ್ಲಿ ಮಣ್ಣು ತಗುಲಿತ್ತು. ಆ ದಿನದಂದು ಹಝ್ರತ್ ಅಲಿಯರ(ರ) ದೇಹದ ಮೇಲಿದ್ದ ಮಣ್ಣನ್ನು ನೋಡಿಕೊಂಡು ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಅಬೂ ತುರಾಬ್, ಅತ್ಯಂತ ನತದೃಷ್ಟರಾದ ಇಬ್ಬರು ವ್ಯಕ್ತಿಗಳ ಬಗ್ಗೆ ನಿಮ್ಮೊಡನೆ ಹೇಳಲೇ? ಅಬೂ ತುರಾಬಿನ ಪ್ರಸ್ತಾಪ ಕಳೆದ ಖುತ್‌ಬದಲ್ಲೂ ಆಗಿತ್ತು. ಅವರು ಮಸೀದಿಯಲ್ಲಿ ನಿದ್ರೆ ಮಾಡುತ್ತಿದ್ದರು. ದೇಹದಲ್ಲಿ ಮಣ್ಣು ತಗುಲಿತ್ತು. ಆಗ ಹಝ್ರತ್ ಅಲಿಯನ್ನು(ರ) ಹಝ್ರತ್ ಪೈಗಂಬರ್(ಸ) ಅಬೂತುರಾಬ್ ಎಂದು ಕರೆದಿದ್ದರು. ಅಂದಿನಿಂದ ಇದು ಸಹ ಅವರ ಉಪನಾಮವಾಗಿತ್ತು ಎಂದು ಹೇಳಿದ್ದೆ. ಈ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಅವರಿಗೆ ಈ ಹೆಸರು ಇಟ್ಟಿರಬಹುದು ಅಥವಾ ನಂತರ ಇಟ್ಟಿರಬಹುದು. ಅಥವಾ ಎರಡೂ ಸಂದರ್ಭದಲ್ಲೂ ಕರೆದಿರಬಹುದು. ಈ ಎರಡು ಘಟನೆಗಳಲ್ಲಿ ಮೊದಲಿನ ಘಟನೆಯಲ್ಲಿ ಕರೆದಿರಬಹುದು.ಇದೇ ಮೊದಲಿನ ಘಟನೆಯೆಂದು ತೋರುತ್ತದೆ. ಹೇಗಿದ್ದರೂ ಹಝ್ರತ್ ಪೈಗಂಬರ್(ಸ) ಕೇಳಿದರು: ಅತ್ಯಂತ ನತದೃಷ್ಟರಾದ ಇಬ್ಬರು ವ್ಯಕ್ತಿಗಳ ಬಗ್ಗೆ ನಿಮ್ಮೊಡನೆ ಹೇಳಲೇ? ಹೇಳಿರಿ ಯಾ ರಸೂಲಲ್ಲಾಹ್ ಎಂದು ನಾವು ಹೇಳಿದೆವು. ಹಝ್ರತ್ ಪೈಗಂಬರ್(ಸ) ಹೇಳಿದರು: ಮೊದಲ ವ್ಯಕ್ತಿ, ಹಝ್ರತ್ ಸಾಲಿಹ್ ಅಲೈಹಿಸ್ಸಲಾಮರ ಒಂಟೆಯ ಕಾಲುಗಳನ್ನು ಮುರಿದಿದ್ದ ಸಮೂದ್ ಸಮುದಾಯದ ಒಹೈಮರ್ ಆಗಿದ್ದನು. ಎರಡನೇ ವ್ಯಕ್ತಿ, ಹೇ ಅಲಿ, ನಿನ್ನ ತಲೆ ಮೇಲೆ ಹಲ್ಲೆ ನಡೆಸಿಲಿರುವ ವ್ಯಕ್ತಿಯಾಗಿರುವನು. ಆಗ ನಿನ್ನ ಗಡ್ಡ ರಕ್ತದಿಂದ ಆವರಿಸಲ್ಪಡುವುದು.

(ಮಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–6, ಪುಟ–261, ಹದೀಸ್–18511, ಆಲಿಮುಲ್ ಕುತುಬ್ ಲಿತ್ತಬಾಅ ವನ್ನಶರ್ ಅತ್ತೌರ್ಝೀ ಬೈರೂತ್ 1998)

ಸಫ್‌ವಾನ್ ಬದ್ರುಲ್ ಊಲ ಹಿಜರಿ 2, ಜಮಾದಿಯುಲ್‌ಆಖಿರ್‌ನಲ್ಲಿ ನಡೆದಿತ್ತು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರು ಇದರ ಬಗ್ಗೆಗಿನ ವಿವರಣೆಯಲ್ಲಿ ಹೀಗೆ ಬರೆದಿರುವರು:

ಉಶೈರ ಯುದ್ಧದಿಂದ ಹಝ್ರತ್ ಪೈಗಂಬರ್(ಸ) ಮರಳಿ ಬಂದು ಹತ್ತು ದಿನ ಕೂಡ ಆಗಿರಲಿಲ್ಲ. ಕುರ್ಝ್ ಬಿನ್ ಜಾಬಿರ್ ಫಹ್‌ರಿ ಎಂಬ ಹೆಸರಿನ ಮಕ್ಕದ ಒಬ್ಬ ಸರದಾರ ಖುರೈಶಿನ ಒಂದು ಸಂಘದೊಂದಿಗೆ ಬಹಳ ಜಾಣ್ಮೆಯಿಂದ ಮದೀನ ಪಟ್ಟಣದಿಂದ ಕೇವಲ ಮೂರು ಮೈಲುಗಳ ದೂರದಲ್ಲಿದ್ದ ಹುಲ್ಲುಗಾವಲಿನಲ್ಲಿ ಅಚಾನಕ್ಕಾಗಿ ಆಕ್ರಮಣ ನಡೆಸಿಕೊಂಡು ಮುಸ್ಲಿಮರ ಒಂಟೆಗಳು ಮುಂತಾದವುಗಳನ್ನೆಲ್ಲ ಲೂಟಿ ಮಾಡಿಕೊಂಡು ಹೋದರು. ಹಝ್ರತ್ ಪೈಗಂಬರರಿಗೆ(ಸ) ಇದರ ಸುದ್ದಿ ಮುಟ್ಟಿದ್ದಾಗ, ಬೇಗನೇ ಝೈದ್ ಬಿನ್ ಹಾರ್‌ಸರನ್ನು ತನ್ನ ಹಿಂದೆ ಅಮೀರರನ್ನಾಗಿ ನೇಮಿಸಿಕೊಂಡು ಮುಹಾಜಿರರ ಒಂದು ಸಂಘದೊಂದಿಗೆ ಅವರನ್ನು ಬೆನ್ನಟ್ಟಲು ಹೊರಟರು. ಬದ್ರಿನ ಸಮೀಪವಿರುವ ಪ್ರದೇಶವಾದ ಸಫ್‌ವಾನ್ ತನಕ ಅವರನ್ನು ಹಿಂಬಾಲಿಸಿದರು. ಆದರೆ ಅವರು ಪರಾರಿಯಾದರು. ಈ ಯುದ್ಧವನ್ನು ಬದ್ರುಲ್ ಊಲ ಎಂದೂ ಕರೆಯಲಾಗುತ್ತದೆ. (ಸೀರತ್ ಖಾತಮನ್ನಬೀಈನ್, ಹಝ್ರತ್ ಮುರ್ಝ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–330)

ಈ ಯುದ್ಧದ ವೇಳೆ ಹಝ್ರತ್ ಅಲಿಗೆ(ರ) ಹಝ್ರತ್ ಪೈಗಂಬರ್(ಸ) ಬಿಳಿ ಬಾವುಟವನ್ನು ಕೊಟ್ಟಿದ್ದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–2, ಪುಟ–253, ದಾರ್ ಅಹ್ಯಾಉತ್ತುರಾಸ್ ಬೈರೂಥ್ ಲೆಬನಾನ್ 1996)

ಹಿಜರೀ 2ರಲ್ಲಿ, ಎಂದರೆ ಕ್ರಿಸ್ತ ಶಕ 623 ಮಾರ್ಚಿನಲ್ಲಿ ಬದ್ರ್ ಯುದ್ಧ ನಡೆದಿತ್ತು. ಇದರ ಪ್ರಸ್ತಾಪ ಮತ್ತು ಇದರಲ್ಲಿ ಹಝ್ರತ್ ಅಲಿಯರ(ರ) ಬಗ್ಗೆ ಹೀಗೆ ಪ್ರಸ್ತಾಪ ಸಿಗುತ್ತದೆ: ಹಝ್ರತ್ ಅಲಿ(ರ), ಹಝ್ರತ್ ಝುಬೇರ್(ರ), ಹಝ್ರತ್ ಸಅದ್ ಬಿನ್ ಅಬೀ ವಖಾಸ್ ಮತ್ತು ಹಝ್ರತ್ ಬಸ್‌ಬಸ್ ಬಿನ್ ಅಮ್ರ್‌ರನ್ನು ಹಝ್ರತ್ ಪೈಗಂಬರ್(ಸ) ಮುಶ್ರಿಕರ ಬಗ್ಗೆಗಿನ ಮಾಹಿತಿಗಳನ್ನು ತಿಳಿಯಲು ಬದ್ರಿನ ಕಾರಂಜಿ ಸಮೀಪಕ್ಕೆ ಕಳುಹಿಸಿದರು. ಖುರೈಶಿಯರು ತಮ್ಮ ಜಾನುವಾರುಗಳಿಗೆ ನೀರು ಕುಡಿಸುತ್ತಿರುವುದಾಗಿ ಅವರು ಕಂಡರು. ಅವರು ಮುಶ್ರಿಕರ ಈ ಸಂಘವನ್ನು ಹಿಡಿಗೂಡಿಕೊಂಡು ಹಝ್ರತ್ ಪೈಗಂಬರರ(ಸ) ಸನ್ನಿಧಿಗೆ ಬಂದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–2, ಪುಟ–256, ದಾರ್ ಅಹ್ಯಾಉತ್ತುರಾಸ್ ಬೈರೂತ್ ಲೆಬನಾನ್ 1996) (ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–349)

ಬದ್ರ್ ಯುದ್ಧದ ಸಂದರ್ಭದಲ್ಲಿ, ಉಭಯ ಸೈನ್ಯಗಳು ಮುಖಾಮುಖಿಯಾದವು, ಮೊತ್ತಮೊದಲು ರಬೀಅ್‌ರ ಇಬ್ಬರು ಮಕ್ಕಳಾದ ಶೈಬ ಮತ್ತು ಉತ್‌ಬ ಹಾಗೂ ವಲೀದ್ ಬಿನ್ ಉತ್‌ಬ ಮುಂದಕ್ಕೆ ಧಾವಿಸಿಕೊಂಡು ಯುದ್ಧಕ್ಕಾಗಿ ಆಹ್ವಾನಸಿದಾಗ, ಬನೂ ಹಾರಿಸ್ ಗೋತ್ರದ ಅನ್ಸಾರರಾದ ಅಫ್‌ರಾಅ್‌ರ ಮೂರು ಮಕ್ಕಳಾದ ಮುಆಧ್, ಮುಅವ್ವಿಧ್ ಮತ್ತು ಔಫ್ ಹೋರಾಡಲು ಮುಂದಕ್ಕೆ ಧಾವಿಸಿದರು. ಆದರೆ ಮುಸ್ಲಿಮರ ಮತ್ತು ಮುಶ್ರಿಕರ ನಡುವೆ ನಡೆಯಲಿರುವ ಮೊದಲ ಕಾಳಗದಲ್ಲಿ ಅನ್ಸಾರರನ್ನು ಅನಾವಶ್ಯವಾಗಿ ಭಾಗಿ ಮಾಡುವುದನ್ನು ಹಝ್ರತ್ ಪೈಗಂಬರ್(ಸ) ಇಷ್ಟಪಟ್ಟಿರಲಿಲ್ಲ. ಹಝ್ರತ್ ಪೈಗಂಬರರ ತಂದೆಯ ಸಹೋದರರ ಮಕ್ಕಳು ಮತ್ತು ಹಝ್ರತ್ ಪೈಗಂಬರರ(ಸ) ಸಮುದಾಯದ ಮೂಲಕ ಮುಶ್ರಿಕರ ಮೇಲೆ ಮೇಲುಗೈ ಸಾಧಿಸಬೇಕೆಂದಾಗಿತ್ತು ಹಝ್ರತ್ ಪೈಗಂಬರರ(ಸ) ಇಚ್ಛೆ. ಹೀಗೆ ಅನ್ಸಾರರೊಡನೆ ತಮ್ಮ ಪಂಕ್ತಿಗಳ ಕಡೆಗೆ ಮರಳಿಹೋಗಲು ಹಝ್ರತ್ ಪೈಗಂಬರ್(ಸ) ಆದೇಶಿಸಿದರು ಮತ್ತು ಅವರ ಬಗ್ಗೆ ಒಳ್ಳೆಯ ಮಾತುಗಳನ್ನು ಹೇಳಿದರು. ಅನಂತರ ಮುಶ್ರಿಕರು ಹೇಳಿದರು: ಹೇ ಮುಹಮ್ಮದ್, ನಮ್ಮ ಕಡೆಗೆ ನಮ್ಮೊಡನೆ ಹೋರಾಡಲು ನಮ್ಮ ಸಮುದಾಯದವರಲ್ಲಿ ನಮಗೆ ಸರಿಸಾಟಿಯಾಗಿರುವ ಯಾರನ್ನಾದರೂ ಕಳುಹಿಸು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು. "ಹೇ ಹಾಶಿಮಿನ ಕುಟುಂಬದವರೇ, ನಿಮ್ಮ ಹಕ್ಕಿಗಾಗಿ ಹೋರಾಡಿರಿ. ಅದಕ್ಕಾಗಿ ಅಲ್ಲಾಹನು ನಿಮ್ಮ ಪ್ರವಾದಿಯನ್ನು ನಿಯೋಜಿಸಿದ್ದಾನೆ. ಆ ಜನರಾದರೋ, ಅಲ್ಲಾಹನ ಪ್ರಕಾಶವನ್ನು ನಂದಿಸಲು ಅಸತ್ಯದೊಂದಿಗೆ ಬಂದಿರುವರು. ಹೀಗೆ ಹಝ್ರತ್ ಹಂಝ(ರ), ಹಝ್ರತ್ ಅಲಿ(ರ) ಮತ್ತು ಹಝ್ರತ್ ಉಬೈದ(ರ) ಎದ್ದು ಅವರ ಕಡೆಗೆ ಧಾವಿಸಿದರು. ಅವರು ಮುಖ ಕವಚವನ್ನು ಧರಿಸಿರುವ ಕಾರಣದಿಂದ ಅವರ ಮುಖಗಳು ಮರೆಯಾಗಿದ್ದುವು. ಆದ್ದರಿಂದ ಉತ್‌ಬ ಹೇಳಿದನು: ನೀವು ಯಾರೆಂದು ಗೊತ್ತಾಗಲು ಏನಾದರೂ ಹೇಳಿರಿ. ಹಝ್ರತ್ ಹಂಝ ಹೇಳಿದರು: ನಾನು ಹಂಝ ಬಿನ್ ಅಬ್ದುಲ್‌ಮುತಲಿಬ್, ಅಲ್ಲಾಹ್ ಮತ್ತು ಅವನ ಪೈಗಂಬರರ ಸಿಂಹವಾಗಿರುವೆನು. ಆಗ ಉತ್‌ಬ ಹೇಳಿದನು: ಸರಿಯಾದ ಸರಿಸಾಟಿ. ನಾನು ನಿಮ್ಮ ಶತ್ರುಗಳ ಸಿಂಹವಾಗಿರುವೆನು. ನಿನ್ನೊಂದಿಗಿರುವ ಇಬ್ಬರು ಯಾರು? ಹಝ್ರತ್ ಹಂಝ ಹೇಳಿದರು: ಅಲಿ ಬಿನ್ ಅಬೂತಾಲಿಬ್ ಮತ್ತು ಉಬೈದ ಬಿನ್ ಹಾರಿಸ್. ಉತ್‌ಬ ಹೇಳಿದನು: ಇವರಿಬ್ಬರೂ ಸಹ ಉತ್ತಮ ಸರಿಸಾಟಿಯಾಗಿರುವರು. ಅನಂತರ ಉತ್‌ಬ ತನ್ನ ಮಗನೊಡನೆ ಹೇಳಿದನು: ಹೇ ವಲೀದ್ ಏಳು. ಹೀಗೆ ಹಝ್ರತ್ ಅಲಿ(ರ) ಅವರೊಡನೆ ಸೆಣಸಾಡಲು ಹೊರಟರು. ಅವರಿಬ್ಬರು ಪರಸ್ಪರ ಖಡ್ಗಗಳನ್ನು ಚಲಾಯಿಸಿದರು. ಹಝ್ರತ್ ಅಲಿ(ರ) ವಲೀದ್‌ರನ್ನು ಕೊಂದರು. ಅನಂತರ ಉತ್‌ಬ ನಿಂತರು.ಅವರಿಬ್ಬರು ಪರಸ್ಪರ ಖಡ್ಗಗಳನ್ನು ಚಲಾಯಿಸಿದರು. ಹಝ್ರತ್ ಹಂಝ(ರ) ಅವರನ್ನು ಕೊಂದರು. ಅನಂತರ ಶೈಬ ನಿಂತರು. ಅವರೊಡನೆ ಹೋರಾಡಲು ಹಝ್ರತ್ ಉಬೈದ(ರ) ಧಾವಿಸಿದರು. ಹಝ್ರತ್ ಪೈಗಂಬರರ(ಸ) ಸಹಾಬಿವರ್ಯರಲ್ಲಿ ಎಲ್ಲರಿಗಿಂತ ಹಿರಿವಯಸ್ಸಿನ ಸಹಾಬಿ ಆ ದಿನಗಳಲ್ಲಿ ಹಝ್ರತ್ ಉಬೈದ(ರ) ಆಗಿದ್ದರು. ಹಝ್ರತ್ ಉಬೈದರ ಕಾಲಿನ ಮೇಲೆ ಖಡ್ಗದ ತುದಿಯಿಂದ ಶೈಬ ಹಲ್ಲೆ ನಡೆಸಿದರು. ಅದು ಹಝ್ರತ್ ಉಬೈದರ ಮೊಣಕಾಲಿನ ಮಾಂಸಕ್ಕೆ ತಗುಲಿತು ಮತ್ತು ಅದನ್ನು ಹರಿದು ಹಾಕಿತು. ಅನಂತರ ಹಝ್ರತ್ ಹಂಝ(ರ) ಮತ್ತು ಹಝ್ರತ್ ಅಲಿ(ರ) ಮುಂದಕ್ಕೆ ಧಾವಿಸಿಕೊಂಡು ಶೈಬರ ಮೇಲೆ ಹಲ್ಲೆ ನಡೆಸಿ ಅವರನ್ನು ಕೊಂದುಹಾಕಿದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅ, ಭಾಗ–2, ಪುಟ–257, ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್ ಲೆಬನಾನ್ 1996)

ಈ ವರದಿಯನ್ನು ಎರಡು ವರ್ಷಗಳಿಗೆ ಮುಂಚೆ ಸಹ ಹೇಳಿದ್ದೆ. ಅದರ ಕೆಲವು ಭಾಗವನ್ನು ವಿವರಿಸುತ್ತೇನೆ. ಇನ್ನೊಂದು ವರದಿಯಿದೆ. ಅದರ ಪ್ರಸ್ತಾಪ ಈ ರೀತಿಯಿದೆ. ಹಝ್ರತ್ ಅಲಿ(ರ) ವರದಿ ಮಾಡುತ್ತಾರೆ: ಉತ್‌ಬ ಬಿನ್ ರಬೀಅ ಮತ್ತು ಅವರ ಹಿಂದೆ ಅವರ ಮಗನು ಮತ್ತು ಸಹೋದರನು ಸಹ ಬಂದರು ಮತ್ತು ಹೀಗೆ ಕೇಳಿದರು: ಯಾರು ನಮ್ಮೊಡನೆ ಹೋರಾಡಲು ಬರುವರು? ಆಗ ಅನ್ಸಾರರ ಹಲವು ಯುವಕರು ಅದಕ್ಕೆ ಜವಾಬು ಕೊಟ್ಟರು. ನೀವು ಯಾರೆಂದು ಉತ್‌ಬ ಕೇಳಿದನು. ನಾವು ಅನ್ಸಾರರು ಎಂದು ಅವರು ಹೇಳಿದರು. ಉತ್‌ಬ ಹೇಳಿದನು: ನಮಗೆ ನಿಮ್ಮೊಡನೆ ಏನೂ ಕೆಲಸವಿಲ್ಲ. ನಾವು ಕೇವಲ ನಮ್ಮ ಚಿಕ್ಕಪ್ಪರ ಮಕ್ಕಳೊಡನೆ ಯುದ್ಧ ಮಾಡಲು ಉದ್ದೇಶಿಸುತ್ತಿದ್ದೇವೆ. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಹಂಝ ಎದ್ದೇಳು, ಹೇ ಅಲಿ, ನಿಲ್ಲು, ಹೇ ಉಬೈದ ಬಿನ್ ಹಾರಿಸ್ ಮುಂದಕ್ಕೆ ಧಾವಿಸು. ಹಂಝ ಉತ್‌ಬರ ಕಡೆಗೆ ಧಾವಿಸಿದರು. ಹಝ್ರತ್ ಅಲಿ(ರ) ಹೇಳುತ್ತಾರೆ: ನಾನು ಶೈಬರ ಕಡೆಗೆ ಧಾವಿಸಿದೆ. ಉಬೈದ ಮತ್ತು ವಲೀದ್ ಮಧ್ಯ ಸೆಣಸಾಟ ನಡೆಯಿತು. ಇಬ್ಬರೂ ಪರಸ್ಪರ ಗಾಯಗೊಳಿಸಿದರು. ಅನಂತರ ನಾವು ವಲೀದ್‌ರ ಬಳಿಗೆ ಹೋದೆವು ಮತ್ತು ಅವರನ್ನು ಕೊಂದು ಹಾಕಿದೆವು. ಉತ್‌ಬರನ್ನು ನಾವು ಯುದ್ಧ ಮೈದಾನದಿಂದ ಎತ್ತಿಕೊಂಡು ಬಂದೆವು. (ಸನನ್ ಅಬುದಾವೂದ್, ಕಿತಾಬುಲ್ ಜಿಹಾದ್, ಹದೀಸ್–2665)

ಬದ್ರ್ ಯುದ್ಧದ ಬಗ್ಗೆ ಹಝ್ರತ್ ಅಲಿ(ರ) ಹೀಗೆ ವಿವರಿಸುತ್ತಾರೆ: ಅದರಲ್ಲಿ ಸತ್ಯನಿಷೇಧಿಗಳ ಸಂಖ್ಯೆ ಮುಸ್ಲಿಮರಿಗಿಂತ ತುಂಬ ಹೆಚ್ಚಿಗೆ ಇತ್ತು. ರಾತ್ರಿ ಪೂರ್ತಿ ಹಝ್ರತ್ ಪೈಗಂಬರ್(ಸ) ಅಲ್ಲಾಹನ ಸನ್ನಿಧಿಯಲ್ಲಿ ವಿನಯ ಮತ್ತು ನಮ್ರತೆಯಿಂದ ದುಆಗಳನ್ನು ಮಾಡುವುದರಲ್ಲಿ ನಿರತರಾಗಿದ್ದರು. ಸತ್ಯನಿಷೇಧಿಗಳ ಸೈನ್ಯ ನಮಗೆ ಸಮೀಪವಾಗಿ ನಾವು ಅವರ ಮುಂದೆ ಪಂಕ್ತಿಬದ್ಧರಾಗಿ ನಿಂತಾಗ, ಅಚಾನಕ್ಕಾಗಿ ಒಬ್ಬ ವ್ಯಕ್ತಿಯ ಮೇಲೆ ನಮ್ಮ ದೃಷ್ಟಿ ಹೋಯಿತು. ಅವರು ಕೆಂಪು ಒಂಟೆಯ ಮೇಲೆ ಸವಾರರಾಗಿದ್ದರು. ಅವರು ಜನರ ನಡುವೆ ಸವಾರಿ ಮಾಡುತ್ತಾ ಹೋಗುತ್ತಿದ್ದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಹಂಝ, ಹೇ ಅಲಿ, ಕೆಂಪು ಒಂಟೆಯ ಮೇಲೆ ಸವಾರರಾಗಿರುವ ವ್ಯಕ್ತಿ ಯಾರೆಂದೂ ಮತ್ತು ಅವರು ಏನು ಹೇಳುತ್ತಿದ್ದಾರೆಂದೂ ಸತ್ಯನಿಷೇಧಿಗಳ ಸಮೀಪವಿರುವ ಯಾರನ್ನಾದರೂ ಕರೆದು ಕೇಳಿರಿ. ಏಕೆಂದರೆ, ಅವರಲ್ಲಿ ನಮ್ಮ ವಿರೋಧಿಗಳಿಗೆ ಒಳಿತಿನ ಉಪದೇಶವನ್ನು ಕೊಡಬಲ್ಲ ವ್ಯಕ್ತಿ ಯಾರಾದರೂ ಇರುವರಾದರೆ, ಕೆಂಪು ಒಂಟೆಯ ಮೇಲೆ ಸವಾರನಾಗಿರುವ ಆ ವ್ಯಕ್ತಿ ಕೊಡಬಲ್ಲನು. ಅಷ್ಟರಲ್ಲಿ ಹಝ್ರತ್ ಹಂಝ(ರ) ಸಹ ಬಂದರು. ಅವರು ಹೇಳಿದರು: ಅವರು ಉತ್‌ಬ ಬಿನ್ ರಬೀಅ ಆಗಿರುವರು. ಅವರು ಸತ್ಯನಿಷೇಧಿಗಳನ್ನು ಯುದ್ಧ ಮಾಡುವುದರಿಂದ ತಡೆಯುತ್ತಿದ್ದಾರೆ. ಇದಕ್ಕೆ ಉತ್ತರವಾಗಿ ಅಬೂಜಹಲ್, ಅವರೊಡನೆ ಹೇಳಿದನು: ನೀನು ಭೀರು ಆಗಿರುವೆ. ಯುದ್ಧ ಮಾಡುವುದಕ್ಕೆ ಹೆದರುತ್ತಿದ್ದೀಯ. ಉತ್‌ಬ ಆವೇಶದಿಂದ ಹೇಳಿದರು: ಯಾರು ಭೀರುವೆಂದು ಇಂದು ನೋಡುವಾ.

(ಮಸ್ನದ್ ಅಹ್ಮದ್, ಸಂಪುಟ–1, ಪುಟ–338–339, ಹದೀಸ್–948, ಆಲಿಮುಲ್ ಕುತುಬಲ್ ಇಲ್‌ಮಿಯ ಬೈರೂತ್ 1998)

ಹೇಗಿದ್ದರೂ ಅವರು ಯುದ್ಧದಲ್ಲಿ ಭಾಗವಹಿಸಿದರು.

ಹಝ್ರತ್ ಅಲಿ(ರ) ವರದಿ ಮಾಡುತ್ತಾರೆ: ಬದ್ರ್ ಯುದ್ಧದ ಸಂದರ್ಭದಲ್ಲಿ, ನನ್ನ ಮತ್ತು ಹಝ್ರತ್ ಅಬೂಬಕರರ(ರ) ಬಗ್ಗೆ ಹಝ್ರತ್ ಪೈಗಂಬರ್(ಸ) ಹೇಳಿದರು: ನಿಮ್ಮಿಬ್ಬರಲ್ಲಿ ಒಬ್ಬರ ಬಲಗಡೆ ಶ್ರೇಷ್ಠ ದೇವದೂತರಾದ ಹಝ್ರತ್ ಜಿಬ್ರೀಲ್ ಮತ್ತು ಮತ್ತೊಬ್ಬರ ಬಲಗಡೆ ಹಝ್ರತ್ ಮೀಕಾಈಲ್ ಮತ್ತು ಹಝ್ರತ್ ಇಸ್ರಾಫೀಲ್ ಇರುವರು. ಅವರು ಯುದ್ಧ ವೇಳೆಗಳಲ್ಲಿ ಹಾಜರಾಗುತ್ತಾರೆ ಮತ್ತು ಯುದ್ಧಪಂಕ್ತಿಯಲ್ಲಿ ಇರುತ್ತಾರೆ.

(ಅಲ್‌ಮಿಸ್ತದ್ರಿಕ್ ಅಲಸ್ಸಹೀಹೈನ್, ಭಾಗ–3, ಪುಟ–345, ಕಿತಾಬ್ ಮಾರಿಫತಿಸ್ಸಹಾನ ಹದೀಸ್–4711, ದಾರುಲ್ ಫೀಕರ್ ಲೆಬನಾನ್ 2002)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್‌ರು ಬದ್ರ್ ಯುದ್ಧದ ಬಗ್ಗೆ ಪ್ರಸ್ತಾಪಿಸುತ್ತಾ ಹೀಗೆ ಬರೆಯುತ್ತಾರೆ: ಹಝ್ರತ್ ಅಲಿ(ರ) ಹೇಳುತ್ತಾರೆ: ನನಗೆ ಯುದ್ಧದ ವೇಳೆಗಳಲ್ಲಿ ಹಝ್ರತ್ ಪೈಗಂಬರರ(ಸ) ಬಗ್ಗೆ ಚಿಂತೆಯಾಗುವಾಗ, ನಾನು ಓಡುತ್ತಾ ಡೇರೆಯ ಕಡೆಗೆ ಹೋಗುತ್ತಿದ್ದೆ. ಆದರೆ ನಾನು ಹೋದಾಗಲೆಲ್ಲ ಹಝ್ರತ್ ಪೈಗಂಬರರನ್ನು(ಸ) ಸಜ್‌ದ ಮಾಡುತ್ತಾ ನಡುಗುತ್ತಿರುವುದನ್ನು ಕಂಡೆನು. ಹಝ್ರತ್ ಪೈಗಂಬರರ(ಸ) ನಾಲಗೆಯಲ್ಲಿ ಈ ಪದಗಳು ಜಾರಿಯಲ್ಲಿದ್ದುವು.

**ಯಾ ಹಯ್ಯು, ಯಾ ಖಯ್ಯೂಮ್, ಯಾ ಹಯ್ಯೂ, ಯಾ ಖಯ್ಯೂಮ್,**

ಹೇ ನನ್ನ ಜೀವಂತ ದೇವಾ, ಹೇ ನನ್ನ ಜೀವದಾಯಕ ಪ್ರಭೂ. ಹಝ್ರತ್ ಪೈಗಂಬರರ(ಸ) ಈ ಸ್ಥಿತಿಯನ್ನು ಕಂಡು ಹಝ್ರತ್ ಅಬೂಬಕ್ಕರ್(ರ) ಸಂಕಟಗೊಳ್ಳುತ್ತಿದ್ದರು. ಕೆಲವೊಮ್ಮೆ ಹೀಗೆ ಹೇಳುತ್ತಿದ್ದರು: ಯಾ ರಸೂಲಲ್ಲಾಹ್, ನನ್ನ ತಂದೆ ತಾಯಿ ನಿಮಗೆ ಅರ್ಪಣವಾಗಲಿ. ನೀವು ಗಾಬರಿಗೊಳ್ಳಬೇಡಿರಿ. ಅಲ್ಲಾಹನು ತನ್ನ ವಾಗ್ದಾನವನ್ನು ಖಂಡಿತ ಈಡೇರಿಸುವೆನು. ಆದರೆ ಹಝ್ರತ್ ಪೈಗಂಬರ್(ಸ) ನರಂತರವಾಗಿ ದುಆ ಮಾಡುವುದರಲ್ಲಿ ಮಗ್ನರಾಗಿದ್ದರು. ಅಲ್ಲಾಹನ ವಾಗ್ದಾನಗಳು ಕೆಲವೊಮ್ಮೆ ಕೆಲವು ನಿಬಂಧನೆಗಳನ್ನು ಒಳಗೊಂಡಿರುತ್ತವೆ ಎಂಬ ಚಿಂತೆಯ ಕಾರಣದಿಂದ ಭಯಪಟ್ಟಿದ್ದರು.

(ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–361)

ಹಿಜರೀ 2ರಲ್ಲಿ ಹಝ್ರತ್ ಫಾತಿಮರೊಡನೆ(ರ) ಹಝ್ರತ್ ಅಲಿಯ(ರ) ವಿವಾಹ ನಡೆಯಿತು. ಹಝ್ರತ್ ಫಾತಿಮಾರನ್ನು(ರ) ತನಗೆ ನಿಕಾಹ್ ಮಾಡಿಸಿಕೊಡಲು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಡನೆ ಹಝ್ರತ್ ಅಲಿ(ರ) ವಿನಂತಿಸಿದರು. ಹಝ್ರತ್ ಪೈಗಂಬರ್(ಸ) ಸಂತೋಷದಿಂದ ಅದನ್ನು ಅಂಗೀಕರಿಸಿದರು. ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ: ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ) ಇಬ್ಬರೂ ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಬಂದು, ಹಝ್ರತ್ ಫಾತಿಮರನ್ನು ತಮಗೆ ನಿಕಾಹ್ ಮಾಡಿಸಿಕೊಡಲು ವಿನಂತಿಸಿದರು. ಆದರೆ ಹಝ್ರತ್ ಪೈಗಂಬರ್(ಸ) ಮೌನವಾಗಿದ್ದರು. ಅವರಿಗೆ ಯಾವುದೇ ಜವಾಬನ್ನು ಕೊಟ್ಟಿರಲಿಲ್ಲ. ಹಝ್ರತ್ ಅಲಿ(ರ) ವರದಿ ಮಾಡುತ್ತಾರೆ: ನಾನು ಹಝ್ರತ್ ಪೈಗಂಬರರ(ಸ) ಸನ್ನಿಧಿಗೆ ಹೋಗಿ ಕೇಳಿದೆ: ಹಝ್ರತ್ ಫಾತಿಮರನ್ನು ನನಗೆ ವಿವಾಹ ಮಾಡಿಸಿ ಕೊಡುವಿರಾ? ನಿನ್ನ ಬಳಿ ಮಹರ್ ಆಗಿ ಕೊಡಲು ಏನಾದರೂ ಇದೆಯೇ ಎಂದು ಹಝ್ರತ್ ಪೈಗಂಬರ್(ಸ) ಕೇಳಿದರು. ನನ್ನ ಕುದುರೆ ಮತ್ತು ಯುದ್ಧ ಕವಚವಿದೆ ಎಂದು ನಾನು ಹೇಳಿದೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಕುದುರೆ ನಿನಗೆ ಆವಶ್ಯವಾದುವುದಾಗಿದೆ. ಬೇಕಾದರೆ, ರಕ್ಷಾಕವಚವನ್ನು ಮಾರಾಟ ಮಾಡು. ಹೀಗೆ ನಾನು ನನ್ನ ರಕ್ಷಾ ಕವಚವನ್ನು ನಾನ್ನೂರು ಎಂಬತ್ತು ದಿರ್ಹಮಿಗೆ

ಮಾರಾಟ ಮಾಡಿ ಮಹರಿನ ವ್ಯವಸ್ಥೆಯನ್ನು ಮಾಡಿದೆನು. ಹಕ್ ಮಹರ್ ಮತ್ತೆ ಕೊಟ್ಟರಾಯಿತು, ನೋಡೋಣ ಎಂದು ಜನರು ಹೇಳಿಕೊಳ್ಳುವುದಿದೆ. ಆದರೆ ಹಕ್ ಮಹರಿಗಾಗಿ ಬೇಕಾಗಿರುವ ವ್ಯವಸ್ಥೆಯನ್ನು ಮೊದಲು ಮಾಡು ಎಂದು ಹಝ್ರತ್ ಪೈಗಂಬರ್(ಸ) ಹೇಳಿದ್ದರು. ಇದು ಕೂಡಲೇ ಸಿಗಬೇಕಾದ ಹಕ್ಕೆಂದು ಇದರಿಂದ ಗೊತ್ತಾಗುತ್ತದೆ. ನಾವು ಸಂತೋಷದಿಂದ ಇರುವವರಾದರೂ ಸ್ತ್ರೀಯರು ಹಕ್ ಮಹರ್ ಬೇಡುತ್ತಿರುತ್ತಾರೆ ಎಂದು ಕೆಲವರು ನನಗೆ ಪತ್ರ ಬರೆಯುತ್ತಾರೆ. ಅದು ಅವರ ಅವಕಾಶವಾದ ಕಾರಣದಿಂದ ಅವರು ಅದನ್ನು ಬೇಡುತ್ತಿರುವರು. ಅದನ್ನು ಆಗಲೇ ಕೊಡಬೇಕಾಗಿದೆ.ಇಲ್ಲದಿದ್ದರೆ, ಇದರಿಂದ ಜಗಳಗಳು ಶುರುವಾಗುತ್ತವೆ.

ಒಂದು ವರದಿಯ ಪ್ರಕಾರ, ಹಝ್ರತ್ ಅಲಿ(ರ) ರಕ್ಷಾಕವಚವನ್ನು ಹಝ್ರತ್ ಉಸ್ಮಾನ್‌ರಿಗೆ(ರ) ಮಾರಾಟ ಮಾಡಿದ್ದರು ಎಂದಿದೆ. ಹಝ್ರತ್ ಅಲಿಗೆ(ರ) ಹಝ್ರತ್ ಉಸ್ಮಾನ್(ರ) ರಕ್ಷಾಕವಚದ ಮೌಲ್ಯವನ್ನು ಕೊಟ್ಟು ರಕ್ಷಾಕವಚವನ್ನು ಮರಳಿ ಕೊಟ್ಟರು. ಹಝ್ರತ್ ಅಲಿ(ರ) ಹೇಳುತ್ತಾರೆ: ನಾನು ಆ ಹಣವನ್ನು ತೆಗೆದುಕೊಂಡು ಬಂದು ಹಝ್ರತ್ ಪೈಗಂಬರರ(ಸ) ಮಡಿಲಲ್ಲಿ ಇರಿಸಿದೆ. ಹಝ್ರತ್ ಪೈಗಂಬರ್(ಸ) ಅದರಿಂದ ಒಂದು ಮುಷ್ಟಿ ತೆಗೆದುಕೊಂಡು ಹಝ್ರತ್ ಬಿಲಾಲ್‌ಗೆ ಕೊಡುತ್ತಾ ಹೇಳಿದರು: ಇದರಿಂದ ಸ್ವಲ್ಪ ಸುಗಂಧದ್ರವ್ಯವನ್ನು ಖರೀದಿ ಮಾಡು. ಕೆಲವು ಜನರೊಡನೆ ಹೇಳಿದರು: ಹಝ್ರತ್ ಫಾತಿಮರಿಗಾಗಿ ಉಡುಗೊರೆಗಳನ್ನು ತಯಾರು ಮಾಡು. ಹೀಗೆ ಹಝ್ರತ್ ಫಾತಿಮರಿಗಾಗಿ ಒಂದು ಮಂಚ, ಚರ್ಮದ ಒಂದು ದಿಂಬಿಗೆ, ಅದರೊಳಗೆ ಖರ್ಜೂರ ಮರದ ತೊಗಟೆಗಳನ್ನು ತುಂಬಿಸಲಾಗಿತ್ತು. ಇದನ್ನೆಲ್ಲ ತಯಾರು ಮಾಡಲಾಯಿತು. ಒಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಅಲಿಯೊಂದಿಗೆ ಈ ವೈವಾಹಿಕ ಸಂಬಂಧ ಮಾಡುವಾಗ, ಹಝ್ರತ್ ಪೈಗಂಬರ್(ಸ) ಹೇಳಿದರು: ನನ್ನ ಪ್ರಭು, ಹೀಗೆ ಮಾಡಲು ನನ್ನನ್ನು ಆದೇಶಿಸಿದ್ದನು.

ವಿವಾಹದ ನಂತರ ಹಝ್ರತ್ ಅಲಿಯೊಡನೆ(ರ) ಹಝ್ರತ್ ಪೈಗಂಬರ್(ಸ) ಹೇಳಿದರು: ಫಾತಿಮ ನಿನ್ನ ಬಳಿಗೆ ಬಂದ ನಂತರ, ನಾನು ಬರುವ ವರೆಗೆ ಯಾವುದೇ ಮಾತನ್ನಾಡಬೇಡ. ಹೀಗೆ ಹಝ್ರತ್ ಫಾತಿಮ(ರ) ಹಝ್ರತ್ ಉಮ್ಮೇ ಐಮನ್‌ರೊಂದಿಗೆ ಬಂದರು. ಮನೆಯ ಒಂದು ಬದಿಯಲ್ಲಿ ಕುಳಿತುಕೊಂಡರು. ನಾನು ಸಹ ಒಂದು ಬದಿಯಲ್ಲಿ ಕುಳಿತುಕೊಂಡೆನು. ಅನಂತರ ಹಝ್ರತ್ ಪೈಗಂಬರ್(ಸ) ಬಂದು ಕೇಳಿದರು: ನನ್ನ ಸಹೋದರ ಇಲ್ಲಿದ್ದಾನೆಯೇ? ಹಝ್ರತ್ ಉಮ್ಮೇ ಐಮನ್ ಹೇಳಿದರು: ನಿಮ್ಮ ಸಹೋದರನೇ, ನೀವು ನಿಮ್ಮ ಮಗಳ ಮದುವೆಯನ್ನು ಅವರಿಗೆ ಮಾಡಿಸಿಕೊಟ್ಟಿದ್ದೀರಾ? ಹೌದೆಂದು ಹೇಳಿ ಫಾತಿಮರೊಡನೆ(ರ) ನೀರು ತರಲು ಹಝ್ರತ್ ಪೈಗಂಬರ್(ಸ) ಹೇಳಿದರು. ಇಂತಹ ಸಂಬಂಧದಲ್ಲಿ ಮದುವೆ ಅನುಮತನೀಯವಾದುದಾಗಿದೆ. ಹಝ್ರತ್ ಅಲಿ(ರ) ಹಝ್ರತ್ ಪೈಗಂಬರರ(ಸ) ಸ್ವಂತ ಸಹೋದರನಲ್ಲ. ಹಝ್ರತ್ ಫಾತಿಮಾ(ರ) ಮನೆಯಲ್ಲಿ ಇದ್ದ ಒಂದು ಪಾತ್ರೆಯಲ್ಲಿ ನೀರನ್ನು ತಂದಾಗ, ಹಝ್ರತ್ ಪೈಗಂಬರ್(ಸ) ಅದನ್ನು ಪಡೆದುಕೊಂಡು ಬಾಯಿ ಮುಕ್ಕಳಿಸಿದರು. ಹಝ್ರತ್ ಫಾತಿಮರೊಡನೆ ಮುಂದೆ ಬರಲು ಹೇಳಿದರು. ಅವರು ಮುಂದಕ್ಕೆ ಬಂದರು. ಹಝ್ರತ್ ಪೈಗಂಬರ್(ಸ) ಹಝ್ರತ್ ಫಾತಿಮಾರ ತಲೆಗೆ ಸ್ವಲ್ಪ ನೀರನ್ನು ಚೆಲ್ಲಿದರು ಮತ್ತು ಹೀಗೆ ದುಆ ಮಾಡಿದರು:

**ಅಲ್ಲಾಹುಮ್ಮ ಇನ್ನೀ ಅಈಧುಹಾ ಬಿಕ್ ವಧುರ್‍ರಿಯತಿಹಾ ಮಿನಶ್ಶೈತಾನಿರ್‍ರಜೀಂ.**

ಹೇ ಅಲ್ಲಾಹ್, ಇವಳನ್ನು ಮತ್ತು ಇವಳ ಮಕ್ಕಳನ್ನು ಶಪಿಸಲ್ಪಟ್ಟ ಶೈತಾನನಿಂದ ಸಂರಕ್ಷಿಸು. ಅನಂತರ ಹಝ್ರತ್ ಪೈಗಂಬರ್(ಸ) ಅವರೊಡನೆ ತಿರುಗಿ ನಿಲ್ಲಲು ಹೇಳಿದರು. ಅವರು ತಿರುಗಿದಾಗ, ಹಝ್ರತ್ ಪೈಗಂಬರ್(ಸ) ಅವರ ಹೆಗಲುಗಳ ನಡುವೆ ನೀರನ್ನು ಚೆಲ್ಲಿದರು. ಹೀಗೆಯೇ ಹಝ್ರತ್ ಅಲಿಯೊಡನೆ ಸಹ ಮಾಡಿದರು. ಹಝ್ರತ್ ಅಲಿಯೊಡನೆ(ರ) ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನ ನಾಮ ಮತ್ತು ಅನುಗ್ರಹದೊಂದಿಗೆ ನಿನ್ನ ಪತ್ನಿಯ ಬಳಿಗೆ ಹೋಗು.

ಇದೇ ರೀತಿಯಲ್ಲಿ ಹಝ್ರತ್ ಅಲಿಯರಿಂದ(ರ) ಹೀಗೆಯೂ ಒಂದು ವರದಿಯಿದೆ: ಹಝ್ರತ್ ಪೈಗಂಬರ್(ಸ) ಒಂದು ಪಾತ್ರೆಯಲ್ಲಿ ವುಝೂ ಮಾಡಿದರು. ಅನಂತರ ಆ ನೀರನ್ನು ಹಝ್ರತ್ ಅಲಿ(ರ) ಮತ್ತು ಹಝ್ರತ್ ಫಾತಿಮರ ಮೇಲೆ ಸಿಂಪರಿಸಿದರು ಮತ್ತು ಹೀಗೆ ದುಆ ಮಾಡಿದರು:

**ಅಲ್ಲಾಹುಮ್ಮ ಬಾರಿಕ್ ಲಹುಮಾ ಫೀ ಶಮ್‌ಲಿಹಿಮಾ.**

ಎಂದರೆ, ಹೇ ಅಲ್ಲಾಹ್, ಇವರಿಬ್ಬರಲ್ಲಿ ನೀನು ಅನುಗ್ರಹವಿರಿಸು. ಇವರಿಬ್ಬರೂ ಒಟ್ಟುಗೂಡುವಾಗಲೂ ಅನುಗ್ರಹಿಸು.

ಹಝ್ರತ್ ಆಯಿಶ(ರ) ಮತ್ತು ಹಝ್ರತ್ ಸಲ್ಮಾ ವರದಿ ಮಾಡುತ್ತಾರೆ: ಫಾತಿಮಾರನ್ನು ಶೃಂಗರಿಸಲು ಹಝ್ರತ್ ಪೈಗಂಬರ್(ಸ) ನಮ್ಮೊಡನೆ ನಿರ್ದೇಶಿಸಿದರು. ನಾವು ಶೃಂಗರಿಸಿ ಅವರನ್ನು ಹಝ್ರತ್ ಅಲಿಯ(ರ) ಬಳಿಗೆ ಕೊಂಡು ಹೋದೆವು. ನಾವು ಮನೆಯ ಕಡೆಗೆ ಹೊರಟೆವು. ನಾವು ಬತ್‌ಹಾದ ಸುತ್ತುಮುತ್ತಲಿನ ಮೃದು ಮಣ್ಣನ್ನು ಅವರಿಗೆ ಲೇಪಿಸಿದೆವು. ಖರ್ಜೂರದ ನಾರುಗಳಿಂದ ಎರಡು ತಲೆದಿಂಬುಗಳನ್ನು ತುಂಬಿಸಿದೆವು. ನಾವು ಅವುಗಳನ್ನು ನಮ್ಮ ಕೈಗಳಿಂದ ಒಲಿದೆದ್ದೆವು. ಅನಂತರ ನಾವು ಖರ್ಜೂರ ಮತ್ತು ಒಣದ್ರಾಕ್ಷೆ ತಿನ್ನಲಿಕ್ಕಾಗಿ ಮತ್ತು ಸಿಹಿ ಪಾನೀಯ ಕುಡಿಯಲಿಕ್ಕಾಗಿಯೂ ಇರಿಸಿದೆವು. ಬಟ್ಟೆಗಳನ್ನು ಮತ್ತು ನೀರಿನ ತುಂಬುವ ತೊಗಲ ಚೀಲವನ್ನು ತೂಗಿಹಾಕಲಿಕ್ಕಾಗಿ ಒಂದು ಮರದ ತುಂಡನ್ನು ತೆಗೆದುಕೊಂಡು ಅದನ್ನು ಕೊಠಡಿಯ ಒಂದು ಬದಿಯಲ್ಲಿ ಇರಿಸಿದೆವು. ನಾವು ಹಝ್ರತ್ ಫಾತಿಮರ ವಿವಾಹಕ್ಕಿಂತ ಉತ್ತಮ ವಿವಾಹ ನೋಡಿರಲಿಲ್ಲ. ವಲೀಮದಲ್ಲಿ ಖರ್ಜೂರ, ಬಾರ್ಲಿ, ಪನೀರ್ ಮತ್ತು ಹೈಸ್ ಇತ್ತು. ಖರ್ಜೂರ, ಪನೀರು, ತುಪ್ಪ ಇತ್ಯಾದಿಗಳನ್ನು ಮಿಶ್ರಣ ಮಾಡಿ ತಯಾರಿಸುವ ತಿನಿಸಿಗೆ ಹೈಸ್ ಎಂದು ಹೇಳಲಾಗುತ್ತದೆ. ಹಝ್ರತ್ ಅಸ್ಮಾ ಬಿನ್ತ್ ಉಮೈಸ್ ವರದಿ ಮಾಡುತ್ತಾರೆ: ಆ ಕಾಲದಲ್ಲಿ ಈ ವಲೀಮ ಔತಣಕ್ಕಿಂತ ಉತ್ತಮವಾದ ವಲೀಮ ಬೇರೆ ನಡೆದಿರಲಿಲ್ಲ. (ಶರಹ್ ಅಲ್‌ಅಲಾಮ ಝುರ್‌ಖಾನ ಅಲಲ್ ಮವಾಹಿಲಿದ್ದುನಿಯ, ಸಂಪುಟ–2, ಪುಟ–357–367, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1996) (ಸುನನ್ ಇಬ್ನೆ ಮಾಜ, ಕಿತಾಬುಸ್ಸಿಕಾಹ್, ಹದೀಶ್–1911) (ತಾರೀಖುಲ್ ಖಮೀಸ್, ಭಾಗ–8, ಪುಟ–19, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1990) (ಲುಗಾತುಲ್ ಹದೀಸ್, ಸಂಪುಟ–1, ಪುಟ–172)

ಹಝ್ರತ್ ಅಲಿ(ರ) ಮತ್ತು ಹಝ್ರತ್ ಫಾತಿಮರ ವಿವಾಹದ ವಿಶದ ವಿವರಣೆಯನ್ನು ಕೊಡುತ್ತಾ ಸೀರತ್ ಖಾತಮುನ್ನಬಿಯ್ಯೀನ್ ಹೀಗೆ ಬರೆಯಲಾಗಿದೆ: ಹಝ್ರತ್ ಪೈಗಂಬರರ(ಸ) ಮತ್ತು ಹಝ್ರತ್ ಖದೀಜರಲ್ಲಿ(ರ) ಜನಿಸಿದ ಮಕ್ಕಳಲ್ಲಿ ಹಝ್ರತ್ ಫಾತಿಮಾ(ರ) ಎಲ್ಲರಿಗಿಂತ ಕಿರಿಯರಾಗಿದ್ದರು. ಹಝ್ರತ್ ಪೈಗಂಬರರಿಗೆ(ಸ) ತನ್ನ ಮಕ್ಕಳಲ್ಲಿ ಹಝ್ರತ್ ಫಾತಿಮ(ರ) ಹೆಚ್ಚು ಪ್ರಿಯರಾಗಿದ್ದರು. ತನ್ನ ಸ್ವಂತ ಗುಣವೈಶಿಷ್ಟ್ಯಗಳ ಕಾರಣದಿಂದ ಈ ವಿಶಿಷ್ಟ ಪ್ರೀತಿಗೆ ಅವರು ಎಲ್ಲರಿಗಿಂತ ಅರ್ಹರಾಗಿದ್ದರು. ಅವರಿಗೆ ಹದಿನೈದು ವರ್ಷ ಪ್ರಾಯವಾದಾಗ, ಅವರಿಗೆ ವಿವಾಹದ ಆಲೋಚನೆಗಳು ಬರಲು ಶುರುವಾಗಿದ್ದುವು. ಮೊತ್ತಮೊದಲು ಹಝ್ರತ್ ಫಾತಿಮರಿಗಾಗಿ, ಹಝ್ರತ್ ಅಬೂಬಕರ್(ರ) ವಿನಂತಿಸಿದರು. ಆದರೆ ಹಝ್ರತ್ ಪೈಗಂಬರ್(ಸ) ಸಮ್ಮತಿಸಲಿಲ್ಲ. ಅನಂತರ ಹಝ್ರತ್ ಉಮರ್(ರ) ವಿನಂತಿಸಿದರು. ಆದರೆ ಅವರ ವಿನಂತಿ ಸಹ ಅಂಗೀಕರಿಸಲ್ಪಡಲಿಲ್ಲ. ಹಝ್ರತ್ ಪೈಗಂಬರ್(ಸ) ಮಗಳನ್ನು ಹಝ್ರತ್ ಅಲಿಗೆ(ರ) ವಿವಾಹ ಮಾಡಿಸಿಕೊಡಲು ಬಯಸುತ್ತಿದ್ದಾರೆ ಎಂದು ಅರಿತ ಇವರಿಬ್ಬರೂ, ಫಾತಿಮಾರಿಗಾಗಿ ಹಝ್ರತ್ ಪೈಗಂಬರರೊಡನೆ(ಸ) ವಿನಂತಿಸಲು ಹಝ್ರತ್ ಅಲಿಯೊಡನೆ ಹೇಳಿದರು. ಬಹುಶಃ ಮೊದಲಿನಿಂದಲೇ ಹಝ್ರತ್ ಫಾತಿಮಾರನ್ನು ವಿವಾಹ ಮಾಡಲು ಇಚ್ಛಿಸಿದ್ದರೂ, ಲಜ್ಜೆಯ ಕಾರಣದಿಂದ ಸುಮ್ಮನಿದ್ದ ಹಝ್ರತ್ ಅಲಿ(ರ), ಬೇಗನೇ ಹಝ್ರತ್ ಪೈಗಂಬರರ(ಸ) ಸನ್ನಿಧಿಗೆ ಹೋಗಿ ವಿನಂತಿಸಿದರು. ಮತ್ತೊಂದು ಕಡೆ, ಹಝ್ರತ್ ಫಾತಿಮರ ವಿವಾಹ ಹಝ್ರತ್ ಅಲಿಯೊಡನೆ ಆಗಬೇಕೆಂದು ಹಝ್ರತ್ ಪೈಗಂಬರರಿಗೆ(ಸ) ದಿವ್ಯವಾಣಿ ಮೂಲಕ ಸೂಚನೆ ಲಭಿಸಿತ್ತು. ಆದ್ದರಿಂದ ಹಝ್ರತ್ ಅಲಿ(ರ) ವಿನಂತಿಸಿದಾಗ, ಹಝ್ರತ್ ಪೈಗಂಬರ್(ಸ) ಹೇಳಿದರು: ನನಗೆ ಇದರ ಬಗ್ಗೆ ಮುಂಚಿನಿಂದಲೇ ದೈವಿಕ ಸೂಚನೆ ಲಭಿಸಿದೆ. ಅನಂತರ ಹಝ್ರತ್ ಪೈಗಂಬರ್(ಸ) ಹಝ್ರತ್ ಫಾತಿಮರೊಡನೆ ಇದರ ಕುರಿತು ಕೇಳಿದಾಗ, ಅವರು ಲಜ್ಜೆಯ ಕಾರಣದಿಂದ ಮೌನವಾಗಿದ್ದರು. ಇದು ಸಹ ಒಂದು ರೀತಿಯ ಸಮ್ಮತಿಯ ಪ್ರಕಟಣೆಯಾಗಿದೆ. ಹೀಗೆ ಹಝ್ರತ್ ಪೈಗಂಬರ್(ಸ) ಮುಹಾಜಿರರ ಮತ್ತು ಅನ್ಸಾರರ ಒಂದು ಸಂಘವನ್ನು ಒಟ್ಟುಗೂಡಿಸಿಕೊಂಡು ಹಝ್ರತ್ ಅಲಿ(ರ) ಮತ್ತು ಹಝ್ರತ್ ಫಾತಿಮರ ನಿಕಾಹ್ ಓದಿದರು. ಇದು ಹಿಜರೀ 2ರ ಆರಂಭ ಅಥವಾ ಮಧ್ಯದ ಘಟನೆಯಾಗಿದೆ. ಇದರ ನಂತರ ಬದ್ರ್ ಯುದ್ಧ ನಡೆದಿರುವುದಾದರೆ, ಸುಮಾರು ಹಿಜರೀ 2, ಧುಲ್‌ಹಜ್ಜ ತಿಂಗಳಲ್ಲಿ ವಿವಾಹ ಬೀಳ್ಕೊಡುಗೆ ನಡೆಸಲು ತೀರ್ಮಾನ ಮಾಡಲಾಗಿತ್ತು. ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿರನ್ನು(ರ) ಕರೆದುಕೊಂಡು ಕೇಳಿದರು: ನಿನ್ನ ಬಳಿ ಮಹರ್ ಆಗಿ ನೀಡಲು ಏನಾದರೂ ಇದೆಯೇ ಇಲ್ಲವೋ?

ಕಳೆದ ಖುತ್‌ಬದಲ್ಲಿ ನಾನು ವಿವರಿಸಿದ ತೋಟದ ಘಟನೆ ಈ ವಿವಾಹಕ್ಕೆ ಮುಂಚಿನ ಘಟನೆಯಾಗಿತ್ತು. ಅದು ಮೊದಲಿನ ಘಟನೆಯಾಗಿತ್ತು ಎಂದು ನಾನು ಸರಿಯಾಗಿಯೇ ಹೇಳಿದ್ದೆ. ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿರನ್ನು ಕರೆದುಕೊಂಡು ಕೇಳಿದರು: ನಿನ್ನ ಬಳಿ ಮಹರ್ ಆಗಿ ನೀಡಲು ಏನಾದರೂ ಇದೆಯೇ ಇಲ್ಲವೋ? ಹಝ್ರತ್ ಅಲಿ(ರ) ಹೇಳಿದರು: ಯಾ ರಸೂಲಲ್ಲಾಹ್, ನನ್ನ ಬಳಿ ಏನೂ ಇಲ್ಲ. ಹಝ್ರತ್ ಪೈಗಂಬರ್(ಸ) ಕೇಳಿದರು: ಬದ್ರ್ ಯುದ್ಧದ ಸಂಪತ್ತಿನಿಂದ ನಾನು ನಿನಗೆ ನೀಡಿದ್ದ ರಕ್ಷಾಕವಚ ಏನಾಯಿತು? ಅದು ಇದೆಯೆಂದು ಹಝ್ರತ್ ಅಲಿ(ರ) ಹೇಳಿದರು. ಅದನ್ನೇ ಕೊಂಡು ಬಾ ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಹೀಗೆ ಈ ರಕ್ಷಾಕವಚವನ್ನು ನಾನ್ನೂರ ಎಂಬತ್ತು ದಿರ್ಹಮಿಗೆ ಮಾರಾಟ ಮಾಡಲಾಯಿತು. ಹಝ್ರತ್ ಪೈಗಂಬರ್(ಸ) ಇದೇ ಹಣದಿಂದ ವಿವಾಹದ ಖರ್ಚುಗಳನ್ನು ಮಾಡಿದರು. ಹಝ್ರತ್ ಪೈಗಂಬರ್(ಸ) ಹಝ್ರತ್ ಫಾತಿಮಾಗೆ ಬೀಳ್ಕೊಡುವಾಗ ಉಡುಗೊರೆಯಾಗಿ ಕೊಟ್ಟ ವಸ್ತುಗಳು ಇವುಗಳಾಗಿವೆ: ಬಳ್ಳಿಯ ಚಾದರ, ಒಂದು ಚರ್ಮದ ಹಾಸಿಗೆ, ಅದರಲ್ಲಿ ಖರ್ಜೂರದ ಒಣಗಿದ ಎಲೆಗಳನ್ನು ತುಂಬಿಸಲಾಗಿತ್ತು ಮತ್ತು ಒಂದು ನೀರು ತುಂಬಿಸಿಡುವ ತೊಗಲ ಚೀಲವಿತ್ತು. ಒಂದು ವರದಿಯ ಪ್ರಕಾರ ಹಝ್ರತ್ ಫಾತಿಮರಿಗೆ ಕೊಟ್ಟ ಉಡುಗೊರೆಗಳಲ್ಲಿ ಒಂದು ಬೀಸುಗಲ್ಲು ಸಹ ಇತ್ತು ಎಂದಿದೆ. ಈ ಎಲ್ಲ ಸಾಮಾನುಗಳು ಆದ ನಂತರ, ಮನೆಯ ಬಗ್ಗೆ ಚಿಂತೆ ಉಂಟಾಯಿತು. ಹಝ್ರತ್ ಅಲಿ(ರ) ಅಲ್ಲಿಯ ವರೆಗೂ ಹಝ್ರತ್ ಪೈಗಂಬರರ(ಸ) ಮಸೀದಿಯ ಯಾವುದೇ ಒಂದು ಕೊಠಡಿಯಲ್ಲಿ ಇರುತ್ತಿದ್ದರು. ಆದರೆ ಮದುವೆ ನಂತರ, ಪತಿ ಪತ್ನಿಯರಿಗೆ ವಾಸಿಸಲು ಬೇರೊಂದು ಮನೆಯ ಆವಶ್ಯಕತೆಯಿತ್ತು. ಹೀಗೆ ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿಯೊಡನೆ(ರ) ಹೇಳಿದರು: ಈಗ ನೀನು ನಿಮ್ಮಿಬ್ಬರಿಗಾಗಿ ಯಾವುದಾದರೂ ಮನೆಯನ್ನು ಹುಡುಕು. ಹಝ್ರತ್ ಅಲಿ(ರ) ತಾತ್ಕಾಲಿಕವಾಗಿ ಒಂದು ಮನೆಯ ವ್ಯವಸ್ಥೆಯನ್ನು ಮಾಡಿದರು. ಅದರಲ್ಲಿ ಹಝ್ರತ್ ಫಾತಿಮಾರ ವಿವಾಹ ನಡೆಯಿತು. ವಿವಾಹದ ನಂತರ ಹಝ್ರತ್ ಪೈಗಂಬರ್(ಸ) ಅವರ ಮನೆಗೆ ಹೋದರು. ಸ್ವಲ್ಪ ನೀರನ್ನು ಪಡೆದುಕೊಂಡು ದುಆ ಮಾಡಿ, ಆ ನೀರನ್ನು ಹಝ್ರತ್ ಫಾತಿಮ(ರ) ಮತ್ತು ಹಝ್ರತ್ ಅಲಿಯರ ಮೇಲೆ ಹೀಗೆ ಹೇಳುತ್ತಾ ಚೆಲ್ಲಿದರು.

**ಅಲ್ಲಾಹುಮ್ಮ ಬಾರಿಕ್ ಫೀಹಿಮಾ ವ ಬಾರಿಕ್ ಲಹುಮಾ ನಸ್‌ಲುಹುಮಾ.**

ಹೇ ನನ್ನ ಅಲ್ಲಾಹ್, ನೀನು ಇವರ ಅನ್ಯೋನ್ಯ ಸಂಬಂಧವನ್ನು ಅನುಗ್ರಹಿಸು. ಇವರಿಬ್ಬರಿಗೂ ಬೇರೆ ಜನರೊಡನೆ ಇರುವ ಸಂಬಂಧವನ್ನು ಸಹ ಅನುಗ್ರಹಿಸು ಮತ್ತು ಇವರಿಬ್ಬರ ಮಕ್ಕಳಲ್ಲಿಯೂ ಅನುಗ್ರಹ ಸುರಿಸು. ಅನಂತರ ಹಝ್ರತ್ ಪೈಗಂಬರ್(ಸ) ಈ ನವ ವಧುವರರನ್ನು ಬಿಟ್ಟುಕೊಂಡು ಮರಳಿಬಂದರು. ಅನಂತರ ಒಂದು ದಿನ ಹಝ್ರತ್ ಪೈಗಂಬರ್(ಸ) ಒಂದು ದಿನ ಹಝ್ರತ್ ಫಾತಿಮಾರ ಮನೆಗೆ ಹೋದರು. ಆಗ ಹಝ್ರತ್ ಪೈಗಂಬರರೊಡನೆ ಹಝ್ರತ್ ಫಾತಿಮ(ರ) ಹೇಳಿದರು: ಹಾರಿಸ ಬಿನ್ ನುಅ್‌ಮಾನ್ ಅನ್ಸಾರಿಯ ಬಳಿ ಕೆಲವು ಮನೆಗಳಿವೆ. ಅವರ ಯಾವುದಾದರೂ ಮನೆಯನ್ನು ಖಾಲಿಮಾಡಿಕೊಡಲು ಹೇಳಿರಿ. ಹಝ್ರತ್ ಪೈಗಂಬರ್(ಸ) ಹೇಳಿದರು: ನಮಗಾಗಿ ಹಲವು ಮನೆಗಳನ್ನು ಅವರು ಮೊದಲೇ ಖಾಲಿ ಮಾಡಿಯಾಗಿದೆ. ಇನ್ನು ಅವರೊಡನೆ ಕೇಳುವುದು ನಾಚಿಕೆಯ ಸಂಗತಿಯಾಗಿದೆ. ಹಾರಿಸರಿಗೆ ಇದರ ಬಗ್ಗೆ ಹೇಗೋ ಗೊತ್ತಾದಾಗ, ಅವರು ಓಡುತ್ತಾ ಬಂದು ಹಝ್ರತ್ ಪೈಗಂಬರರೊಡನೆ ಹೇಳಿದರು: ಯಾ ರಸೂಲಲ್ಲಾಹ್, ನನ್ನದೆಲ್ಲವೂ ನಿಮ್ಮದೇ ಆಗಿವೆ. ಅಲ್ಲಾಹನಾಣೆ, ನನ್ನ ಬಳಿ ಇರುವ ವಸ್ತುಗಳಿಗಿಂತ ನನಗೆ ಹೆಚ್ಚು ಸಂತೋಷ ಉಂಟುಮಾಡುವ ವಿಷಯ ನನ್ನಿಂದ ನೀವು ಸ್ವೀಕರಿಸುವ ವಸ್ತುಗಳಾಗಿವೆ. ಅನಂತರ ಆ ನಿಷ್ಠಾವಂತ ಸಹಾಬಿ ತನ್ನ ಒಂದು ಮನೆಯನ್ನು ಖಾಲಿಮಾಡಿ ನೀಡಿದರು. ಹಝ್ರತ್ ಅಲಿ(ರ) ಮತ್ತು ಹಝ್ರತ್ ಫಾತಿಮ(ರ) ಅಲ್ಲಿ ನಿಂತರು. (ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–455–456)

ಹಝ್ರತ್ ಅಲಿ(ರ) ಮತ್ತು ಹಝ್ರತ್ ಫಾತಿಮಾ(ರ) ಬಡತನದಲ್ಲಿದ್ದರೂ ಇದ್ದುವುದರಲ್ಲಿ ತೃಪ್ತಿ ಹೊಂದುವ ಕಾರ್ಯದಲ್ಲಿ ಮಾದರಿಯಾಗಿದ್ದರು. ಹದೀಸುಗಳಲ್ಲಿ ಇದರ ಪ್ರಸ್ತಾಪ ಸಿಗುತ್ತದೆ. ಹಝ್ರತ್ ಅಲಿ(ರ) ವರದಿ ಮಾಡುತ್ತಾರೆ: ಬೀಸುವ ಕಲ್ಲನ್ನು ಉಪಯೋಗಿಸುತ್ತಿರುವ ಕಾರಣದಿಂದ ಕೈ ನೋವಾಗುತ್ತಿರುವುದರ ಬಗ್ಗೆ ಒಮ್ಮೆ ಹಝ್ರತ್ ಫಾತಿಮಾ(ರ) ದೂರಿದರು. ಹಝ್ರತ್ ಪೈಗಂಬರರ(ಸ) ಬಳಿಗೆ ಕೆಲವು ಯುದ್ಧ ಕೈದಿಗಳನ್ನು ತರಲಾಗಿತ್ತು. ಆಗ ಹಝ್ರತ್ ಪೈಗಂಬರರ(ಸ) ಮನೆಗೆ ಹಝ್ರತ್ ಫಾತಿಮ(ರ) ಹೋದರು. ಆದರೆ ಹಝ್ರತ್ ಪೈಗಂಬರ್(ಸ) ಅಲ್ಲಿರಲಿಲ್ಲ. ಹಝ್ರತ್ ಆಯಿಶರೊಡನೆ(ರ) ಹಝ್ರತ್ ಫಾತಿಮ(ರ) ತಾನು ಬಂದಿದ್ದ ಉದ್ದೇಶವನ್ನು ಹೇಳಿದರು. ಹಝ್ರತ್ ಪೈಗಂಬರ್(ಸ) ಮನೆಗೆ ಬಂದಾಗ, ಹಝ್ರತ್ ಫಾತಿಮ(ರ) ಮನೆಗೆ ಬಂದಿದ್ದ ವಿವರವನ್ನು ಹಝ್ರತ್ ಆಯಿಶ(ರ) ಹೇಳಿಕೊಟ್ಟರು. ಹಝ್ರತ್ ಅಲಿ(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ನಮ್ಮ ಬಳಿಗೆ ಬಂದರು. ಆಗ ನಾವು ಹಾಸಿಗೆಯಲ್ಲಿ ಮಲಗಿದ್ದೆವು. ನಾವು ನಿಲ್ಲಲು ಹೋದಾಗ, ತಮ್ಮ ಜಾಗಗಳಲ್ಲೇ ಇರಲು ಹಝ್ರತ್ ಪೈಗಂಬರ್(ಸ) ಹೇಳಿದರು. ಅನಂತರ ಹಝ್ರತ್ ಪೈಗಂಬರ್(ಸ) ನಮ್ಮ ಮಧ್ಯ ಕುಳಿತುಕೊಂಡರು. ಅವರ ಕಾಲುಗಳ ತಂಪು ನನ್ನ ಎದೆಯಲ್ಲಿ ಅನುಭವವಾಗುತ್ತಿತ್ತು. ನಂತರ ಹೇಳಿದರು: ನೀವು ಕೇಳಿದ್ದಕ್ಕಿಂತ ಉತ್ತಮವಾದುದನ್ನು ನಾನು ನಿಮಗೆ ಹೇಳಿಕೊಡಲೇ? ಅದೇನೆಂದರೆ, ನೀವು ಹಾಸಿಗೆಗಳಲ್ಲಿ ಮಲಗುವಾಗ, 34 ಸಲ ಅಲ್ಲಾಹು ಅಕ್ಬರ್, 33 ಬಾರಿ ಸುಬ್‌ಹಾನಲ್ಲಾಹ್, 33 ಸಲ ಅಲ್‌ಹಮ್ದುಲಿಲ್ಲಾಹ್ ಎಂದು ಹೇಳಿರಿ.ಇದು ನಿಮ್ಮಿಬ್ಬರಿಗೂ ಕೆಲಸಕ್ಕಾಗಿ ಸೇವಕನು ಲಭಿಸುವುದಕ್ಕಿಂತ ಉತ್ತಮವಾಗಿದೆ.

ಹಝ್ರತ್ ಅಬೂಹುರೈರ ವರದಿ ಮಾಡುತ್ತಾರೆ: ಹಝ್ರತ್ ಫಾತಿಮ(ರ) ಹಝ್ರತ್ ಪೈಗಂಬರರ ಸನ್ನಿಧಿಯಲ್ಲಿ ಸೇವಕನನ್ನು ಪಡೆಯಲು ಹಾಜರಾದರು. ಕೆಲಸಗಳ ಕಷ್ಟತೆಗಳ ಬಗ್ಗೆ ದೂರಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ನೀನು ಯಾವುದೇ ಸೇವಕನನ್ನು ನನ್ನ ಬಳಿ ಕಾಣಲಾರಿರಿ. ಎಂದರೆ, ಈ ರೀತಿಯಲ್ಲಿ ನಿನಗೆ ಸೇವಕನು ಸಿಗುವಂತಿಲ್ಲ. ಅವರು ಸೇವಕನನ್ನು ನೀಡಲು ಬಯಸಿರಲಿಲ್ಲ. ಹಝ್ರತ್ ಅಲಿಗೆ(ರ) ಯುದ್ಧ ಸಂಪತ್ತಲ್ಲಿ ಹಕ್ಕಿತ್ತು. ಆದರೆ ಹಝ್ರತ್ ಪೈಗಂಬರರಿಗೆ(ಸ) ಕೊಡಲು ಇಷ್ಟವಿರಲಿಲ್ಲ. ಹಝ್ರತ್ ಪೈಗಂಬರ್(ಸ) ಹೇಳಿದರು: ಸೇವಕನಿಗಿಂತ ಉತ್ತಮವಾದ ಸಂಗತಿಯನ್ನು ನಾನು ನಿನಗೆ ಹೇಳಿಕೊಡಲೇ? ನೀವು ಮಲಗಲು ಹಾಸಿಗೆಗೆ ಹೋಗುವಾಗ, 33 ಸಲ ಸುಬ್‌ಹಾನಲ್ಲಾಹ್, 33 ಸಲ ಅಲ್‌ಹಮ್ದುಲಿಲ್ಲಾಹ್ ಮತ್ತು 34 ಸಲ ಅಲ್ಲಾಹು ಅಕ್ಬರ್ ಹೇಳು. ಇದು ಸಹೀಹ್ ಮುಸ್ಲಿಮಿನ ವರದಿಯಾಗಿದೆ.

ಹಝ್ರತ್ ಪೈಗಂಬರರ(ಸ) ಜೀವನಚರಿತ್ರೆಯನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಬೀಸುಗಲ್ಲಿನಿಂದ ಕಡೆಯುವುದರಿಂದ ಅವರಿಗೆ ತುಂಬ ಕಷ್ಟವಾಗುತ್ತಿದೆ ಎಂದು ಹಝ್ರತ್ ಫಾತಿಮ(ರ) ದೂರಿದರು. ಅದೇ ವೇಳೆ ಹಝ್ರತ್ ಪೈಗಂಬರರ(ಸ) ಬಳಿಗೆ ಕೆಲವು ಗುಲಾಮರನ್ನು ತರಲಾಗಿತ್ತು. ಹಝ್ರತ್ ಫಾತಿಮ(ರ) ಹಝ್ರತ್ ಪೈಗಂಬರರ(ಸ) ಬಳಿಗೆ ಹೋಗಿದ್ದರು. ಆದರೆ ಹಝ್ರತ್ ಪೈಗಂಬರ್(ಸ) ಅಲ್ಲಿರಲಿಲ್ಲ. ಆದ್ದರಿಂದ ಬಂದ ಕಾರಣವನ್ನು ಹಝ್ರತ್ ಆಯಿಶರೊಡನೆ(ರ) ಹೇಳಿಕೊಂಡು ಹಝ್ರತ್ ಫಾತಿಮಾ ಮನೆಗೆ ಮರಳಿಹೋದರು. ಹಝ್ರತ್ ಪೈಗಂಬರ್(ಸ) ಮನೆಗೆ ಬಂದಾಗ, ಹಝ್ರತ್ ಫಾತಿಮಾ ಬಂದಿದ್ದ ಬಗ್ಗೆ ಹಝ್ರತ್ ಆಯಿಶ(ರ) ಹೇಳಿದರು. ಹಝ್ರತ್ ಪೈಗಂಬರ್(ಸ) ನಮ್ಮ ಬಳಿಗೆ ಬಂದರು. ಆಗ ನಾವು ಹಾಸಿಗೆಯಲ್ಲಿ ಮಲಗಿದ್ದೆವು. ಹಝ್ರತ್ ಪೈಗಂಬರ್(ಸ) ಬರುವುದನ್ನು ಕಂಡಾಗ ನಾನು ನಿಲ್ಲಲು ಹೋದೆ. ಆದರೆ ತಮ್ಮ ಜಾಗಗಳಲ್ಲೇ ಮಲಗಿರಲು ಹಝ್ರತ್ ಪೈಗಂಬರ್(ಸ) ಹೇಳಿದರು. ಅನಂತರ ಹಝ್ರತ್ ಪೈಗಂಬರ್(ಸ) ನಮ್ಮ ಮಧ್ಯ ಕುಳಿತುಕೊಂಡರು. ಅವರ ಕಾಲುಗಳ ತಂಪು ನನ್ನ ಎದೆಯಲ್ಲಿ ಅನುಭವವಾಗುತ್ತಿತ್ತು. ಹಝ್ರತ್ ಪೈಗಂಬರ್(ಸ) ಹೇಳಿದರು: ನೀವು ಕೇಳಿದ್ದಕ್ಕಿಂತ ಉತ್ತಮವಾದದ್ದನ್ನು ನಾನು ನಿಮಗೆ ಹೇಳಿಕೊಡಲೇ? ಅದೇನೆಂದರೆ, ನೀವು ಹಾಸಿಗೆಗಳಲ್ಲಿ ಮಲಗುವಾಗ, 34 ಸಲ ಅಲ್ಲಾಹು ಅಕ್ಬರ್, 33 ಬಾರಿ ಸುಬ್‌ಹಾನಲ್ಲಾಹ್, 33 ಸಲ ಅಲ್‌ಹಮ್ದುಲಿಲ್ಲಾಹ್ ಎಂದು ಹೇಳಿರಿ. ಇದು ನಿಮ್ಮಿಬ್ಬರಿಗೂ ಕೆಲಸಕ್ಕಾಗಿ ಸೇವಕನು ಲಭಿಸುವುದಕ್ಕಿಂತ ಉತ್ತಮವಾಗಿದೆ. (ಸಹೀಹ್ ಮುಸ್ಲಿಮ್, ಹದೀಸ್–6915,1918)

ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಘಟನೆಯ ಬಗ್ಗೆ ಬರೆಯುತ್ತಾರೆ: ಸಂಪತ್ತುಗಳನ್ನು ವಿತರಣೆ ಮಾಡುವುದರಲ್ಲಿ ಹಝ್ರತ್ ಪೈಗಂಬರ್(ಸ) ಎಷ್ಟು ಮುನ್ನೆಚ್ಚರಿಕೆ ವಹಿಸುತ್ತಿದ್ದರು ಎಂದು ಇದರಿಂದ ಗೊತ್ತಾಗುತ್ತದೆ. ಹಝ್ರತ್ ಫಾತಿಮಗೆ ಒಬ್ಬ ಸೇವಕನ ಆವಶ್ಯಕತೆ ಇರುವುದಾದರೂ, ಬೀಸುಗಲ್ಲಿನಂದ ಅರಿಯುವುದರ ಕಾರಣದಿಂದ ಅವರ ಕೈಗಳು ನೋವಾಗುತ್ತಿದ್ದರೂ ಹಝ್ರತ್ ಪೈಗಂಬರ್(ಸ) ಅವರಿಗೆ ಸೇವಕನನ್ನು ನೀಡಲಿಲ್ಲ. ಬದಲಿಗೆ ದುಆ ಮಾಡಲು ಹೇಳಿದರು ಮತ್ತು ಅಲ್ಲಾಹನ ಸ್ಮರಣೆಯ ಕಡೆಗೆ ಗಮನಹರಿಸಿದರು. ಹಝ್ರತ್ ಪೈಗಂಬರ್(ಸ) ಬಯಸುವರಾದರೆ, ಹಝ್ರತ್ ಫಾತಿಮರಿಗೆ(ರ) ಸೇವಕನನ್ನು ಒದಗಿಸಿ ಕೊಡಬಹುದಾಗಿತ್ತು. ಏಕೆಂದರೆ, ವಿತರಣೆಗಾಗಿ ಹಝ್ರತ್ ಪೈಗಂಬರರ(ಸ) ಬಳಿಗೆ ತರಲಾಗುತ್ತಿದ್ದ ಸಂಪತ್ತುಗಳನ್ನು ಸಹಾಬಿಯರಿಗೆ ವಿತರಣೆ ಮಾಡಲಿಕ್ಕಾಗಿಯೇ ತರಲಾಗುತ್ತಿತ್ತು. ಹಝ್ರತ್ ಅಲಿಗೂ(ರ) ಇದರಲ್ಲಿ ಹಕ್ಕಿರಬಹುದು. ಹಝ್ರತ್ ಫಾತಿಮ(ರ) ಸಹ ಇದರ ಹಕ್ಕುದಾರರಾಗಿದ್ದರು. ಆದರೆ ಹಝ್ರತ್ ಪೈಗಂಬರ್(ಸ) ಜಾಗ್ರತೆ ವಹಿಸಿದರು. ಈ ಸಂಪತ್ತುಗಳನ್ನು ತನ್ನ ಆಪ್ತರಿಗೂ ಸಂಬಂಧಿಕರಿಗೂ ಕೊಡಲು ಇಷ್ಟಪಡಲಿಲ್ಲ. ಏಕೆಂದರೆ, ನಂತರದ ಕಾಲದಲ್ಲಿ, ಜನರು ಇದನ್ನು ಬೇರೆ ರೀತಿಯಲ್ಲಿ ಅರ್ಥ ಮಾಡಿಕೊಳ್ಳಲು ಸಾಧ್ಯತೆಯಿತ್ತು. ಜನಸಾಮಾನ್ಯರ ಸಂಪತ್ತನ್ನು ಉಪಯೋಗಿಸುವುದು ಸರಿಯೆಂದು ಅರಸರು ಭಾವಿಸುತ್ತಾರೆ. ಒಟ್ಟಿನಲ್ಲಿ, ಎಚ್ಚರ ವಹಿಸುತ್ತಾ, ಹಝ್ರತ್ ಪೈಗಂಬರರ(ಸ) ಬಳಿಗೆ ವಿತರಿಸುವ ಉದ್ದೇಶದಿಂದ ತರಲಾಗಿದ್ದ ಗುಲಾಮರಲ್ಲಿ ಮತ್ತು ಸೇವಕರಲ್ಲಿ ಯಾರನ್ನೂ ಹಝ್ರತ್ ಫಾತಿಮರಿಗೆ ಕೊಡಲಿಲ್ಲ. ಈ ಸಂದರ್ಭದಲ್ಲಿ ನೆನಪಿಡಬೇಕಾದ ಸಂಗತಿಯೇನೆಂದರೆ, ಈ ಸಂಪತ್ತುಗಳಲ್ಲಿ ಹಝ್ರತ್ ಪೈಗಂಬರರಿಗೆ(ಸ) ಮತ್ತು ಪೈಗಂಬರರ(ಸ) ಸಂಬಂಧಿಕರಿಗೆ ಅಲ್ಲಾಹನು ಒಂದು ಭಾಗವನ್ನು ನಿಶ್ಚಯಿಸಿದ್ದನು. ಇದರಿಂದ ಹಝ್ರತ್ ಪೈಗಂಬರ್(ಸ) ಖರ್ಚು ಮಾಡುತ್ತಿದ್ದರು. ಅವರ ಸಂಬಂಧಿಕರಿಗೂ ನೀಡುತ್ತಿದ್ದರು.ಆದರೆ, ಅವರ ಭಾಗವಾಗಿ ಬರದ ಯಾವುದನ್ನೂ ಖಂಡಿತ ಪಡೆಯುತ್ತಿರಲಿಲ್ಲ ಮತ್ತು ತನ್ನ ಅತ್ಯಂತ ಆಪ್ತ ಸಂಬಂಧಿಕರಿಗೂ ಕೊಡುತ್ತಿರಲಿಲ್ಲ. ಆದರೆ ಬೈತುಲ್ ಮಾಲಿನ ಇಂತಹ ಸಂರಕ್ಷಕರಾದ ಅರಸನನ್ನು ತೋರಿಸಲು ಯಾರಿಗಾದರೂ ಸಾಧ್ಯವಿದೆಯೇ? ಇದಕ್ಕೆ ಉದಾಹರಣೆ, ಕೇವಲ ಪರಿಶುದ್ಧ ಪೈಗಂಬರರ(ಸ) ಅನುಯಾಯಿಗಳಲ್ಲಿ ಸಿಗಬಹುದು. ಇತರ ಧರ್ಮಗಳಲ್ಲಿ ಇದಕ್ಕೆ ಉದಾಹರಣೆಗಳನ್ನು ಸಿಗಲಾರದು. (ಸೀರತುನ್ನಬಿ, ಅನ್ವಾರುಲ್ ಉಲೂಮ್, ಸಂಪುಟ–1, ಪುಟ–544–545)

ಹಝ್ರತ್ ಅಲಿ ಬಿನ್ ಅಬೂತಾಲಿಬ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಒಂದು ರಾತ್ರಿ ನನ್ನ ಮತ್ತು ಹಝ್ರತ್ ಪೈಗಂಬರರ(ಸ) ಪುತ್ರಿಯಾದ ಹಝ್ರತ್ ಫಾತಿಮರ(ರ) ಬಳಿಗೆ ಬಂದರು. ನೀವು ನಮಾಝ್ ನಿರ್ವಹಿಸುವುದಿಲ್ಲವೇ ಎಂದು ಹಝ್ರತ್ ಪೈಗಂಬರ್(ಸ) ಕೇಳಿದರು. ಆಗ ನಾನು ಹೇಳಿದೆ: ಯಾ ರಸೂಲಲ್ಲಾಹ್, ನಮ್ಮ ಜೀವ ಅಲ್ಲಾಹನ ಕೈಯಲ್ಲಿ ಇದೆ. ಅವನು ಎಬ್ಬಿಸಲು ಬಯಸುವಾಗ ನಾವು ನಿದ್ದೆಯಿಂದ ಎಚ್ಚರಗೊಳ್ಳುವೆವು. ಆಗ ಹಝ್ರತ್ ಪೈಗಂಬರ್(ಸ) ಇದಕ್ಕೆ ಉತ್ತರವೇನೂ ನೀಡದೆ ಮರಳಿ ಹೋದರು. ಇಲ್ಲಿ ನಮಾಝ್ ಎಂಬುವುದರಿಂದ ತಹಜ್ಜುದ್ ನಮಾಝ್ ಉದ್ದೇಶಿಸಲಾಗಿತ್ತು. ತಹಜ್ಜುದ್ ಸಮಯದಲ್ಲಿ ಎಚ್ಚರಗೊಳ್ಳದಿದ್ದರೆ, ಅದು ಅಲ್ಲಾಹನ ಇಚ್ಛೆಯಾಗಿದೆ. ಅಲ್ಲಾಹನು ಇಚ್ಛಿಸುವನಾದರೆ ನಮ್ಮನ್ನು ಎಬ್ಬಿಸುವನು. ಅವನು ಎಬ್ಬಿಸುವಾಗ ನಾನು ತಹಜ್ಜುದ್ ನಿರ್ವಹಿಸುತ್ತೇವೆ ಎಂದು ಅವರು ಹೇಳಿದರು. ಹಝ್ರತ್ ಪೈಗಂಬರ್(ಸ) ಇದನ್ನು ಕೇಳಿ ಅವರೊಡನೆ ವಾಗ್ವಾದಕ್ಕೆ ಇಳಿಯಲಿಲ್ಲ. ಮರಳಿ ಹೋದರು. ಆದರೆ ಹೋಗುವಾಗ ಹಝ್ರತ್ ಪೈಗಂಬರ್(ಸ) ತನ್ನ ತೊಡೆಗೆ ಕೈಯಿಂದ ಹೊಡೆಯುತ್ತಾ ಹೀಗೆ ಹೇಳುತ್ತಿದ್ದರು:

**ವಕಾನಲ್ ಇನ್ಸಾನು ಅಕ್ಸರ ಶೈಇನ್ ಜದಲ.**

ಎಂದರೆ, ಮನುಷ್ಯನಾದರೋ ಅತ್ಯಂತ ಜಗಳಗಂಟಿಯಾಗಿದ್ದಾನೆ. (ಸಹೀಹ್ ಬುಖಾರಿ, ಕಿತಾಬುತ್ತಹಜ್ಜುದ್, ಹದೀಸ್–1127)

ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಘಟನೆಯನ್ನು ವಿವರಿಸುತ್ತಾ ಹೇಳುತ್ತಾರೆ: ಒಂದು ರಾತ್ರಿ, ಹಝ್ರತ್ ಪೈಗಂಬರ್(ಸ) ತನ್ನ ಅಳಿಯನಾದ ಹಝ್ರತ್ ಅಲಿ(ರ) ಮತ್ತು ಮಗಳಾದ ಹಝ್ರತ್ ಫಾತಿಮರ ಮನೆಗೆ ಹೋದರು. ತಹಜ್ಜುದ್ ನಮಾಝ್ ನಿರ್ವಹಿಸುತ್ತೀರಾ? ಎಂದರೆ, ಅರ್ಧ ರಾತ್ರಿ ಸಮಯದಲ್ಲಿ ಎದ್ದುಕೊಂಡು ನಿರ್ವಹಿಸುವ ನಮಾಝ್. ಹಝ್ರತ್ ಅಲಿ(ರ) ಹೇಳಿದರು: ನಿರ್ವಹಿಸಲು ಪ್ರಯತ್ನಿಸುತ್ತೇವೆ. ಆದರೆ ಅಲ್ಲಾಹನ ಇಚ್ಛೆ ಪ್ರಕಾರ ಕೆಲವೊಮ್ಮೆ ಎಚ್ಚರಗೊಳ್ಳದಿದ್ದರೆ, ತಹಜ್ಜುದ್ ಬಿಟ್ಟುಹೋಗುತ್ತದೆ. ಹಝ್ರತ್ ಪೈಗಂಬರ್(ಸ) ಹೇಳಿದರು: ತಹಜ್ಜುದ್ ನಿರ್ವಹಿಸುವ ಅಭ್ಯಾಸ ಮಾಡಿರಿ. ಹೀಗೆ ಹೇಳಿ ತನ್ನ ಮನೆ ಕಡೆಗೆ ಹೊರಟುಹೋದರು. ಹೋಗುವಾಗ, ಪದೇ ಪದೇ ಹೀಗೆ ಹೇಳುತ್ತಿದ್ದರು:

**ವಕಾನಲ್ ಇನ್ಸಾನು ಅಕ್ಸರ ಶೈಇನ್ ಜದಲ.**

ಇದು ಪವಿತ್ರ ಖುರ್‌ಆನಿನ ಒಂದು ವಚನವಾಗಿದೆ. ಇದರ ತಾತ್ಪರ್ಯವೇನೆಂದರೆ, ಮನುಷ್ಯನು ಹೆಚ್ಚಾಗಿ ತನ್ನ ತಪ್ಪುಗಳನ್ನು ಸಮ್ಮತಿಸಲು ತಯಾರಾಗುವುದಿಲ್ಲ. ಹಲವು ರೀತಿಯಲ್ಲಿ ವಾದಿಸಿಕೊಂಡು ತನ್ನ ತಪ್ಪುಗಳನ್ನು ಮರೆಮಾಚುತ್ತಾನೆ. ಎಂದರೆ, ನಮ್ಮಿಂದ ಕೆಲವೊಮ್ಮೆ ತಪ್ಪುಗಳು ಆಗುತ್ತವೆ ಎಂದು ಹಝ್ರತ್ ಅಲಿ(ರ) ಮತ್ತು ಹಝ್ರತ್ ಫಾತಿಮ(ರ) ಹೇಳುವುದಕ್ಕೆ ಬದಲಾಗಿ, ಅಲ್ಲಾಹನ ಇಚ್ಛೆ ಪ್ರಕಾರ ನಾವು ಎಚ್ಚರಗೊಳ್ಳಲಿಲ್ಲ. ನಾವು ನಿದ್ದೆ ಹೋದೆವು ಎಂದು ಹೇಳಿ ತಮ್ಮ ತಪ್ಪುಗಳನ್ನು ಅಲ್ಲಾಹನ ಮೇಲೆ ಆರೋಪಿಸಿದರು. (ದೀಬಾಚ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ–20, ಪುಟ–389–390)

ಈ ಘಟನೆಯನ್ನು ಇನ್ನೂ ವಿವರವಾಗಿ ಹಝ್ರತ್ ಮುಸ್ಲಿಹ್ ಮೌಊದ್(ರ) ವಿವರಿಸುತ್ತಾರೆ: ಹಝ್ರತ್ ಅಲಿ(ರ) ತನ್ನ ಒಂದು ಘಟನೆಯನ್ನು ವಿವರಿಸುತ್ತಾರೆ. ಒಂದು ಸಂದರ್ಭದಲ್ಲಿ ಹಝ್ರತ್ ಪೈಗಂಬರರಿಗೆ(ಸ) ಹಝ್ರತ್ ಅಲಿ(ರ) ತರ್ಕದ ಶೈಲಿಯಲ್ಲಿ ಅಥವಾ ವಾಗ್ವಾದದ ಶೈಲಿಯಲ್ಲಿ ಉತ್ತರಕೊಟ್ಟಾಗ, ಹಝ್ರತ್ ಪೈಗಂಬರ್(ಸ) ಕೋಪಗೊಳ್ಳುವುದಕ್ಕೆ ಬದಲಾಗಿ, ಬೇಸರಗೊಳ್ಳುವುದಕ್ಕೆ ಬದಲಿಗೆ, ಅತಿ ಸೂಕ್ಷ್ಮವಾದ ಒಂದು ರೀತಿಯನ್ನು ಕೈಗೊಂಡರು. ಹಝ್ರತ್ ಅಲಿ(ರ) ತನ್ನ ಜೀವಿತದ ಕೊನೆಯ ದಿನಗಳ ತನಕ ಇದರ ಮಾಧುರ್ಯವನ್ನು ಸವಿದಿರಬಹುದು. ಅವರು ಅದರಿಂದ ಪಡೆದ ಆನಂದ ಅವರದ್ದೇ ಹಕ್ಕಾಗಿದೆ. ಹಝ್ರತ್ ಪೈಗಂಬರ್(ಸ) ತನ್ನ ಅನಿಷ್ಟತೆಯನ್ನು ಪ್ರಕಟಿಸಿದ ರೀತಿಯನ್ನು ಅರಿಯುವಾಗ, ಈಗಲೂ ಸೂಕ್ಷ್ಮ ದೃಷ್ಟಿಯಿಂದ ನೋಡುವವರಿಗೆ ಆಶ್ಚರ್ಯವಾಗುತ್ತದೆ. ಬುಖಾರಿಯ ವರದಿಯಲ್ಲಿ ಹಝ್ರತ್ ಅಲಿ(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಒಂದು ರಾತ್ರಿ ನನ್ನ ಮತ್ತು ಪೈಗಂಬರರ ಪುತ್ರಿಯಾದ ಫಾತಿಮಝ್ಝುಹ್‌ರರ ಬಳಿಗೆ ಬಂದರು. ಹಝ್ರತ್ ಪೈಗಂಬರ್(ಸ) ಕೇಳಿದರು: ನೀವು ತಹಜ್ಜುದ್ ನಮಾಝ್ ನಿರ್ವಹಿಸುವುದಿಲ್ಲವೇ? ನಾನು ಹೇಳಿದೆ: ಯಾ ರಸೂಲಲ್ಲಾಹ್, ನಮ್ಮ ಜೀವಗಳು ಅಲ್ಲಾಹನ ಹಿಡಿತದಲ್ಲಿದೆ. ಅವನು ಎಬ್ಬಿಸಲು ಇಚ್ಛಿಸುವಾಗ ಅವನು ಎಬ್ಬಿಸುವನು. ಹಝ್ರತ್ ಪೈಗಂಬರ್(ಸ) ನನ್ನ ಈ ಮಾತನ್ನು ಕೇಳಿ ಮರಳಿಹೋದರು. ನನ್ನೊಡನೆ ಏನೂ ಹೇಳಲಿಲ್ಲ. ಅವರು ತಿರುಗಿ ನಿಂತುಕೊಂಡರು. ಅವರು ತನ್ನ ತೊಡೆಗೆ ಕೈಯಿಂದ ಹೊಡೆಯುತ್ತಾ ಹೀಗೆ ಹೇಳುತ್ತಿರುವುದನ್ನು ನಾನು ಕೇಳಿದೆ: ಮನುಷ್ಯನು ಹೆಚ್ಚಿನ ಸಂಗತಿಗಳಲ್ಲಿ ತರ್ಕಿಸುತ್ತಾನೆ. ಅಲ್ಲಾಹ್, ಅಲ್ಲಾಹ್, ಎಂತಹ ಮನೋಹರವಾದ ರೀತಿಯಲ್ಲಿ, ಹೀಗೆ ಹೇಳಬಾರದಿತ್ತು ಎಂದು ಹಝ್ರತ್ ಅಲಿಗೆ(ರ) ಹಝ್ರತ್ ಪೈಗಂಬರ್(ಸ) ತಿಳಿಹೇಳಿದರು. ಬೇರೆ ಯಾರಾದರೂ ಆಗಿದ್ದರೆ, ವಾಗ್ವಾದಕ್ಕೆ ಇಳಿಯುತ್ತಿದ್ದರು. ನನ್ನ ಸ್ಥಾನವನ್ನು ಮತ್ತು ಪದವಿಯನ್ನು ನೋಡು, ಅನಂತರ ನಿನ್ನ ಈ ಉತ್ತರವನ್ನು ನೋಡು. ನನ್ನ ಮಾತನ್ನು ಈ ರೀತಿಯಲ್ಲಿ ರದ್ದುಮಾಡಲು ನಿನಗೆ ಯಾವ ಹಕ್ಕಿದೆ ಎಂದು ಹೇಳುತ್ತಿದ್ದರು. ಕನಿಷ್ಠಪಕ್ಷ, ತರ್ಕಿಸಲು ಶುರುಮಾಡುತ್ತಿದ್ದರು. ಮನುಷ್ಯನು ನಿರ್ಬಂಧಕ್ಕೆ ಒಳಪಟ್ಟಿದ್ದಾನೆ ಮತ್ತು ಅವನ ಎಲ್ಲ ಸಂಗತಿಗಳು ಅಲ್ಲಾಹನ ಹಿಡಿತದಲ್ಲಿದೆ ಎಂದು ಹೇಳುವ ನಿನ್ನ ಈ ವಾದ ಸರಿಯಲ್ಲ. ಅವನು ಇಚ್ಛಿಸುವನಾದರೆ ನಮಾಝ್ ನಿರ್ವಹಿಸಲು ಸೌಭಾಗ್ಯ ನೀಡುತ್ತಾನೆ ಅಥವಾ ನೀಡದೇ ಇರುತ್ತಾನೆ ಎಂದು ಹೇಳುವುದು ಸರಿಯಲ್ಲ. ಒತ್ತಾಯದಿಂದ ಮಾಡುತ್ತಾನೆ ಎಂಬುದು ಪವಿತ್ರ ಖುರ್‌ಆನಿಗೆ ವಿರುದ್ಧವಾದ ಸಂಗತಿಯಾಗಿದೆ ಎಂದೆಲ್ಲ ವಾದಿಸಬಹುದಾಗಿತ್ತು. ಆದರೆ ಹಝ್ರತ್ ಪೈಗಂಬರ್(ಸ) ಈ ಎರಡೂ ರೀತಿಯನ್ನು ಅವಲಂಬಿಸಲಿಲ್ಲ. ಅವರೊಡನೆ ಕೋಪಗೊಳ್ಳಲೂ ಇಲ್ಲ, ಹಝ್ರತ್ ಅಲಿ ಹೇಳಿದ್ದು ಸರಿಯಲ್ಲವೆಂದು ಹೇಳಿಕೊಳ್ಳಲೂ ಇಲ್ಲ. ಬದಲಿಗೆ ಒಂದು ಬದಿಗೆ ಹೋಗಿಕೊಂಡು ಹಝ್ರತ್ ಅಲಿಯ ಈ ಉತ್ತರದ ಬಗ್ಗೆ ಅಚ್ಚರಿ ವ್ಯಕ್ತಪಡಿಸಿದರು. ಮನುಷ್ಯನ ಸ್ವಭಾವ ವಿಚಿತ್ರವಾದುದಾಗಿದೆ. ಪ್ರತಿಯೊಂದು ಮಾತನ್ನು ತನ್ನ ಪರವಾಗಿ ಮಾಡಿಸಿಕೊಂಡು ತರ್ಕಿಸಲು ಶುರುಮಾಡುತ್ತಾನೆ. ಸತ್ಯದಲ್ಲಿ, ಇತರರ ನೂರಾರು ವಾಗ್ವಾದಗಳಿಂದ ಲಭಿಸದ ಪ್ರಯೋಜನಗಳು, ಹಝ್ರತ್ ಪೈಗಂಬರರು ಹೇಳಿದುದರಿಂದ ಲಭಿಸಿದುವು.

ಈ ಹದೀಸಿನಿಂದ ಹಲವು ಕಾರ್ಯಗಳು ನಮಗೆ ತಿಳಿದುಬರುತ್ತವೆ. ಇದು ಹಝ್ರತ್ ಪೈಗಂಬರರ(ಸ) ಸ್ವಭಾವವೈಶಿಷ್ಟ್ಯಗಳ ವಿವಿಧ ಮಜಲುಗಳ ಮೇಲೆ ಬೆಳಕುಬೀರುತ್ತದೆ. ಅದರ

ಬಗ್ಗೆ ಇಲ್ಲೇ ಹೇಳುವುದು ಸರಿಯೆಂದು ತೋರುತ್ತದೆ. ಮೊದನೆಯದಾಗಿ, ಹಝ್ರತ್ ಪೈಗಂಬರರಿಗೆ(ಸ) ಧಾರ್ಮಿಕತೆಯ ಬಗ್ಗೆ ಎಷ್ಟು ಗಮನವಿತ್ತು ಎಂದು ಗೊತ್ತಾಗುತ್ತದೆ. ರಾತ್ರಿ ಸಮಯದಲ್ಲಿ ಹೋಗಿ ತನ್ನ ಆಪ್ತರ ಬಗ್ಗೆ ಕಾಳಜಿ ವಹಿಸುತ್ತಿದ್ದರು. ಹಲವಾರು ಜನರು ಸ್ವತಃ ಒಳ್ಳೆಯವರಾಗಿರುತ್ತಾರೆ. ಜನರಿಗೂ ಒಳಿತನ್ನು ಉಪದೇಶಿಸುತ್ತಾರೆ. ಆದರೆ ಅವನ ಮನೆಯ ಸ್ಥಿತಿ ಕೆಟ್ಟದಾಗಿರುತ್ತದೆ. ತಮ್ಮ ಮನೆಯ ಜನರನ್ನು ಸಹ ಸುಧಾರಣೆ ಮಾಡುವ ಗುಣವನ್ನು ಅವರು ಹೊಂದಿರುವುದಿಲ್ಲ. ಇಂತಹ ಜನರ ಬಗ್ಗೆ ದೀಪದ ಕೆಳಗೆ ಅಂಧಕಾರವೆಂದು ಹೇಳಲಾಗುತ್ತದೆ. ಎಂದರೆ, ದೀಪ ತನ್ನ ಸುತ್ತುಮುತ್ತಲಿನ ಎಲ್ಲ ವಸ್ತುಗಳ ಮೇಲೆ ಪ್ರಕಾಶ ಬೀರುತ್ತದೆ. ಆದರೆ ಅದರ ಕೆಳಗೆ ಇರುಳು ಇರುತ್ತದೆ. ಅದೇ ರೀತಿಯಲ್ಲಿ ಜನರು ಇತರರನ್ನು ಉಪದೇಶಿಸುತ್ತಾ ಹೋಗುತ್ತಾರೆ. ಆದರೆ ಸ್ವಂತ ಮನೆಯ ಬಗ್ಗೆ ಚಿಂತಿಸುವುದಿಲ್ಲ. ನಮ್ಮ ಬೆಳಕಿನಂದ ನಮ್ಮ ಮನೆಯ ಸದಸ್ಯರು ಪ್ರಯೋಜನ ಪಡೆಯುತ್ತಿದ್ದಾರೆಯೇ ಎಂಬುದರ ಬಗ್ಗೆ ಆಲೋಚಿಸುವುದಿಲ್ಲ. ಆದರೆ ಹಝ್ರತ್ ಪೈಗಂಬರರಿಗೆ(ಸ)ಇದರ ಬಗ್ಗೆ ಗಮನವಿತ್ತು ಎಂದು ಗೊತ್ತಾಗುತ್ತದೆ. ಯಾವ ಬೆಳಕಿನಿಂದ ಲೋಕವನ್ನು ಪ್ರಕಾಶಿಸಲು ಬಯಸುತ್ತಿದ್ದರೋ ಅದೇ ಬೆಳಕಿನಿಂದ ತನ್ನ ಆಪ್ತರು ಸಹ ಪ್ರಕಾಶಿತಗೊಳ್ಳಬೇಕೆಂದು ಬಯಸಿದ್ದರು. ಇದರ ಬಗ್ಗೆ ಅವರ ಪ್ರತಿಜ್ಞೆ ಸಹ ಪಡೆಯುತ್ತಿದ್ದರು. ಅವರನ್ನು ಪರೀಕ್ಷಿಸುತ್ತಿದ್ದರು ಮತ್ತು ಅನುಭವ ಮಾಡಿಸಿ ಕೊಡುತ್ತಿದ್ದರು. ಆಪ್ತರ ತರಬೇತಿ ಮಾಡುವುದು ಎಂಬುದು ಉನ್ನತ ದರ್ಜೆಯ ಕೌಶಲವಾಗಿದೆ. ಈ ಗುಣ ಅವರಲ್ಲಿ ಇದ್ದಿಲ್ಲದಿದ್ದರೆ, ಒಂದು ಅಮೂಲ್ಯವಾದ ಸಂಗತಿಯ ಕೊರತೆ ಅವರಲ್ಲಿ ಉಂಟಾಗುತ್ತಿತ್ತು.

ಎರಡನೆಯದಾಗಿ, ಹಝ್ರತ್ ಪೈಗಂಬರ್(ಸ) ಲೋಕದ ಮುಂದಿರಿಸುವ ಅಧ್ಯಾಪನೆಯ ಮೇಲೆ ಅವರಿಗೆ ಸ್ವತಃ ದೃಢವಿಶ್ವಾಸವಿತ್ತು. ಒಂದು ಕ್ಷಣಮಾತ್ರಕ್ಕೂ ಅದರ ಮೇಲೆ ಅವರಿಗೆ ಸಂಶಯವಿರಲಿಲ್ಲ. ಲೋಕವನ್ನು ಮಂಕುಗೊಳಿಸಲು ಮತ್ತು ತನ್ನ ಆಡಳಿತವನ್ನು ಸ್ಥಾಪಿಸಲು ಹಝ್ರತ್ ಪೈಗಂಬರ್(ಸ) ಈ ಎಲ್ಲ ಕಾರ್ಯಗಳನ್ನು ಮಾಡುತ್ತಿದ್ದರು, ಸತ್ಯದಲ್ಲಿ ಅವರಿಗೆ ಯಾವುದೇ ದಿವ್ಯವಾಣಿ ಅವತೀರ್ಣವಾಗುತ್ತಿರಲಿಲ್ಲವೆಂದು ಜನರು ಆಕ್ಷೇಪಿಸುತ್ತಾರೆ. ಆದರೆ ಸತ್ಯ ಇದಲ್ಲ. ಬದಲಿಗೆ ಹಝ್ರತ್ ಪೈಗಂಬರರಿಗೆ(ಸ) ತಾನು ಪ್ರವಾದಿ ಮತ್ತು ಅಲ್ಲಾಹನಿಂದ ನಿಯೋಜಿತ ವ್ಯಕ್ತಿಯೆಂಬುದರ ಬಗ್ಗೆ ಇದ್ದಷ್ಟು ದೃಢವಿಶ್ವಾಸ ಲೋಕದ ಯಾರಿಗಾದರೂ ಇದ್ದದ್ದಾಗಿ ತೋರಿಸಲು ಸಾಧ್ಯವಲ್ಲ. ಏಕೆಂದರೆ, ತೋರಿಕೆಗಾಗಿ ಕೆಲಸಮಾಡಿ ತನ್ನ ಸತ್ಯತೆಯನ್ನು ಸ್ಥಾಪಿಸಲು ಜನರೆಡೆಯಲ್ಲಿ ನಡೆಯಲು ಯಾರಿಗೆ ಬೇಕಾದರೂ ಸಾಧ್ಯವಿರಬಹುದು. ಆದರೆ, ರಾತ್ರಿ ಸಮಯದಲ್ಲಿ ಒಬ್ಬ ವ್ಯಕ್ತಿ ತನ್ನ ಮಗಳು ಮತ್ತು ಅಳಿಯನ ಬಳಿಗೆ ಹೋಗಿ ಅವರು ತಹಜ್ಜುದ್ ನಮಾಝ್ ಸಹ ನಿರ್ವಹಿಸುತ್ತಾರೆಯೇ ಎಂದು ಬಂದು ನೋಡುವುದರಿಂದ ತಿಳಿದುಬರುವುದೇನೆಂದರೆ,ಯಾವ ಅಧ್ಯಾಪನೆಯ ಮೇಲೆ ಹಝ್ರತ್ ಪೈಗಂಬರ್(ಸ) ಜನರನ್ನು ನಡೆಸಲು ಬಯಸುತ್ತಿದ್ದರೋ ಅದರ ಮೇಲೆ ಅವರಿಗೆ ದೃಢವಾದ ವಿಶ್ವಾಸವಿತ್ತು ಎಂಬುದಾಗಿದೆ. ಇಲ್ಲದಿದ್ದರೆ, ಒಬ್ಬ ಸುಳ್ಳುವಾದಿಗೆ ತನ್ನ ಅಧ್ಯಾಪನೆಯ ಪ್ರಕಾರ ನಡೆಯುವುದು ಸಾಧ್ಯವಿರಬಹುದು. ಆದರೆ, ತನ್ನ ಮಕ್ಕಳಿಗೂ ರಹಸ್ಯವಾದ ಸಮಯದಲ್ಲೂ ಆ ಅಧ್ಯಾಪನೆ ಪ್ರಕಾರ ನಡೆಯಲು ಹೇಳಲು ಸಾಧ್ಯವಲ್ಲ. ಈ ಅಧ್ಯಾಪನೆ ಪ್ರಕಾರ ನಡೆಯದೇ ಪರಿಪೂರ್ಣತೆ ಲಭಿಸದು ಎಂಬ ದೃಢವಿಶ್ವಾಸವಿರುವ ವ್ಯಕ್ತಿಗೆ ಮಾತ್ರ ಇದು ಸಾಧ್ಯ. ಮೂರನೇ ಸಂಗತಿಯೇನೆಂದರೆ, ಪ್ರತಿಯೊಂದು ಸಂಗತಿಯನ್ನು ಇತರರಿಗೆ ಮನವರಿಕೆ ಮಾಡಿಸಿಕೊಡುವ ವಿಷಯದಲ್ಲಿ ಹಝ್ರತ್ ಪೈಗಂಬರ್(ಸ) ಸಹನೆ ವಹಿಸುತ್ತಿದ್ದರು. ಜಗಳ ಮಾಡುವುದಕ್ಕೆ ಬದಲಾಗಿ, ಪ್ರೀತಿ ಮತ್ತು ಪ್ರೇಮದಿಂದ ಬೇರೆಯವರ ತಪ್ಪುಗಳ ಬಗ್ಗೆ ಹೇಳಿಕೊಡುತ್ತಿದ್ದರು. ಈ ಸಂದರ್ಭದಲ್ಲಿ, ಈ ಸವಾಲನ್ನು ರದ್ದು ಮಾಡಲು ಹಝ್ರತ್ ಅಲಿ(ರ) ಹೇಗೆ ಬಯಸಿದ್ದರು ಎಂದು ನೋಡಿರಿ. ನಾವು ಸ್ವತಃ ಎಚ್ಚರಗೊಳ್ಳಲು ನಮಗೆ ಹೇಗೆ ಸಾಧ್ಯ. ಅದು ನಮ್ಮ ಕೈಯಲ್ಲಿಲ್ಲ. ಏಕೆಂದರೆ, ನಿದ್ದೆಹೋದ ವ್ಯಕ್ತಿ ತನ್ನನ್ನು ನಿಯಂತ್ರಿಸಲು ಸಾಧ್ಯವಿಲ್ಲ. ನಿದ್ದೆ ಹೋದ ನಂತರ ಈಗ ಎಷ್ಟು ಸಮಯವೆಂದು ಗೊತ್ತಾಗುವುದು ಹೇಗೆ, ಈಗ ಇಂತಹ ಕೆಲಸ ಮಾಡಬೇಕೆಂದು ಹೇಗೆ ಗೊತ್ತಾಗುವುದು. ಅಲ್ಲಾಹನು ಎಚ್ಚರಗೊಳಿಸಿದರೆ, ನಮಾಝ್ ನಿರ್ವಹಿಸುವೆನು. ಇಲ್ಲದಿದ್ದರೆ ನಿರ್ಬಂಧಾವಸ್ಥೆಯಾಗಿದೆ ಎಂಬ ರೀತಿಯಲ್ಲಿ ಅವರು ಉತ್ತರಕೊಟ್ಟಿದ್ದರು. ಮಾತ್ರವಲ್ಲ ಆ ಕಾಲದಲ್ಲಿ ಅಲರಾಂ ಸಹ ಇದ್ದಿರಲಿಲ್ಲ. ಈ ಮಾತನ್ನು ಕೇಳಿ ಹಝ್ರತ್ ಪೈಗಂಬರ್(ಸ) ಅಚ್ಚರಿಗೊಳ್ಳಲೇ ಬೇಕಿತ್ತು. ಏಕೆಂದರೆ, ಹಝ್ರತ್ ಪೈಗಂಬರರ(ಸ) ಹೃದಯದಲ್ಲಿದ್ದ ವಿಶ್ವಾಸ ಅವರನ್ನು ಎಂದೂ ಅಜಾಗರೂಕನನ್ನಾಗಿ ಮಾಡಲು ಬಿಡುತ್ತಿರಲಿಲ್ಲ. ತಹಜ್ಜುದ್ ಸಮಯವಾದರೆ ಅದರ ಬಗ್ಗೆ ಗೊತ್ತಿರದ ಸ್ಥಿತಿ ಹಝ್ರತ್ ಪೈಗಂಬರರಿಗೆ(ಸ) ಉಂಟಾಗುತ್ತಿರಲಿಲ್ಲ. ಆದ್ದರಿಂದ ಹಝ್ರತ್ ಪೈಗಂಬರ್(ಸ) ಬೇರೆ ಕಡೆ ಮುಖಮಾಡಿ ಇಷ್ಟು ಮಾತ್ರ ಹೇಳಿದರು: ಮನುಷ್ಯನು ತನ್ನ ತಪ್ಪನ್ನು ಸಮ್ಮತಿಸುವುದಿಲ್ಲ. ಜಗಳಕ್ಕೆ ಇಳಿಯುತ್ತಾನೆ. ತಹಜ್ಜುದ್ ನಷ್ಟವಾಗದ ರೀತಿಯಲ್ಲಿ ಪ್ರಯತ್ನ ಮಾಡಬೇಕಾಗಿತ್ತು. ಈ ರೀತಿಯಲ್ಲಿ ನೆಪಗಳನ್ನು ಹೇಳಬಾರದಿತ್ತು. ಹಝ್ರತ್ ಅಲಿ(ರ) ಹೇಳುತ್ತಾರೆ: ಅದರ ನಂತರ ನಾನು ಎಂದಿಗೂ ತಹಜ್ಜುದ್ ನಮಾಝ್ ನಿರ್ವಹಿಸುವುದೇ ಇರಲಿಲ್ಲ.

ಇವರ ಪ್ರಸ್ತಾಪ ನಡೆಯುತ್ತಿದೆ. ಇನ್ನೂ ಮುಂದುವರೆಯುವುದು. ಇನ್ಶಾ ಅಲ್ಲಾಹ್.

ಇತ್ತೀಚೆಗೆ ಪಾಕಿಸ್ತಾನದ ಸ್ಥಿತಿಗತಿಗಳು ಹೆಚ್ಚು ಕಠಿಣವಾಗುತ್ತಾ ಹೋಗುತ್ತಿವೆ. ಕೆಲವು ಅಧಿಕಾರಿಗಳು ಸರ್ಕಾರಿ ಮೌಲವಿಯರ ಹಿಂದೆ ಹೋಗುತ್ತಾ ಅವರೊಂದಿಗೆ ಸೇರಿಕೊಂಡು ನಮಗೆ ಸಾಧ್ಯವಾದಷ್ಟು ನಷ್ಟಗಳನ್ನು ಉಂಟುಮಾಡಲು ಪ್ರಯತ್ನಿಸುತ್ತಿದ್ದಾರೆ. ಆದ್ದರಿಂದ ವಿಶೇಷವಾಗಿ ದುಆ ಮಾಡಿರಿ.ರಬ್‌ವದ ಅಹ್ಮದಿಯರನ್ನು ಮತ್ತು ಪಾಕಿಸ್ತಾನದ ಇತರ ಪಟ್ಟಣಗಳಲ್ಲಿ ನೆಲೆಸಿರುವ ಅಹ್ಮದಿಯರನ್ನು ಸಹ ಅಲ್ಲಾಹನು ತನ್ನ ಸಂರಕ್ಷಣೆಯಲ್ಲಿರಿಸಲಿ. ವಿರೋಧಿಗಳ ದುಷ್ಕೃತ್ಯಗಳಿಂದ ಸಂರಕ್ಷಿಸಲಿ. ವಿರೋಧಿಗಳ ಭಯಾನಕ ಮತ್ತು ಅಪಾಯಕರವಾದ ಕುತಂತ್ರಗಳಿಂದ ಅಹ್ಮದಿಯರನ್ನು ಸಂರಕ್ಷಿಸಲಿ. ಈಗ ಅವರನ್ನು ಅಲ್ಲಾಹನು ಬೇಗನೇ ಹಿಡಿಗೂಡಲಿ.

ಜುಮಾದ ನಂತರ ನಾನು ಕೆಲವು ಜನಾಝ ಗ್ಹಾಇಬ್ ಸಹ ನಿರ್ವಹಿಸುವೆನು. ಅವರ ಬಗ್ಗೆ ಸಂಕ್ಷೇಪವಾಗಿ ಪ್ರಸ್ತಾಪಿಸುತ್ತೇನೆ. ಮೊದನೆಯದಾಗಿ ಕೆನಡದ ಸನ್ಮಾನ್ಯ ಕಮಾಂಡರ್ ಚೌಧರಿ ಮುಹಮ್ಮದ್ ಅಸ್ಲಮ್ ಸಾಹಿಬ್‌ರದ್ದಾಗಿದೆ. ನವೆಂಬರ್ 2ರಂದು ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಕಮಾಂಡರ್ ಸಾಹಿಬರು 1929ರಲ್ಲಿ ಗುಜ್ರಾನ್‌ವಾಲದಲ್ಲಿ ಜನಿಸಿದ್ದರು. ಗುಜ್ರಾನ್‌ವಾಲದಿಂದ ಅವರು ಮೆಟ್ರಿಕ್ ಪ್ರಥಮ ಸ್ಥಾನದೊಂದಿಗೆ ಮಾಡಿದ್ದರು. ತಾಲೀಮುಲ್ ಇಸ್ಲಾಮಿನಿಂದ ಎಫ್.ಎಸ್.ಸಿ. ಮಾಡಿದ್ದರು. ಗವರ್ನಮೆಂಟ್ ಕಾಲೇಜ್ ಲಾಹೋರಿನಿಂದ ಬಿ.ಎಸ್.ಸಿ ಮಾಡಿದ್ದರು. ಪಂಜಾಬ್ ಯೂನಿವರ್ಸಿಟಿಯಿಂದ ಡಾಕ್ಟರ್ ಅಬ್ದುಸ್ಸಲಾಮರ ಮೇಲ್ನೋಟದಲ್ಲಿ ಫಿಝಿಕ್ಸ್‌ನಲ್ಲಿ ಎಂ.ಎಸ್.ಸಿ.ಮಾಡಲು ಸೌಭಾಗ್ಯ ಪಡೆದರು. 1948ರಲ್ಲಿ ಫುರ್ಖಾನ್ ಫೋರ್ಸಿನಲ್ಲಿ ಪ್ರವೇಶಿಸಿ ಆಝಾದ್ ಕಶ್ಮೀರಿನಲ್ಲಿ ನೇಮಕಗೊಂಡರು. ಅಲ್ಲಿ ಅವರಿಗೆ ಮುಜಾಹಿದ್ ಕಶ್ಮೀರಿನ ಸರ್ಟಿಫಿಕೇಟ್ ಮತ್ತು ಆಝಾದಿಯೇ ಕಶ್ಮೀರಿನ ಪದಕ ಕೊಡಲಾಯಿತು. 1955ರಲ್ಲಿ ಕಮಾಂಡರ್ ಸಾಹಿಬರು ಪಾಕಿಸ್ತಾನದ ನೇವಿಯಲ್ಲಿ ಭರ್ತಿಯಾದರು. ಅಲ್ಲಿ ಅವರಿಗೆ ಪಾಕಿಸ್ತಾನ್ ನೇವಲ್ ಅಕಾಡೆಮಿಯಲ್ಲಿ ಡೈರಕ್ಟರ್ ಆಗಿ, ಸ್ಟಡೀಸ್ ಕೋಹಾಟ್‌ನಲ್ಲಿ ಡೆಪ್ಯೂಟಿ ಪ್ರೆಸಿಡೆಂಟ್ ಆಫ್ ಇಂಟರ್ ಸರ್ವಿಸ್ ಸೆಲಕ್ಷನ್ ಬೋರ್ಡ್, ನೇವಲ್ ಹೆಡ್‌ಕ್ವಾರ್ಟರ್ ಇಸ್ಲಾಮಾಬಾದಿನಲ್ಲಿ ಡೆಪ್ಯೂಟಿ ಡೈರಕ್ಟರ್ ನೇವಲ್ ಎಜುಕೇಶನ್ ಸರ್ವಿಸ್ ಹೀಗೆ ಪ್ರಧಾನ ಹುದ್ದೆಗಳಲ್ಲಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. ದಿವಂಗತರಿಗೆ ಎಜುಕೇಶನಲ್ ಸೆಕ್ಟರ್‌ನಲ್ಲಿ ನೇವಿಯ ಹೊಸ ಸ್ಕೂಲ್ ಮತ್ತು ಕಾಲೇಜುಗಳು ತೆರೆಯಲು ಯೋಜನೆ ಮಾಡುವ ಮತ್ತು ನೌಕಾ ಯೂನಿವರ್ಸಿಟಿಯ ಸ್ಥಾಪನೆಯಲ್ಲಿ ಪ್ರಧಾನ ಪಾತ್ರವಹಿಸಲು ತೌಫೀಕ್ ಲಭಿಸಿತ್ತು. ಪಾಕಿಸ್ತಾನದ ನೇವಿಯಿಂದ ನಿವೃತ್ತರಾದ ನಂತರ ಕೆನಡಕ್ಕೆ ಹೋದರು. ಒಂದು ವರ್ಷ ಟೊರಂಟೋ ಮಿಶನ್ ಹೌಸಿನಲ್ಲಿ ವಖ್ಫೆ ಆರ್ಝಿ ಮಾಡಿದ್ದರು. ಅನಂತರ 1993ರಲ್ಲಿ ನಿವೃತ್ತರಾದ ನಂತರ ಮಾಡುವ ವಖ್ಫ್‌ಗಾಗಿ ವಿನಂತಿ ಮಾಡಿದಾಗ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್) ಅದನ್ನು ಅಂಗೀಕರಿಸಿದರು. ಹೀಗೆ ಜಮಾಅತಿನಲ್ಲಿ ಅವರು 28 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಈ ಕಾಲಾವಧಿಯಲ್ಲಿ ದಿವಂಗತರು ಸೆಕ್ರಟರಿ ಜಾಇದಾದ್, ಸೆಕ್ರಟರಿ ರಿಶ್ತೇನಾಥ, ಎಡಿಶನಲ್ ಸೆಕ್ರಟರಿ ಮಿಶನ್ ಹೌಸ್, ಹೋಮಿಯೋಪಥಿ ಕ್ಲಿನಿಕ್‌ನಲ್ಲಿ ವಲಂಟಿಯರ್ ಮುಂತಾದ ರೀತಿಯಲ್ಲಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದಿದ್ದರು. ದಿವಂಗತರು ಅತ್ಯಂತ ವಿನಯವಂತ, ಸೌಮ್ಯ ಮಾತುಗಾರಿಕೆಯ ವ್ಯಕ್ತಿಯಾಗಿದ್ದರು. ಎಲ್ಲರೊಂದಿಗೆ ಪ್ರೀತಿಯಿಂದ ವರ್ತಿಸುತ್ತಿದ್ದರು. ನಮಾಝ್ ನಿಯತವಾಗಿ ಅನುಷ್ಠಿಸುತ್ತಿದ್ದರು, ಖಿಲಾಫತಿನೊಂದಿಗೆ ದೃಢವಾದ ಸಂಬಂಧ ಮತ್ತು ಪ್ರೀತಿಯಿತ್ತು. ಜೀವಿತವನ್ನು ವಖ್ಫ್ ಮಾಡಿದ ನಂತರ ತಮ್ಮ ಪ್ರತಿಯೊಂದು ಕ್ಷಣ ಜಮಾಅತಿನ ಸೇವೆಗಾಗಿ ಖರ್ಚು ಮಾಡಲು ಪ್ರಯತ್ನಿಸುತ್ತಿದ್ದರು.

ಕಳೆದ ಕೆಲವು ದಿನಗಳಿಂದ ರೋಗಗ್ರಸ್ತರಾಗಿದ್ದರು. ಆದರೂ ಆರೋಗ್ಯ ಸ್ವಲ್ಪ ಸುಧಾರಿಸಿದರೆ, ಬೇಗನೇ ಮಿಶನ್ ಹೌಸ್ ಬರುತ್ತಿದ್ದರು. ಕೊನೆಯುಸಿರು ತನಕ ದೀನಿನ ಸೇವೆಯಲ್ಲಿ ಸಕ್ರಿಯರಾಗಿದ್ದರು. ಪತ್ನಿ ಮತ್ತು ಮೂರು ಗಂಡುಮಕ್ಕಳನ್ನು ಅಗಲಿರುವರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಮಕ್ಕಳಿಗೆ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ತೌಫೀಕ್ ನೀಡಲಿ. ಅವರ ಸೊಸೆಯಾದ ನುಸ್ರತ್ ಜಹಾನ್ ಹೇಳುತ್ತಾರೆ: ಅತ್ಯಂತ ಕರುಣಾಳು ಮತ್ತು ಒಳ್ಳೆಯ ವ್ಯಕ್ತಿಯಾಗಿದ್ದರು. ಅತ್ಯಂತ ಪ್ರಾಮಾಣಿಕತೆಯಿಂದ ವಖ್ಫನ್ನು ಈಡೇರಿಸಿದ್ದರು. ಒಬ್ಬ ಐಡಿಯಲ್ ಪತಿ ಮತ್ತು ತಂದೆಯಾಗಿದ್ದರು. ಅಲ್ಲಾಹ್ ಮತ್ತು ಜಮಾಅತ್‌ನೊಂದಿಗೆ ಸಂಬಂಧ ಹಾಗೂ ನಮಾಝ್ ಸರಿಯಾಗಿ ಪಾಲಿಸುವುದು ತುಂಬ ಆವಶ್ಯಕವೆಂದು ತನ್ನ ಮರಣದ ವರೆಗೆ ತನ್ನ ಮಕ್ಕಳಿಗೆ ಉಪದೇಶಿಸುತ್ತಿದ್ದರು. ಜೀವನ ಪೂರ್ತಿ ತಹಜ್ಜುದ್ ನಮಾಝ್ ಮತ್ತು ಇತರ ನಮಾಝುಗಳನ್ನು ನಿಯತವಾಗಿ ನಿರ್ವಹಿಸಿದ್ದರು.

ಎರಡನೇ ಜನಾಝ ನಝಾರತ್ ಉಲ್‌ಯಾದ ಡ್ರೈವರ್ ಆದ ಖಮರ್ ಶಫೀಕ್ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ಶಾಹೀನ ಖಮರ್‌ದಾಗಿದೆ. ನವೆಂಬರ್ 12ರಂದು ಮಧ್ಯಾಹ್ನ ಒಂದು ಕಾಲಿಗೆ ಒಂದು ರಸ್ತೆ ಅಪಘಾತದಲ್ಲಿ ನಿಧನರಾಗಿದ್ದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಮರಣದ ಸಮಯದಲ್ಲಿ ಅವರಿಗೆ 38 ವಯಸ್ಸಿತ್ತು. ಶಹೀನ ಖಮರ್ ಸಾಹಿಬರು ತನ್ನ ಪತಿಯನ್ನಲ್ಲದೆ, ಇಬ್ಬರು ಪುತ್ರರನ್ನು, ಒಬ್ಬಳು ಪುತ್ರಿಯನ್ನು ಮತ್ತು ಮೂವರು ಸಹೋದರಿಯರನ್ನು ಅಗಲಿರುವರು. ಅವರ ಮಗಳಾದ ಶಾಹೀನ ಖಮರ್ ಹೇಳುತ್ತಾಳೆ: ನನ್ನ ತಾಯಿ ತುಂಬ ಒಳ್ಳೆಯ ಸ್ತ್ರೀಯಾಗಿದ್ದರು. ಸದಾ ಒಳಿತುಗಳನ್ನು ಮಾಡಲು ಉಪದೇಶಿಸುತ್ತಿದ್ದರು. ಸ್ವತಃ ಸತ್ಕರ್ಮಗಳಲ್ಲಿ ಮುಂದಿದ್ದರು. ಎಲ್ಲ ಸಂಗತಿಗಳನ್ನು ನನ್ನೊಡನೆ ಹಂಚುತ್ತಿದ್ದರು. ನನ್ನ ಉತ್ತಮ ಗೆಳತಿಯಾಗಿದ್ದರು. ಎರಡನೇ ವಿಶೇಷವೇನೆಂದರೆ, ಅವರಿಗೆ ಜಮಾಅತಿನ ಕೆಲಸಗಳಲ್ಲಿ ತುಂಬಾ ಒಲವಿತ್ತು. ಸೇವೆಗಾಗಿ ಯಾವಾಗಲೂ ತಯಾರಿರುತ್ತಿದ್ದರು. ಅವರ ಪತಿ ಬರೆಯುತ್ತಾರೆ: ಅಷ್ಟೇನೂ ವಿದ್ಯಾವಂತರಲ್ಲವಾದರೂ ಮನೆಯನ್ನು ಸಹ ಬಹಳ ಉತ್ತಮ ರೀತಿಯಲ್ಲಿ ನಡೆಸುತ್ತಿದ್ದರು. ಮಕ್ಕಳನ್ನು ಸಹ ಬಹಳ ಉತ್ತಮ ರೀತಿಯಲ್ಲಿ ತರಬೇತಿ ಮಾಡಿದ್ದರು.

ಇವರ ಮಗನಾದ ಸಮರ್ ಅಹ್ಮದ್ ಸಾಹಿಬರು ಸಹ ಅದೇ ರಸ್ತೆ ಅಪಘಾತದಲ್ಲಿ ತಾಯಿಯೊಂದಿಗೆ ಮೃತಪಟ್ಟಿದ್ದರು. ತಾಲೀಮುಲ್ ಇಸ್ಲಾಂ ಕಾಲೇಜಿನಲ್ಲಿ ಮೊದಲನೇ ವರ್ಷದ ವಿದ್ಯಾರ್ಥಿಯಾಗಿದ್ದರು. ಅಲ್ಲಾಹನ ಅನುಗ್ರಹದಿಂದ ಕಲಿಕೆಯಲ್ಲೂ ಮುಂದಿದ್ದರು. ಖುದ್ದಾಮ್‌ರೊಂದಿಗೆ ಡ್ಯೂಟಿಗಳನ್ನು ಸಹ ಉತ್ಸಾಹ ಮತ್ತು ಆವೇಶದಿಂದ ನೀಡುತ್ತಿದ್ದರು. ಜಮಾಅತಿನ ಕೆಲಸಗಳಲ್ಲಿ ತುಂಬ ಸಕ್ರಿಯರಾಗಿದ್ದರು. ಖಾಇದ್ ಸಾಹಿಬರು ಕರೆದಾಗಲೆಲ್ಲ ಡ್ಯೂಟಿಗಾಗಿ ಹೋಗುತ್ತಿದ್ದರು. ಅವರ ತಂದೆ ಹೇಳುತ್ತಾರೆ: ಕೆಲವು ಬಾರಿ ಮೂರ್‍ನಾಲ್ಕು ದಿನಗಳಿಗೆ ನಾನು ಯಾತ್ರೆಯಲ್ಲಿ ಇರುತ್ತಿದ್ದೆ. ಆಗ, ನೀವು ಚಿಂತೆ ಮಾಡಬೇಡಿರಿ, ನಾನು ಮನೆಯನ್ನು ನೋಡಿಕೊಳ್ಳುವೆನು, ನೀವು ನಿಮ್ಮ ಕೆಲಸವನ್ನು ನಿಶ್ಚಿಂತರಾಗಿ ಮಾಡಿಕೊಳ್ಳಿರಿ ಎಂದು ನನ್ನ ಮಗನು ಹೇಳುತ್ತಿದ್ದನು. ನಿಜವಾಗಿಯೂ ಕರ್ತವ್ಯನಿಷ್ಠೆಯನ್ನು ಹೊಂದಿದ್ದ ಮಗನಾಗಿದ್ದನು. ಸಮರ್ ಅಹ್ಮದ್‌ರ ಹಿರಿಯ ಸಹೋದರಿ ಸಮ್ರೀನ್ ಹೇಳುತ್ತಾರೆ: ನನ್ನ ಸಹೋದರ ಮಾಶಾ ಅಲ್ಲಾಹ್ ತುಂಬ ಒಳ್ಳೆಯವನಾಗಿದ್ದನು. ಕೋಪ ಅವರಿಗೆ ಬರುತ್ತೇ ಇರಲಿಲ್ಲ. ನಾನು ಎಂದಾದರೂ ಅವನನ್ನು ಬೈದರೂ ಕೋಪಗೊಳ್ಳುತ್ತಿರಲಿಲ್ಲ. ಮಕ್ಕಳೊಂದಿಗೆ ಮತ್ತು ಸಹೋದರ ಸಹೋದರಿಯರೊಂದಿಗೆ ಬಹಳ ಪ್ರೀತಿಯ ಸಂಬಂಧವನ್ನು ಹೊಂದಿದ್ದನು. ಕಿರಿಯ ಸಹೋದರನು ಸಹ ಹೀಗೆಯೇ ಬರೆದಿದ್ದಾನೆ. ಅಲ್ಲಾಹನು ದಿವಂಗತನೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಕುಟುಂಬದವರೆಲ್ಲರಿಗೂ ಸಹನೆ ಮತ್ತು ಧೈರ್ಯವನ್ನು ನೀಡಲಿ.ಸಣ್ಣ ಮಕ್ಕಳಿಗೂ ಮಕ್ಕಳ ತಂದೆಗೂ ಸಹನೆ ನೀಡಲಿ.

ಮುಂದಿನ ಜನಾಝ ಮುಹಮ್ಮದ್ ಅಫ್‌ಝುಲ್ ಖೋಖರ್ ಶಹೀದ್ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ಸಈದ ಅಫ್‌ಝುಲ್ ಖೋಖರ್ ಸಾಹಿಬರದ್ದಾಗಿದೆ. ಇವರು ಅಶ್ರಫ್ ಮಹ್ಮೂದ್ ಖೋಖರ್ ಶಹೀದ್ ಸಾಹಿಬರ ತಾಯಿಯಾಗಿದ್ದರು. ಇವರ ಗಂಡ ಮತ್ತು ಮಗನು ಶಹೀದ್ ಆಗಿದ್ದರು. ಸನ್ಮಾನ್ಯ ಸಈದ ಸಾಹಿಬ ಡಿಸೆಂಬರ್ 12ರಂದು ಕೆನಡದಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಪತಿ ಮತ್ತು ಮಗನು ಶಹೀದಾದ ನಂತರ ಅವರಿಗೆ ಬಹಳ ಕಠಿಣವಾದ ಸ್ಥಿತಿಗಳನ್ನು ಎದುರಿಸಬೇಕಾಗಿ ಬಂದಿತ್ತು. ಆದರೆ ಅವರು ಎಲ್ಲ ಕಷ್ಟತೆಗಳನ್ನು ಬಹಳ ಸಹನೆ ಮತ್ತು ಧೈರ್ಯದಿಂದ ಎದುರಿಸಿದ್ದರು. ಘನತೆಯಿಂದ ಜೀವಿತವನ್ನು ಸಾಗಿಸಿದ್ದರು. ಎಂದಿಗೂ ದೂರುತ್ತಿರಲಿಲ್ಲ. ಮೂರು ಪುತ್ರಿಯರ

ವಿವಾಹಗಳನ್ನು ಮಾಡಿಸಿಕೊಟ್ಟರು. ಕೆಲವು ವರ್ಷಗಳಿಗೆ ಹಿಂದೆ ತನ್ನ ಮತ್ತೊಬ್ಬ ಯುವ ಮಗನಾದ ಆಸಿಫ್ ಮಹ್ಮೂದ್ ಖೋಖರ್ ಸಾಹಿಬ್‌ರು ಸಹ ಅಚಾನಕ್ಕಾಗಿ ನಿಧನರಾದಾಗ, ಅದರ ದುಃಖವನ್ನು ಸಹ ಅವರಿಗೆ ಸಹಿಸಬೇಕಾಗಿ ಬಂದಿತ್ತು. ಆ ಸಂದರ್ಭದಲ್ಲೂ ಬಹಳ ಸಹನೆದೋರಿದ್ದರು ಮತ್ತು ಉತ್ತಮವಾದ ಸಹನೆಯ ಮಾದರಿಯನ್ನು ತೋರಿಸಿದ್ದರು. ತಮ್ಮ ಎಲ್ಲ ಆಪ್ತರೊಡನೆ ಪ್ರೀತಿಯಿಂದ ವರ್ತಿಸುವವರಾಗಿದ್ದರು. ಅತಿಥಿ ಸತ್ಕಾರ ಮಾಡುವವರು ಮತ್ತು ಬಡವರ ನೆರವು ಮಾಡುವವರು ಆಗಿದ್ದರು. ಖಿಲಾಫತಿನೊಂದಿಗೆ ವಿಶ್ವಾಸಾದರ ಮತ್ತು ಪ್ರೀತಿಯ ಸಂಬಂಧವನ್ನು ಹೊಂದಿದ್ದರು. ಜಮಾಅತಿನ ಯೋಜನೆಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಜೀವಿತ ಪೂರ್ತಿ ತಮ್ಮ ತಂದೆ ತಾಯಂದಿರ, ಶಹೀದ್‌ರಾದ ಪತಿ, ಪುತ್ರರ ಮತ್ತು ಕುಟುಂಬದ ಇತರ ಹಿರಿಯರ ಹೆಸರಲ್ಲಿ ಸದಖ ಮತ್ತು ದಾನಧರ್ಮಗಳನ್ನು ಮಾಡುತ್ತಿದ್ದರು. ಅವರು ತಂದೆತಾಯಂದಿರರಾದ ಸನ್ಮಾನ್ಯ ಮಿರ್ಝಾ ಫರ್ಝ್ ಕರೀಂ ಸಾಹಿಬ್ ಮತ್ತು ಸುಗ್ರಾ ಬೇಗಂ ಸಾಹಿಬ ಸಹ ಇಸ್ಲಾಂ ಮತ್ತು ಅಹ್ಮದಿಯ್ಯತ್ತಿನ ಶಹೀದರಲ್ಲಿ ಒಳಪಟ್ಟಿದ್ದರು. ಇವರು ಈಸ್ಟ್ ಲಂಡನಿನ ಸನ್ಮಾನ್ಯ ಮಿರ್ಝಾ ಮುಜೀಬ್ ಅಹ್ಮದ್ ಸಾಹಿಬ್ ಮತ್ತು ಮಿರ್ಝಾ ಫಝ಼್‌ಲುರ್ರಹ್ಮಾನ್ ಸಾಹಿಬ್‌ರ ಹಿರಿಯ ಸಹೋದರಿಯಾಗಿದ್ದರು.ಮುಬಾರಕ್ ಖೋಖರ್ ಸಾಹಿಬ್‌ರ ಹಿರಿಯ ಅತ್ತಿಗೆ ಆಗಿದ್ದರು. ಮುಬಾರಕ್ ಸಿದ್ದೀಖ ಸಾಹಿಬ್‌ರ ತಾಯಿಯ ಹಿರಿಯ ಸಹೋದರಿಯಾಗಿದ್ದರು. ದಿವಂಗತರು ಅಲ್ಲಾಹನ ಅನುಗ್ರಹದಿಂದ ಮೂಸಿಯಾಗಿದ್ದರು. ದಿವಂಗತರು ಒಬ್ಬ ಮಗನಾದ ಸನ್ಮಾನ್ಯ ಬಿಲಾಲ್ ಅಹ್ಮದ್ ಖೋಖರ್ ಸಾಹಿಬ್‌ರನ್ನು ಮತ್ತು ಮೂವರು ಪುತ್ರಿಯರಾದ ತಯ್ಯಿಬ ಖುರೈಶಿ ಸಾಹಿಬ, ತಾಹಿರ ಮಾಜಿದ ಸಾಹಿಬ ಮತ್ತು ಸಮೀನ ಖೋಖರ್ ಸಾಹಿಬರನ್ನು ಅಗಲಿರುವರು.ಅಲ್ಲಾಹನು ದಿವಂಗತರ ಪದವಿಗಳನ್ನು ಉನ್ನತಗೊಳಿಸಲಿ, ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ ಹಾಗು ಮಕ್ಕಳಿಗೆ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

*(ಪುಟ ಸಂಖ್ಯೆ* ***01*ರ** *ಉಳಿದ ಭಾಗ)*

ಪದೇ ಪದೇ ಅವರ ವಿವರಗಳು ದೊರಕುತ್ತವೆ. ವಾಸ್ತವದಲ್ಲಿ ಅವರು ತುಂಬ ತಡಮಾಡಿ ಇಸ್ಲಾಂ ಸ್ವೀಕರಿಸಿದರು. ಆದರೆ ಅವರಿಗೆ ಧರ್ಮ ಬೋಧನೆಯಲ್ಲಿ ತುಂಬ ಆಸಕ್ತಿಯಿತ್ತು. ಆದುದರಿಂದ ಅವರು ವಿಶ್ವಾಸ ತಂದ ಮೇಲೆ ರಸೂಲುಲ್ಲಾಹ್(ಸ) ರವರ ಬಗ್ಗೆ ನಿಶ್ಚಯ ಮಾಡಿಕೊಂಡಿದ್ದರು. ಇತರ ಜನರು ಅವರ ಬಹಳಷ್ಟು ಮಾತುಗಳನ್ನು ಕೇಳಿಕೊಂಡಿದ್ದಾರೆ. ನಾನು ಕೊನೆಯಲ್ಲಿ ವಿಶ್ವಾಸ ಪಡೆಯುವ ಭಾಗ್ಯ ಪಡೆದಿದ್ದೇನೆ. ಆದುದರಿಂದ ನಾನೀಗ ರಸೂಲುಲ್ಲಾಹ್(ಸ) ರವರಿಗೆ ಕ್ಷಣ ಮಾತ್ರಕ್ಕು ಬಿಡೆನು. ಅಂದ ಹಾಗೆ ಯವ ರೀತಿ ಖುರೇಶರು ಮಕ್ಕದಲ್ಲಿ ಬಂದು ಕುಳಿತರು. ಅವರು ಸಹ ಮಸೀದಿಯಲ್ಲಿ ಬಂದು ಕುಳಿತುಕೊಂಡು ಬಿಟ್ಟರು. ಮತ್ತು ನಿರ್ಧರಿಸಿಕೊಂಡರು. ನಾನು ಸಾಧ್ಯವಾದಷ್ಟು ಮಟ್ಟಿಗೆ ಧರ್ಮ ಸೇವೆ ಮಾಡುವೆನು. ಯಾವ ಲೌಕಿಕ ಕಾರ್ಯವು ಮಾಡುವುದಿಲ್ಲ. ಅವರ ಒಬ್ಬ ಸಹೋದರನು ಸಹ ಮುಸಲ್ಮಾನ ಆಗಿದ್ದ. ಇವರು ಎಲ್ಲ ಕಾರ್ಯಗಳನ್ನು ಬಿಟ್ಟು ರಸೂಲುಲ್ಲಾಹ್(ಸ) ರವರ ಬಳಿ ಬಂದು ಕುಳಿತುಕೊಂಡು ಬಿಟ್ಟಿದ್ದರು. ಆದುದರಿಂದ ಕೆಲ ಅವಧಿಯವರೆಗೆ ಅವರಿಗೆ ಉತ್ಸಾಹದಿಂದ ಊಟ ತಲುಪಿಸುತ್ತಿದ್ದರು. ಅರಬರ ಜೀವನಕ್ರಮ ತುಂಬ ಸರಳವಾಗಿತ್ತು. ಅವರು ಖರ್ಜೂರ ತಿಂದು ನೀರು ಕುಡಿಯುತ್ತಿದ್ದರು. ಅಷ್ಟೇ ಆಹಾರ ಸಾಕೆನ್ನುತ್ತಿದ್ದರು ಅಥವಾ ಒಮ್ಮೆ ಒಣ ಮಾಂಸ ಸಿಕ್ಕಿದರೆ ಅದನ್ನೇ ತಿಂದು ನೀರು ಕುಡಿಯುತ್ತಿದ್ದರು. ಅಂತೂ ತುಂಬ ಸರಳವಾದ ಜೀವನ ಸಾಗಿಸುತ್ತಿದ್ದರು. ಆದ್ದರಿಂದ ಅವರಿಗೆ ಊಟ ತಲುಪಿಸುವುದು ಕಷ್ಟದ ಕೆಲಸವೇನು ಆಗಿರಲಿಲ್ಲ. ಆದರೆ ಕೆಲ ಅವಧಿಯವರೆಗೆ ವಿಶ್ವಾಸದ ಹುಮ್ಮಸ್ಸಿನಲ್ಲಿ ಅವರಿಗೆ ಊಟ ತಲುಪಿಸಿದ ನಂತರ ಅವರಿಗೆ ಬೇಸರ ಬಂದು ಬಿಟ್ಟಿತು. (ಹಝ್ರತ್ ಅಬು ಹುರೈರ ಕ್ರೈಸ್ತ ಕುಟುಂಬದವರಾಗಿದ್ದರು. ಅವರ ತಾಯಿ ಸಹ ಕ್ರೈಸ್ತರಾಗಿದ್ದರು). ಅವರಿಗೆ ಬೇಸರ ಬಂದ ಮೇಲೆ ಒಂದು ದಿನ ರಸೂಲುಲ್ಲಾಹ್(ಸ) ರವರ ಸೇವೆಯಲ್ಲಿ ಹಾಜರಾಗಿ ಹೇಳಿದರು. ಓ ನಬಿವರ್ಯರೇ ನೀವು ಅಬು ಹುರೈರ ರವರಿಗೆ ಹೇಳಿ ಅವರು ಏನು ಕೆಲಸ ಮಾಡುತ್ತಿಲ್ಲ. ದಿನವೆಲ್ಲ ಮಸೀದಿಯಲ್ಲಿ ಕುಳಿತು ಕೊಂಡಿರುತ್ತಾರೆ. ರಸೂಲುಲ್ಲಾಹ್(ಸ) ನುಡಿದರು. ಅಲ್ಲಾಹನು ಅವರ ಪರವಾಗಿ ನಿಮಗೆ ಆಹಾರ ಸಂಪನ್ನತೆ ಒದಗಿಸುತ್ತಾನೆ ಎಂಬ ವಿಷಯ ತಿಳಿದಿರಲಿಕ್ಕಿಲ್ಲ. ಪ್ರಥಮ ಖಲೀಫರು ಅದೆ ಘಟನೆ ನಮ್ಮ ಅಜ್ಜನವರಿಗೆ ಹೇಳಿದರು. ಆಗ ನಮ್ಮ ಅಜ್ಜನವರು ಅವರಿಗೆ ಲೌಕಿಕ ಶಿಕ್ಷಣ ನೀಡುವ ಇರಾದೆ ಬಿಟ್ಟು ಧಾರ್ಮಿಕ ಸೇವೆ ಮಾಡುತ್ತಿದ್ದರೆ ಇವನು ತನ್ನ ಸಹೋದರನ ಋಣದಲ್ಲಿರುವನು ಎಂದು ಏಕೆ ಹೇಳುತ್ತೀರಿ. ಅವನು ಧಾರ್ಮಿಕ ಸೇವೆ ಮಾಡುತ್ತಿರುವ ಫಲದಿಂದಾಗಿ ಅಲ್ಲಾಹನು ಅವನ ಸಹೋದರನ ಆಹಾರದಲ್ಲಿ ಸಂಪನ್ನತೆ ಒದಗಿಸುವನು ಎಂದು ಏಕೆ ಹೇಳುವುದಿಲ್ಲ. ಮತ್ತೆ ಅವರು ಹಝ್ರತ್ ಅಬು ಹುರೈರ(ರ) ಅವರ ಘಟನೆ ವಿವರಿಸಿದರು. ಅವರು ಇಸ್ಲಾಂ ಧರ್ಮ ಸ್ವೀಕರಿಸಿದಾಗ ಅವರಿಗೆ ರಸೂಲ್ ಕರೀಂ(ಸ) ರವರ ಸಭೆಗಳಲ್ಲಿ ಭಾಗವಹಿಸುವ ಹಂಬಲ ಉಂಟಾಯಿತು. ಆದುದರಿಂದ ಅವರು ಹಗಲಿರುಳು ಮಸೀದಿಯಲ್ಲಿಯೇ ಕುಳಿತುಕೊಂಡಿದ್ದರು. ಏಕೆಂದರೆ ರಸೂಲುಲ್ಲಾಹ್(ಸ) ರವರ ಯಾವುದೇ ಮಾತುಗಳು ಸಹ ಆಲಿಸುವುದರಿಂದ ವಂಚಿತನಾಗಬಾರದು ಎಂದು. ಅವರ ಯಥೇಚ್ಯ ವರಧಿಗಳನ್ನು ನೋಡಿ ಕೆಲವರು ಅವರನ್ನು ಹಳೆಯ ಸಹಾಬಿ ಎಂದು ಭಾವಿಸುತ್ತಾರೆ. ಅವರು ಹಳೆಯ ಸಹಾಬಿಯರೇನು ಅಲ್ಲ. ಅವರು ರಸೂಲುಲ್ಲಾಹ್(ಸ) ರವರ ನಿಧನಕ್ಕಿಂತ ಕೇವಲ ಮೂರು ವರ್ಷಗಳ ಹಿಂದೆ ಇಸ್ಲಾಮ್ ಸ್ವೀಕರಿಸಿದ್ದರು. ಆದರೆ ಅವರ ವರದಿಗಳೇ ಹೆಚ್ಚಾಗಿವೆ. ಆ ಕಾರಣದಿಂದ ಜನರು ಹಳೇಯ ಸಹಾಬರಿಗಿಂತ ಹಝ್ರತ್ ಅಬು ಹುರೈರನ್ನು ಗುರುತಿಸುತ್ತಾರೆ. ಏಕೆಂದರೆ ಹದೀಸುಗಳಲ್ಲಿ ಪದೇ ಪದೇ ಅವರ ವಿವರಗಳು ದೊರಕುತ್ತವೆ. ವಾಸ್ತವದಲ್ಲಿ ಅವರು ತುಂಬ ತಡಮಾಡಿ ಇಸ್ಲಾಮ್ ಸ್ವೀಕರಿಸಿದ್ದರು. ಅದರೆ ಅವರಿಗೆ ಧರ್ಮ ಬೋಧನೆಯಲ್ಲಿ ತುಂಬ ಆಸಕ್ತಿಯಿತ್ತು. ಆದುದರಿಂದ ಅವರು ವಿಶ್ವಾಸ ತಂದ ಮೇಲೆ ರಸೂಲುಲ್ಲಾಹ್(ಸ) ರವರ ಪ್ರತಿ ನಿಶ್ಚಯ ಮಾಡಿಕೊಂಡರು. ಇತರ ಜನರು ಅವರ ಬಹಳಷ್ಟು ಮಾತುಗಳನ್ನು ಕೇಳಿಕೊಂಡಿದ್ದಾರೆ. ನಾನು ಕೊನೆಯಲ್ಲಿ ವಿಶ್ವಾಸ ಪಡೆಯುವ ಭಾಗ್ಯ ಪಡೆದಿದ್ದೇನೆ. ಆದುದರಿಂದ ನಾನೀಗ ರಸೂಲುಲ್ಲಾಹ್(ಸ) ರವರನ್ನು ಕ್ಷಣ ಮಾತ್ರಕ್ಕೂ ಬಿಡೆನು. ಅಂದ ಹಾಗೆ ಯಾವ ರೀತಿ ಖುರೇಶರು ಮಕ್ಕದಲ್ಲಿ ಬಂದು ಕುಳಿತರು. ಅವರು ಸಹ ಮಸೀದಿಯಲ್ಲಿ ಬಂದು ಕುಳಿತುಕೊಂಡು ಬಿಟ್ಟರು ಮತ್ತು ನಿರ್ಧರಿಸಿಕೊಂಡರು. ನಾನು ಸಾಧ್ಯವಾದಷ್ಟು ಮಟ್ಟಿಗೆ ಧರ್ಮ ಸೇವೆ ಮಾಡುವೆನು. ಯಾವ ಲೌಕಿಕ ಕಾರ್ಯವು ಮಾಡುವುದಿಲ್ಲ. ಅವರ ಒಬ್ಬ ಸಹೋದರನು ಸಹ ಮುಸಲ್ಮಾನ್ ಆಗಿದ್ದ. ಇವರು ಎಲ್ಲ ಕಾರ್ಯಗಳನ್ನು ಬಿಟ್ಟು ರಸೂಲುಲ್ಲಾಹ್(ಸ) ರವರ ಬಳಿ ಬಂದು ಕುಳಿತುಕೊಂಡು ಬಿಟ್ಟಿದ್ದರು. ಆದುದರಿಂದ ಕೆಲ ಅವಧಿಯವರೆಗೆ ಅವರಿಗೆ ವಿಶ್ವಾಸದ ಉತ್ಸಾಹದಲ್ಲಿ ಊಟ ತಲುಪಿಸುತ್ತಿದ್ದರು. ಅರಬರ ಜೀವನಕ್ರಮ ತುಂಬ ಸರಳವಾಗಿತ್ತು. ಅವರು ಖರ್ಜೂರ ತಿಂದು ನೀರು ಕುಡಿಯುತ್ತಿದ್ದರು. ಅಷ್ಟೇ ಆಹಾರ ಸಾಕೆನ್ನುತ್ತಿದ್ದರು ಅಥವ ಒಮ್ಮೆ ಒಣ ಮಾಂಸ ಸಿಕ್ಕಿದರೆ ಅದನ್ನೇ ತಿಂದು ನೀರು ಕುಡಿಯುತ್ತಿದ್ದರು. ಅಂತೂ ತುಂಬ ಸರಳವಾದ ಜೀವನ ಸಾಗಿಸುತ್ತಿದ್ದರು. ಆದ್ದರಿಂದ ಅವರಿಗೆ ಊಟ ತಲುಪಿಸುವುದು ಕಷ್ಟದ ಕೆಲಸವೇನೂ ಆಗಿರಲಿಲ್ಲ. ಆದರೆ ಕೆಲ ಅವಧಿಯವರೆಗೆ ವಿಶ್ವಾಸದ ಹುಮ್ಮಸ್ಸಿನಲ್ಲಿ ಅವರಿಗೆ ಊಟ ತಲುಪಿಸಿದ ನಂತರ ಅವರಿಗೆ ಬೇಸರ ಬಂದು ಬಿಟ್ಟಿತು. (ಹಝ್ರತ್ ಅಬು ಹುರೈರ ಕ್ರೈಸ್ತ ಕುಟುಂಬದವರಾಗಿದ್ದರು. ಅವರ ತಾಯಿ ಸಹ ಕ್ರೈಸ್ತರಾಗಿದ್ದರು) ಅವರಿಗೆ ಬೇಸರ ಬಂದ ಮೇಲೆ ಒಂದು ದಿನ ರಸೂಲುಲ್ಲಾಹ್(ಸ) ರವರ ಸೇವೆಯಲ್ಲಿ ಹಾಜರಾಗಿ ಹೇಳಿದರು. ಓ ನಬಿವರ್ಯರೆ ನೀವು ಅಬು ಹುರೈರರಿಗೆ ಹೇಳಿ ಅವರು ಏನೂ ಗಳಿಸುವುದಿಲ್ಲ. ದಿನವೆಲ್ಲ ಮಸೀದಿಯಲ್ಲಿ ಕುಳಿತುಕೊಂಡಿರುತ್ತಾರೆ. ಯಾವ ಕೆಲಸವೂ ಮಾಡುವುದಿಲ್ಲ. ರಸೂಲುಲ್ಲಾಹ್(ಸ) ನುಡಿದರು. ಅಲ್ಲಾಹನು ಅವರ ಪರವಾಗಿ ನಿಮ್ಮ ಮುಖಾಂತರ ಆಹಾರ ಒದಗಿಸುತ್ತಿದ್ದಾನೆ ಎಂಬ ವಿಷಯ ತಿಳಿದಿರಲಿಕ್ಕಿಲ್ಲ. ಹಝ್ರತ್ ಖಲೀಫ ಪ್ರಥಮರು ಅದೆ ಘಟನೆ ನಮ್ಮ ಅಜ್ಜ ಅವರಿಗೆ ಹೇಳಿದರು. ಆಗ ನಮ್ಮ ಅಜ್ಜನವರು ಅವರಿಗೆ ಲೌಕಿಕ ಶಿಕ್ಷಣ ನೀಡುವ ಇರಾದೆ ಬಿಟ್ಟು ಧರ್ಮ ಸೇವೆಯಲ್ಲಿ ತೊಡಗಿದರು.
(ತಫ್ಸೀರ್ ಕಬೀರ್ ಸಂಪುಟ 10, ಪುಟ 116–117, ಮುದ್ರಣ ಖಾದಿಯಾನ್ 2010).

*(ಪುಟ ಸಂಖ್ಯೆ* ***12*ರ** *ಉಳಿದ ಭಾಗ)*

ನಮ್ಮೊಡನೆ ಸಂಬೋಧನೆ ಮಾಡಲು ಎದ್ದು ನಿಂತರು. ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದಾಗಿ ನಾನು ಕೇಳಿದೆ: ಎಲೈ ಜನರೇ, ನೀವು ಅಲಿಯ ಬಗ್ಗೆ ದೂರು ನೀಡಬೇಡಿರಿ. ಅಲ್ಲಾಹನಾಣೆ, ಅವರು ಅಲ್ಲಾಹನ ಮೇಲೆ ಬಹಳ ಭಯ ಹೊಂದಿರುವ ವ್ಯಕ್ತಿಯಾಗಿರುವವರು ಅಥವಾ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ಅವರು ಅಲ್ಲಾಹನ ಮಾರ್ಗದಲ್ಲಿ ತುಂಬ ಭಯಭಕ್ತಿ ಇರುವ ವ್ಯಕ್ತಿಯಾಗಿರುವವರು. (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಯಾಮ್, ಪುಟ–867–868, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಇವರ ಬಗ್ಗೆಗಿನ ಪ್ರಸ್ತಾಪ ಮುಂದುವರೆಯುವುದು.ಇನ್ಶಾ ಅಲ್ಲಾಹ್.

ಇಂದು ಸಹ ದುಆದ ಕಡೆಗೆ ಗಮನಸೆಳೆಯಲು ಇಚ್ಛಿಸುತ್ತೇನೆ. ಕಳೆದ ಜುಮಾ ದಿವಸ ಅಲ್‌ಜೀರಿಯಾದ ಬಗ್ಗೆ ಹೇಳಿರಲಿಲ್ಲ. ಅಲ್ಲೂ ಅಹ್ಮದಿಯರು ತುಂಬಾ ಕಠಿಣವಾದ ಅವಸ್ಥೆಗಳನ್ನು ಅನುಭವಿಸುತ್ತಿದ್ದಾರೆ. ಕೆಲವರನ್ನು ಸೆರೆಹಿಡಿಯಲಾಗಿದೆ. ಅವರಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಅವನ ಸ್ಥಿತಿಗಳನ್ನು ಸುಲಭಗೊಳಿಸಲಿ. ಸೆರೆಯಾಳುಗಳು ಬೇಗನೇ ಬಿಡುಗಡೆಗೊಳ್ಳುವಂತಾಗಲಿ. ಅಲ್ಲೂ ಕಷ್ಟತೆಯ ಪರಿಸ್ಥಿತಿಗಳುಂಟಾಗಿವೆ. ಸರ್ಕಾರಕ್ಕೂ ಬುದ್ಧಿಕೊಡಲಿ. ನ್ಯಾಯದಿಂದ ನಡೆಯುತ್ತಾ ಅಹ್ಮದಿಯರ ಅವಕಾಶಗಳನ್ನು ಈಡೇರಿಸುವವರಾಗಲಿ. ಅದೇ ರೀತಿಯಲ್ಲಿ ಪಾಕಿಸ್ತಾನದ ಸ್ಥಿತಿಗತಿಗಳು ಸಹ ಕಠಿಣವಾಗುತ್ತಾ ಹೋಗುತ್ತಿವೆ. ಕೆಲವು ಆಡಳಿತಗಾರರು ನಾನು ಹಿಂದೆ ಹೇಳಿದಂತೆ ವೈಯಕ್ತಿಕವಾಗಿಯೂ ಅನ್ಯಾಯದಿಂದ ವರ್ತಿಸುತ್ತಿದ್ದಾರೆ. ಅವರಿಗಾಗಿಯೂ ದುಆ ಮಾಡಿರಿ. ಈ ಮೌಲವಿಯರಿಗೆ ಮತ್ತು ಆಡಳಿತಗಾರರಿಗೆ ಅಲ್ಲಾಹನು ಬುದ್ಧಿಕೊಡಲು ಇಚ್ಛಿಸುವುದಿಲ್ಲವಾದರೆ, ಅವರಿಗೆ ಬುದ್ಧಿ ಬರುವುದಿಲ್ಲವೆಂದಾದರೆ ಅಥವಾ ಹೀಗೆಯೇ ವರ್ತಿಸಿ ಅಲ್ಲಾಹನ ಹಿಡಿತಕ್ಕೆ ಒಳಗಾಗುವುದು ಅವರ ವಿಧಿಯೆಂದಾದರೆ, ಅಲ್ಲಾಹನು ಬೇಗನೇ ಅವರನ್ನು ಹಿಡಿಗೂಡಲಿ ಮತ್ತು ಅಹ್ಮದಿಯರ ಕಷ್ಟತೆಗಳು ನೀಗುವಂತಾಗಲಿ.

ನಮಾಝಿನ ನಂತರ ಜನಾಝ ಗಾಇಬ್ ಸಹ ನಿರ್ವಹಿಸುವೆನು. ರಬ್ವದ ಮುಹಮ್ಮದ್ ಅಬ್ದುಲ್ಲಾಹ್‌ರ ಮಗನಾದ ರಶೀದ್ ಅಹ್ಮದ್ ಸಾಹಿಬ್‌ರದ್ದಾಗಿದೆ. ಇವರು ನಮ್ಮ ಅರಬೀ ಡೆಸ್ಕಿನ ಮುರಬ್ಬಿಯಾದ ತಾಹಿರ್ ನದೀಂ ಸಾಹಿಬ್‌ರ ತಂದೆಯಾಗಿದ್ದರು. ಅಕ್ಟೋಬರ್ 28ಕ್ಕೆ 76ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**. ಇವರ ಕುಟುಂಬದಲ್ಲಿ ಇವರ ತಾತರಾದ ಹಝ್ರತ್ ಅಬ್ದುಲ್‌ಗಫ್ಫಾರ್ ಸಾಹಿಬ್‌ರ ಮೂಲಕ ಅಹ್ಮದಿಯ್ಯತ್ ಪ್ರವೇಶಿಸಿತ್ತು. ಅವರು ತನ್ನ ಚಿಕ್ಕಪ್ಪರ ಮಗನೊಂದಿಗೆ ಹಝ್ರತ್ ಮೌಲವಿ ಅಲ್ಲಾದತ್ತ ಸಾಹಿಬ್‌ರೊಂದಿಗೆ(ರ) 1891–1892ರಲ್ಲಿ ಖಾದಿಯಾನಿಗೆ ಹೋಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ಕೈಯಲ್ಲಿ ಬೈಅತ್ ಮಾಡಿದ್ದರು. ಹಝ್ರತ್ ಮೌಲವಿ ಅಲ್ಲಾದತ್ತ ಸಾಹಿಬ್(ರ) ವಿದ್ಯಾವಂತ ಪಂಡಿತರಾಗಿದ್ದರು. ಹಝ್ರತ್ ಮಸೀಹ್ ಮೌಊದ್‌ರೊಂದಿಗೆ(ಅ) ಅವರ ವಾದಕ್ಕೆ ಮುಂಚಿತವಾಗಿಯೇ ಭೇಟಿಯಾಗುತ್ತಿದ್ದರು. ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಧ್ವಜವನ್ನು ಹಝ್ರತ್ ಮಸೀಹ್ ಮೌಊದ್(ಅ) ಕೈಯಲ್ಲಿ ಹಿಡಿದುಕೊಂಡಿರುವುದಾಗಿ ಅಲ್ಲಾದತ್ತ ಸಾಹಿಬ್‌ರು ಕನಸಿನಲ್ಲಿ ಕಂಡಿದ್ದರು. ಹೀಗೆ ಹಝ್ರತ್ ಮೌಲವಿ ಅಲ್ಲಾಹ್‌ದತ್ತ ಸಾಹಿಬ್‌ರು ತನ್ನ ಚಿಕ್ಕಪ್ಪರ ಮಗನಾದ ಅಬ್ದುಲ್‌ಗಫ್ಫಾರ್ ಸಾಹಿಬ್‌ರೊಂದಿಗೆ ಖಾದಿಯಾನಗೆ ಹೋಗಿ ಹಝ್ರತ್ ಮಸೀಹ್ ಮೌಊದ್‌ರಿಗೆ(ಅ) ನಿಷ್ಠೆಯ ಪ್ರತಿಜ್ಞೆ ಮಾಡಿದರು. ಅನಂತರ ಮೌಲವಿ ಅಲ್ಲಾಹ್‌ದತ್ತ ಸಾಹಿಬ್‌ರ ತಬ್ಲೀಗ್ ಮೂಲಕ ಅಲಿಪೂರ್ ಮತ್ತು ಮೋಝಾ ಹಸನ್‌ಪೂರ್ ಮುಲ್ತಾನಿನಲ್ಲಿ ಹಲವರು ಅಹ್ಮದಿಯ್ಯತ್ತಿನಲ್ಲಿ ಪ್ರವೇಶಿಸಿದರು. ದಿವಂಗತರಾದ ರಶೀದ್ ಅಹ್ಮದ್ ಸಾಹಿಬ್‌ರಿಗೆ ಬಹಾಲ್‌ಪೂರ್ ಜಿಲ್ಲೆಯಲ್ಲಿರುವ ತನ್ನ ಜಮಾಅತಿನಲ್ಲಿ ಸೆಕ್ರಟರಿ ಮಾಲ್ ಎಂಬ ನೆಲೆಯಲ್ಲಿ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತು. ದಿವಂಗತರು ತುಂಬಾ ಒಳ್ಳೆಯ, ಸಾತ್ವಿಕ, ಸಭ್ಯ, ಅತಿಥಿ ಸತ್ಕಾರ ಪ್ರಿಯರಾದ ಮತ್ತು ಸಹಾನುಭೂತಿ ಹೊಂದಿರುವ ವ್ಯಕ್ತಿಯಾಗಿದ್ದರು. ಸಂಬಂಧಿಕರೊಂದಿಗೆ ಮತ್ತು ಪರಿಸರ ನಿವಾಸಿಗಳೊಂದಿಗೆ, ಬಡವರೊಂದಿಗೆ ಸಂಬಂಧವಿರಿಸುವ ವ್ಯಕ್ತಿಯಾಗಿದ್ದರು. ಬಡವರಿಗೆ ರಹಸ್ಯವಾಗಿ ನೆರವು ನೀಡುತ್ತಿದ್ದರು. ದಿವಂಗತರು ತನ್ನ ಪತ್ನಿಯಾದ ಸಿದ್ದೀಖ ಬೇಗಂ ಸಾಹಿಬರನ್ನು ಅಗಲಿರುವರು. ಇವರ ಪತ್ನಿ ಹಝ್ರತ್ ಮಸೀಹ್ ಮೌಊದ್‌ರ(ಅ) ಸಹಾಬಿಯಾದ ಖಾದಿರ್ ಬಖ್ಶ್ ಸಾಹಿಬ್‌ರ ಮೊಮ್ಮಗಳಾಗಿದ್ದರು. ದಿವಂಗತರು ಅಲ್ಲಾಹನ ಅನುಗ್ರಹದಿಂದ ಮೂಸಿಯಾಗಿದ್ದರು. ದಿವಂಗತರು ಪತ್ನಿಯನ್ನಲ್ಲದೆ, ಮೂವರು ಪುತ್ರಿಯರನ್ನು ಮತ್ತು ಇಬ್ಬರು ಪುತ್ರರನ್ನು ಅಗಲಿರುವರು. ನಾನು ಹೇಳಿದಂತೆ ಮಗನು ವಖ್ಫೆ ಝಿಂದಗಿಯಾಗಿರುವರು. ಮುರಬ್ಬಿಯಾಗಿ, ಇಲ್ಲಿ ಅರಬಿ ಡೆಸ್ಕಿನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ ಹಾಗೂ ಪದವಿಗಳನ್ನು ಉನ್ನತಗೊಳಿಸಲಿ.

*****************

# ಖುತ್‌ಬ ಜುಮುಅ

**ಹಝ್ರತ್ ಜಿಬ್ರೀಲ್(ಅ) ಹೇಳಿದರು: ಯಾ ರಸೂಲಲ್ಲಾಹ್, ಖಂಡಿತವಾಗಿಯೂ ಇವರು ಸಹಾನುಭೂತಿಗೆ ಯೋಗ್ಯರಾಗಿದ್ದಾರೆ. ಎಂದರೆ ಹಝ್ರತ್ ಅಲಿಯ ಬಗ್ಗೆ ಹೀಗೆ ಹೇಳಿದರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಹೌದು, ಅಲಿ ನನ್ನಿಂದ ಮತ್ತು ನಾನು ಅಲಿಯಿಂದ. ಆಗ ಹಝ್ರತ್ ಜಿಬ್ರೀಲ್(ಅ) ಹೇಳಿದರು: ನಾನು ನಿಮ್ಮಿಬ್ಬರಿಂದ ಆಗಿರುವೆನು.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಅಳಿಯ ಹಾಗೂ ಅಬೂ ತುರಾಬ್ ಹಝ್ರತ್ ಅಲಿ(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಹಝ್ರತ್ ಪೈಗಂಬರ್(ಸ) ಬೆಳಿಗ್ಗೆ ಹೀಗೆ ಘೋಷಿಸಿದರು: ಯಾರನ್ನು ಅಲ್ಲಾಹನು, ಅವನ ಪ್ರವಾದಿ ಮತ್ತು ಮುಸ್ಲಿಮರು ಪ್ರೀತಿಸುತ್ತಾರೋ ಅವರಿಗೆ ನಾನಿಂದು ಇಸ್ಲಾಮಿನ ಕಪ್ಪು ಬಾವುಟವನ್ನು ನೀಡುವೆನು.**

**ಅಲ್ಲಾಹನು ಈ ಕೋಟೆಯ ಮೇಲಿನ ವಿಜಯವನ್ನು ಅವರ ಕೈಗಳಿಂದ ಸಾಧಿಸಲಾಗುವುದು ಎಂದು ವಿಧಿಸಿದ್ದಾನೆ. ಅನಂತರ ಮರುದಿನ ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿಯನ್ನು(ರ) ಕರೆದರು. ಧ್ವಜವನ್ನು ಅವರಿಗೆ ಒಪ್ಪಿಸಿದರು. ಹಝ್ರತ್ ಅಲಿ(ರ) ಸಹಾಬರ ಸೈನ್ಯದೊಂದಿಗೆ ಕೋಟೆಯ ಮೇಲೆ ಆಕ್ರಮಣ ನಡೆಸಿದರು. ಯಹೂದಿಯರು ಕೋಟೆಯ ಒಳಗೆ ಇದ್ದರೂ ಕೂಡ, ಅಲ್ಲಾಹನು ಹಝ್ರತ್ ಅಲಿ(ರ) ಮತ್ತು ಇತರ ಸಹಾಬಿಯರಿಗೆ ಆ ದಿನ ಎಷ್ಟು ಶಕ್ತಿ ಕೊಟ್ಟನೆಂದರೆ, ಸಂಜೆಗೆ ಮುಂಚಿತವಾಗಿ ಕೋಟೆಯ ಮೇಲೆ ವಿಜಯ ಸಾಧಿಸಲಾಯಿತು.**

**ರಬ್ವದ ಮುಹಮ್ಮದ್ ಅಬ್ದುಲ್ಲಾಹ್‌ರ ಮಗನಾದ ರಶೀದ್ ಅಹ್ಮದ್ ಸಾಹಿಬ್ ಅವರ ಸದ್ಗುಣಗಳ ಪ್ರಸ್ತಾವನೆ ಹಾಗೂ ನಮಾಝೆ ಜನಾಝ ಗಾಯಿಬ್ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **11–12–2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

اِيَّاكَ نَعْبُدُ وَاِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಪ್ರಸ್ತಾಪ ನಡೆಯುತ್ತಿತ್ತು. ಇಂದೂ ಅದೇ ಜಾರಿಯಲ್ಲಿರುವುದು. ಮುಂದೆಯೂ ಕೆಲವು ಖುತ್‌ಬಗಳಲ್ಲಿ ಇವರ ಪ್ರಸ್ತಾಪ ಜಾರಿಯಲ್ಲಿರುವುದು. ಇನ್ಶಾ ಅಲ್ಲಾಹ್.

ಉಹದ್ ಯುದ್ಧದ ಸಂದರ್ಭದಲ್ಲಿ, ಹಝ್ರತ್ ಮುಸ್‌ಅಬ್ ಬಿನ್ ಉಮೈರ್‌ರನ್ನು ಇಬ್ನು ಖಮಿಅ ಶಹೀದ್ ಮಾಡಿದಾಗ, ಅವನು ಹಝ್ರತ್ ಪೈಗಂಬರರನ್ನು(ಸ) ಶಹೀದ್ ಮಾಡಿದ್ದನು ಎಂದು ಭಾವಿಸಿಕೊಂಡು, ಖುರೈಶಿಯರ ಕಡೆಗೆ ಮರಳಿಹೋಗಿ ಹೀಗೆ ಹೇಳಿದನು: ನಾನು ಮುಹಮ್ಮದ್‌ನನ್ನು(ಸ) ಶಹೀದ್ ಮಾಡಿದ್ದೇನೆ. ಹಝ್ರತ್ ಮುಸ್‌ಅಬ್ ಶಹೀದ್ ಆದಾಗ, ಹಝ್ರತ್ ಪೈಗಂಬರ್(ಸ) ಧ್ವಜವನ್ನು ಹಝ್ರತ್ ಅಲಿಗೆ(ರ) ಒಪ್ಪಿಸಿದರು. ಹೀಗೆ ಹಝ್ರತ್ ಅಲಿ(ರ) ಮತ್ತು ಇತರ ಮುಸ್ಲಿಮರು ಹೋರಾಡಿದರು.
(ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್, ಪುಟ–529, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಒಂದು ವರದಿಯ ಪ್ರಕಾರ, ಉಹದ್ ಯುದ್ಧದ ಸಂದರ್ಭದಲ್ಲಿ, ಹಝ್ರತ್ ಅಲಿಯನ್ನು(ರ) ಸತ್ಯನಿಷೇಧಿಗಳ ಧ್ವಜವಾಹಕನಾದ ತಲ್‌ಹ ಬಿನ್ ಅಬೂತಲ್‌ಹ ಹೋರಾಡಲು ಆಹ್ವಾನಿಸಿದನು. ಹಝ್ರತ್ ಅಲಿ(ರ) ಮುಂದಕ್ಕೆ ಧಾವಿಸಿಕೊಂಡು ಆಕ್ರಮಣ ನಡೆಸಿದಾಗ, ಅವನು ನೆಲಕ್ಕೆ ಬಿದ್ದು ನರಳುತ್ತಾ ಪ್ರಾಣಬಿಟ್ಟನು. ಸತ್ಯನಿಷೇಧಿಗಳ ಧ್ವಜವಾಹಕರನ್ನುಒಬ್ಬರ ನಂತರ ಇನ್ನೊಬ್ಬರಂತೆ ಹಝ್ರತ್ ಅಲಿ(ರ) ಕೊಂದು ಹಾಕಿದರು. ಸತ್ಯನಿಷೇಧಿಯರ ಒಂದು ಸಂಘವನ್ನು ನೋಡಿಕೊಂಡು ಹಝ್ರತ್ ಅಲಿಯೊಡನೆ(ರ) ಹಝ್ರತ್ ಪೈಗಂಬರ್(ಸ) ಹಲ್ಲೆ ನಡೆಸಲು ಆದೇಶಿಸಿದರು. ಹಝ್ರತ್ ಅಲಿ(ರ) ಅಮ್ರ್ ಬಿನ್ ಅಬ್ದುಲ್ಲಾಹ್ ಜುಮಇಯನ್ನು ಕೊಂದು ಹಾಕಿ, ಆ ಸಂಘವನ್ನು ಚದುರಿಸಿದರು. ಅನಂತರ ಸತ್ಯನಿಷೇಧಿಗಳ ಮತ್ತೊಂದು ಸಂಘದ ಮೇಲೆ ಆಕ್ರಮಣ ನಡೆಸಲು ಹಝ್ರತ್ ಪೈಗಂಬರ್(ಸ) ಆಜ್ಞಾಪಿಸಿದರು. ಶೈಬ ಬಿನ್ ಮಾಲಿಕ್‌ನನ್ನು ಹಝ್ರತ್ ಅಲಿ(ರ) ಕೊಂದು ಹಾಕಿದಾಗ, ಹಝ್ರತ್ ಜಿಬ್ರೀಲ್(ಅ) ಹೇಳಿದರು: ಯಾ ರಸೂಲಲ್ಲಾಹ್, ಖಂಡಿತವಾಗಿಯೂ ಇವರು ಸಹಾನುಭೂತಿಗೆ ಯೋಗ್ಯರಾಗಿದ್ದಾರೆ. ಎಂದರೆ ಹಝ್ರತ್ ಅಲಿಯ ಬಗ್ಗೆ ಹೀಗೆ ಹೇಳಿದರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಹೌದು, ಅಲಿ ನನ್ನಿಂದ ಮತ್ತು ನಾನು ಅಲಿಯಿಂದ. ಆಗ ಹಝ್ರತ್ ಜಿಬ್ರೀಲ್(ಅ) ಹೇಳಿದರು: ನಾನು ನಿಮ್ಮಿಬ್ಬರಿಂದ ಆಗಿರುವೆನು.
(ಶರಹ್ ಅಲ್‌ಅಲ್ಲಾಮ ಅಝ್ಝುರ್‌ಖಾನಿ ಅಲಲ್‌ಮವಾಹಿಬುದ್ದುನಿಯ, ಸಂಪುಟ–2, ಪುಟ–409, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1996) (ತಾರೀಖ್ ಅತ್ತಿಬರಿ, ಸಂಪುಟ–3, ಪುಟ–68, ದಾರುಲ್ ಫಿಕರ್ ಲಿತ್ತಬಾಅ ವಲಿನ್ನಶರ್ ಅತ್ತೌಝಿ ಬೈರೂತ್ 2002)

ಹಝ್ರತ್ ಅಲಿ(ರ) ವರದಿ ಮಾಡುತ್ತಾರೆ: ಉಹದ್ ಯುದ್ಧದಲ್ಲಿ ಹಝ್ರತ್ ಪೈಗಂಬರರ(ಸ) ಬಳಿಯಿಂದ ಜನರು ದೂರಸರಿದಾಗ, ನಾನು ಶಹೀದರ ಮೃತದೇಹಗಳನ್ನು ಪರಿಶೀಲಿಸಲು ಶುರುಮಾಡಿದೆ. ಅವರಲ್ಲಿ ಹಝ್ರತ್ ಪೈಗಂಬರರನ್ನು(ಸ) ಕಾಣಲಿಲ್ಲ. ಆಗ ನಾನು ಹೇಳಿದೆ: ಅಲ್ಲಾಹನಾಣೆ, ಹಝ್ರತ್ ಪೈಗಂಬರ್(ಸ) ಓಡಿ ಪರಾರಿಯಾಗುವ ವ್ಯಕ್ತಿಯಲ್ಲ. ಅವರನ್ನು ನಾನು ಹುತಾತ್ಮರಲ್ಲೂ ಕಾಣಲಿಲ್ಲ. ಆದರೆ ಅಲ್ಲಾಹನು ನಮ್ಮೊಡನೆ ಕೋಪಗೊಂಡಿದ್ದಾನೆ. ಆದ್ದರಿಂದ ಅವನು ತನ್ನ ಪ್ರವಾದಿಯನ್ನು ಮೇಲಕ್ಕೆ ಎತ್ತಿದ್ದಾನೆ. ಆದ್ದರಿಂದ ಕೊಲ್ಲಲ್ಪಡುವ ತನಕ ಹೋರಾಡುವುದೇ ನನಗೆ ಉತ್ತಮ. ಅನಂತರ ನಾನು ನನ್ನ ಖಡ್ಗದ ಕವಚವನ್ನು ತುಂಡುಮಾಡಿದೆ ಮತ್ತು ಸತ್ಯನಿಷೇಧಿಗಳ ಮೇಲೆ ಆಕ್ರಮಣ ನಡೆಸಿದೆ. ಅವರೆಲ್ಲರೂ ಚದುರಿದರು. ಆಗ ಹಝ್ರತ್ ಪೈಗಂಬರ್(ಸ) ಅವರ ನಡುವೆ ಇರುವುದಾಗಿ ನಾನು ಕಂಡೆನು.
(ಅಸದುಲ್‌ಗಾಬ ಲಿ ಮಾರಿಫತಿಸ್ಸಹಾಬ ಲಿಇಬ್ನೆ ಅಸೀರ್, ಸಂಪುಟ–4, ಪುಟ–94, ದಾರುಲ್ ಫಿಕರ್ ಲಿತ್ತಬಾಅವನ್ನಶರ್ ವತ್ತವಾಝೀ ಬೈರೂತ್ 2003)

ಇದು ಪ್ರೀತಿ ಮತ್ತು ಪ್ರೇಮದ ದೀರ್ಘ ವೃತ್ತಾಂತವಾಗಿದೆ. ಅದು ಅವರಿಬ್ಬರ ನಡುವೆ ಬಾಲ್ಯಕಾಲದಿಂದ ಶುರುವಾಗಿ, ಪ್ರತಿಯೊಂದು ಸಂದರ್ಭದಲ್ಲೂ ತನ್ನ ವೈಭವವನ್ನು ತೋರಿಸುತ್ತಾ ಇತ್ತು. ಉಹದ್ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ) ಗಾಯಗೊಂಡ ಬಗ್ಗೆ ಒಂದು ವರದಿಯಿದೆ. ಹಝ್ರತ್ ಸಹಲ್ ಬಿನ್ ಸಅದ್‌ರೊಡನೆ ಹಝ್ರತ್ ಪೈಗಂಬರರ(ಸ) ಗಾಯದ ಬಗ್ಗೆ ಕೇಳಲಾಯಿತು. ಅವರು ಹೇಳಿದರು: ನನ್ನೊಡನೆ ಕೇಳುತ್ತಿದ್ದೀರಾ? ಅಲ್ಲಾಹನಾಣೆ, ಯಾರು ಹಝ್ರತ್ ಪೈಗಂಬರರ(ಸ) ಗಾಯವನ್ನು ತೊಳೆಯುತ್ತಿದ್ದರು, ಯಾರು ನೀರನ್ನು ಹಾಕುತ್ತಿದ್ದರು ಮತ್ತು ಯಾವ ಮುಲಾಮು ಲೇಪಿಸಲಾಗಿತ್ತು ಎಂಬುವುದೆಲ್ಲ ನನಗೆ ಸರಿಯಾಗಿ ಗೊತ್ತಿದೆ. ಎಂದರೆ, ಈ ದೃಶ್ಯಗಳೆಲ್ಲ ನನ್ನ ಕಣ್ಣುಗಳ ಮುಂದಿವೆ. ಹಝ್ರತ್ ಸಹಲ್ ಹೇಳುತ್ತಾರೆ: ಹಝ್ರತ್ ಪೈಗಂಬರರ(ಸ) ಮಗಳಾದ ಹಝ್ರತ್ ಫಾತಿಮ(ರ) ಗಾಯವನ್ನು ತೊಳೆಯುತ್ತಿದ್ದರು. ಹಝ್ರತ್ ಅಲಿ(ರ) ಗುರಾಣಿಯಿಂದ ನೀರು ಹಾಕುತ್ತಿದ್ದರು. ನೀರು ಹಾಕುವುದರಿಂದ ರಕ್ತ ಹೆಚ್ಚು ಹೊರಗೆ ಬರುತ್ತಿದೆ ಎಂದು ಕಂಡಾಗ, ಹಝ್ರತ್ ಫಾತಿಮ ಚಾಪೆಯ ಒಂದು ತುಂಡನ್ನು ತೆಗೆದುಕೊಂಡು ಸುಟ್ಟರು ಮತ್ತು ಅದನ್ನು ಗಾಯಕ್ಕೆ ಅಂಟಿಸಿದರು. ಅದರಿಂದ ರಕ್ತ ಹರಿಯುವಿಕೆ ನಿಂತು ಹೋಯಿತು. ಆ ದಿನದಂದು ಹಝ್ರತ್ ಪೈಗಂಬರರ(ಸ) ಮುಂದಿನ ಹಲ್ಲು ಸಹ ಮುರಿದುಹೋಯಿತು ಮತ್ತು ಮುಖಕ್ಕೆ ಗಾಯವಾಯಿತು. ಪೈಗಂಬರರ(ಸ) ತಲೆಯಲ್ಲಿದ್ದ ಶಿರಕವಚ ತುಂಡಾಯಿತು. (ಸಹೀಹ್ ಬುಖಾರಿ, ಕಿತಾಬುಲ್ ಮಗಾಝಿ, ಹದೀಸ್–4075)

ಹಝ್ರತ್ ಸಈದ್ ಬಿನ್ ಮುಸಯ್ಯಬ್ ವರದಿ ಮಾಡುತ್ತಾರೆ: ಉಹದ್ ಯುದ್ಧದಲ್ಲಿ ಹಝ್ರತ್ ಅಲಿಗೆ(ರ) 16 ಗಾಯಗಳುಂಟಾಗಿದ್ದುವು. (ಅಸದುಲ್‌ಗಾಬ ಲಿ ಮಾರಿಫತಿಸ್ಸಹಾಬ ಲಿಇಬ್ನೆ ಅಸೀರ್, ಸಂಪುಟ–4, ಪುಟ–93, ದಾರುಲ್ ಫಿಕರ್ ಲಿತ್ತಬಾಅವನ್ನಶರ್ ವತ್ತವಾಝೀ ಬೈರೂತ್ 2003)

ಕಷ್ಟತೆಗಳ ಅಡಿಯಲ್ಲಿ ಅನುಗ್ರಹಗಳ ಖಜಾನೆಗಳು ಅಡಗಿರುತ್ತವೆ ಎಂಬ ವಿಷಯದ ಬಗ್ಗೆ ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಅಲಿ(ರ) ಉಹದ್ ಯುದ್ಧದಿಂದ ಮರಳಿಬಂದು ಹಝ್ರತ್ ಫಾತಿಮರಿಗೆ(ರ) ತನ್ನ ಖಡ್ಗವನ್ನು ನೀಡಿ ಹೇಳಿದರು ಈ ಖಡ್ಗದಿಂದರಕ್ತವನ್ನು ತೊಳೆ. ಇಂದು ಇದು ನನಗೆ ತುಂಬ ಸಹಾಯಕವಾಗಿತ್ತು. ಹಝ್ರತ್ ಅಲಿಯ ಈ ಮಾತನ್ನು ಹಝ್ರತ್ ಪೈಗಂಬರ್(ಸ) ಕೇಳುತ್ತಿದ್ದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಅಲಿ, ನಿನ್ನ ಖಡ್ಗದ ಹಾಗೆಯೇ ನಿನ್ನ ಸಹೋದರರಲ್ಲಿ ಹಲವರ ಖಡ್ಗಗಳು ಸಹ ಇಂದು ಕೌಶಲವನ್ನು ತೋರಿಸಿವೆ. ಹಝ್ರತ್ ಪೈಗಂಬರ್(ಸ) ಆರೇಳು ಸಹಾಬರ ಹೆಸರುಗಳನ್ನು ಪ್ರಸ್ತಾಪಿಸುತ್ತಾ ಹೇಳಿದರು: ಅವರ ಖಡ್ಗಗಳು ನಿನ್ನ ಖಡ್ಗಕ್ಕಿಂತ ಕಡಿಮೆಯೇನೂ ಆಗಿರಲಿಲ್ಲ. (ಮಸಾಎಬ್ ಕೇ ನೀಚೆ ಬರ್‌ಕತೋಂ ಕೆ ಖಝಾನೆ ಮಖ್‌ಫೀ ಹೋತೆ ಹೈಂ, ಅನ್ವಾರುಲ್ ಉಲೂಮ್, ಸಂಪುಟ–19, ಪುಟ–59)

ಅವರು ಸಹ ವಿಪತ್ತುಗಳನ್ನು ದಾಟುತ್ತಾ ಕೊನೆಗೆ ವಿಜಯ ಸಾಧಿಸಿದರು.

ಹಿಜರೀ 5, ಶವ್ವಾಲ್ ತಿಂಗಳಲ್ಲಿ ಖಂದಕ್ ಯುದ್ಧ ನಡೆದಿತ್ತು. ಈ ಸಂದರ್ಭದಲ್ಲಿ ಮದೀನದ ಮೇಲೆ ಸತ್ಯನಿಷೇಧಿಗಳ ಸೈನ್ಯ ಮುತ್ತಿಗೆ ಹಾಕಿದರು. ಈ ಬಾರಿ ಎಲ್ಲರೂ ಸೇರಿಕೊಂಡು ಆಕ್ರಮಣ ನಡೆಸಲು ಅವರ ಸರದಾರರು ಒಮ್ಮತಾಭಿಪ್ರಾಯದಿಂದ ತೀರ್ಮಾನಿಸಿದರು. ಕುದುರೆಯಲ್ಲಿ ಸವಾರಿಯಾಗಿರುವ ಹಝ್ರತ್ ಪೈಗಂಬರ್(ಸ) ಮತ್ತು ಅವರ ಸಹಾಬರ ಸಮೀಪಕ್ಕೆ ತಲುಪಲು ಹೊಂಡಗಳ ನಡುವೆ ಇಕ್ಕಟ್ಟಾದ ಯಾವುದಾದರೂ ದಾರಿಯನ್ನು ಸತ್ಯನಿಷೇಧಿಗಳು ಹುಡುಕುತ್ತಿದ್ದರು. ಆದರೆ ಅವರಿಗೆ ದಾಟಲು ಯಾವುದೇ

ಮಾರ್ಗ ಸಿಗಲಿಲ್ಲ. ಸತ್ಯನಷೇಧಿಗಳು ಹೇಳಿದರು: ಈ ಹೊಂಡ ತೋಡಿರುವ ಈ ತಂತ್ರ. ಇಂದಿನ ವರೆಗೂ ಅರೇಬಿಯಾದಲ್ಲಿ ಯಾರೂ ಮಾಡದಂತಹ ತಂತ್ರವಾಗಿದೆ. ಹಝ್ರತ್ ಪೈಗಂಬರರೊಂದಿಗೆ(ಸ) ಒಬ್ಬ ಪೇರ್ಶಿಯದ ವ್ಯಕ್ತಿಯಿದ್ದಾನೆ, ಅವನು ಈ ಸಲಹೆಯನ್ನು ಹಝ್ರತ್ ಪೈಗಂಬರರಿಗೆ(ಸ) ನೀಡಿದ್ದನು. ಇದು ಅವನದ್ದೇ ತಂತ್ರವಾಗಿದೆ. ಅನಂತರ ಮುಸ್ಲಿಮರು ಅಷ್ಟೇನೂ ಗಮನವಹಿಸದ ಒಂದು ಇಕಟ್ಟಾದ ದಾರಿಯ ಬಳಿಗೆ ಸತ್ಯನಿಷೇಧಿಗಳು ತಲುಪಿದರು. ಇಕ್ರಿಮ ಬಿನ್ ಅಬೂಜಹಲ್, ನೌಫಲ್ ಬಿನ್ ಅಬ್ದುಲ್ಲಾಹ್, ಝಿರಾರ್ ಬಿನ್ ಖತಾಬ್, ಹೈಬರ್ ಬಿನ್ ಅಬೂ ವಹಬ್, ಅಮ್ರ್ ಬಿನ್ ಅಬ್ದು ವುದ್ದ್ ಈ ಸ್ಥಳದಿಂದ ಹೊಂಡವನ್ನು ಪಾರುಮಾಡಿದರು. ಅಮ್ರ್ ಬಿನ್ ಅಬ್ದುವುದ್ದ್, ಹೋರಾಡಲು ಮುಸ್ಲಿಮರನ್ನು ಆಹ್ವಾನಿಸುತ್ತಾ ಈ ಪದ್ಯವನ್ನು ಹೇಳಿದರು:

**ವಲಖದ್ ಬುಹೈತು ಮಿನನ್ನಿದಾ        ಲಜಮ್ಇಹಿಮ್ ಹಲ್ ಮಿನ್ ಮುಬಾರಿಝ್.**

ಎಂದರೆ, ನಮ್ಮೊಡನೆ ಹೋರಾಡಲು ಯಾರಾದರೂ ಇದ್ದಾರೆಯೇ ಎಂದು ಅವರ (ಮುಸ್ಲಿಮರ) ಸಂಘವನ್ನು ಕರೆದು ಕರೆದು ಸ್ವತಃ ನನ್ನ ಕಂಠದ ಧ್ವನಿ ತಗ್ಗಿಹೋಗಿದೆ. ಇದಕ್ಕೆ ಉತ್ತರವಾಗಿ ಹಝ್ರತ್ ಅಲಿ(ರ) ಈ ಪದ್ಯ ಪಂಕ್ತಿಗಳನ್ನು ಹೇಳಿದರು:

**ಲಾ ತಅ್ಜಲ್ನ ಫಖದ್ ಅತಾಕ್        ಮುಜೀಬು ಸೌತಿಕ ಗೈರ್ ಆಜಿಝ್,**
**ಫೀ ನಿಯ್ಯತಿ ವ ಬಸೀರತಿ        ವ ಸಿದ್ಖಿ ಮನ್ಜಾ ಕುಲ್ಲ ಫಾಇಝ್.,**
**ಇನ್ನೀ ಲಾ ಅರ್ಜೂ ಅನ್ ಅಖೀಮ        ಮಾ ಅಲೈಕ ನಾಇಹತಿಲ್ ಜನಾಇಝ್,**
**ಮಿನ್ ಝರ್ಬತಿ ನಜ್ಲಾ ಯಬ್ಖೀ        ಧಿಕ್ರಹಾ ಇಂದಲ್ ಹಝಾಇಝ್.**

ನೀನು ಅವಸರಪಡಬೇಡ. ನಿನ್ನ ಧ್ವನಿಗೆ ಉತ್ತರ ಕೊಡುವವನು ನಿನ್ನ ಬಳಿಗೆ ಬಂದಿದ್ದಾನೆ. ಅಶಕ್ತಿ ಮತ್ತು ದೌರ್ಬಲ್ಯವನ್ನು ತೋರಿಸುವವನಲ್ಲ. ದೃಢನಿಶ್ಚಯ ಮತ್ತು ಸಂಪೂರ್ಣ ವೀಕ್ಷಣೆಯೊಂದಿಗೆ, ಯುದ್ಧ ಮೈದಾನದಲ್ಲಿ ಸ್ಥಿರಚಿತ್ತನಾಗಿ ಕೆಚ್ಚೆದೆಯಿಂದ ಇರುವುದೇ ಪ್ರತಿಯೊಬ್ಬ ವಿಜಯಿಯ ವಿಜಯದ ಮಾರ್ಗವಾಗಿದೆ. ಯುದ್ಧಗಳಲ್ಲಿ ಸದಾ ನೆನಪು ಉಳಿಯುವ ರೀತಿಯಲ್ಲಿ ನಾನು ಖಂಡಿತವಾಗಿಯೂ ನಿನ್ನನ್ನು ತೀವ್ರವಾಗಿ ಗಾಯಗೊಳಿಸಿ, ನಿನ್ನ ಮೃತದೇಹದ ಬಳಿ ಪ್ರಲಾಪಿಸುವವರನ್ನು ಒಟ್ಟುಗೂಡಿಸುವೆನು ಎಂದು ನನಗೆ ಪ್ರತೀಕ್ಷೆಯಿದೆ.

ಹಝ್ರತ್ ಅಲಿ ಹೇಳಿದರು: ಯಾ ರಸೂಲಲ್ಲಾಹ್, ನಾನು ಇವನ ವಿರುದ್ಧ ಹೋರಾಡಲು ಹೊರಡುವೆನು. ಆಗ ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿಗೆ(ರ) ತನ್ನ ಖಡ್ಗವನ್ನು ನೀಡಿದರು, ಅವರ ತಲೆಗೆ ಮುಂಡಾಸನ್ನು ಕಟ್ಟಿದರು ಮತ್ತು ಹೀಗೆ ದುಆ ಮಾಡಿದರು: ಹೇ ಅಲ್ಲಾಹ್, ಅಮ್ರ್ ಬಿನ್ ಅಬ್ದುವುದ್ದ್ ವಿರುದ್ಧ ಹೋರಾಡಲು ಹಝ್ರತ್ ಅಲಿಗೆ ನೆರವಾಗು. ಹಝ್ರತ್ ಅಲಿ ಅವರ ವಿರುದ್ಧ ಹೋರಾಡಲು ಧಾವಿಸಿದರು. ಇಬ್ಬರೂ ಪರಸ್ಪರ ಹೋರಾಡಲು ಸಮೀಪವಾದರು. ಹೋರಾಡುವಾಗ ಇಬ್ಬರ ನಡುವೆ ಧೂಳೆದ್ದಿತ್ತು. ಹಝ್ರತ್ ಅಲಿ(ರ) ಅವರ ಮೇಲೆ ಹಲ್ಲೆ ನಡೆಸಿ ಕೊಲೆಮಾಡಿದರು ಮತ್ತು ಅಲ್ಲಾಹು ಅಕ್ಬರ್ ಎಂದು ಘೋಷಿಸಿದರು. ಹೀಗೆ ಹಝ್ರತ್ ಅಲಿ(ರ) ಅವರನ್ನು ಕೊಂದುಹಾಕಿದರು ಎಂದು ನಮಗೆ ಗೊತ್ತಾಯಿತು. ಅಮ್ರ್‌ನ ಸಂಗಡಿಗ ಹಿಮ್ಮೆಟ್ಟುತ್ತಾ ಓಡಿಹೋದನು ಮತ್ತು ತನ್ನ ಕುದುರೆಯ ಕಾರಣದಿಂದ ಜೀವವನ್ನು ಕಾಪಾಡಲು ಸಾಧ್ಯವಾಯಿತು. (ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝ ಬಶೀರ್ ಅಹ್ಮದ್ ಸಾಃಇಬ್ ಎಂ.ಎ, ಪುಟ–573) (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–2, ಪುಟ–283, ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್ 1996) (ಅಲ್‌ಬದಾಯ ವನ್ನಹಾಯ, ಸಂಪುಟ–2, ಭಾಗ–4, ಪುಟ–115, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2001)

ಇದನ್ನು ವಿಶದವಾಗಿ ವಿವರಿಸುತ್ತಾ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ಅಮ್ರ್ ಒಬ್ಬ ಅತ್ಯಂತ ಹೆಸರುವಾಸಿಯಾದ ಖಡ್ಗಧಾರಿಯಾಗಿದ್ದನು. ತನ್ನ ಶೌರ್ಯದ ಕಾರಣದಿಂದ ಒಂದು ಸಾವಿರ ಸೈನಿಕರಿಗೆ ಸಮಾನವೆಂದು ಅವರ ಬಗ್ಗೆ ಭಾವಿಸಲಾಗುತ್ತಿತ್ತು. ಅವರು ಬದ್ರ್ ಯುದ್ಧದಲ್ಲಿ ಪರಾಜಿತರಾಗಿ, ನಷ್ಟಕ್ಕೆ ಒಳಗಾಗಿ ಮರಳಬೇಕಾಗಿ ಬಂದ ಕಾರಣದಿಂದ ಅವರ ಹೃದಯ ಮುಸ್ಲಿಮರ ವಿರುದ್ಧ ಹಗೆ ಮತ್ತು ಪ್ರತಿಕಾರದ ಭಾವನೆಯಿಂದ ತುಂಬಿತ್ತು. ಅವನು ಯುದ್ಧ ಮೈದಾನಕ್ಕೆ ಬಂದ ಕೂಡಲೇ ಅತ್ಯಂತ ಅಹಂಕಾರದ ಶೈಲಿಯಲ್ಲಿ ಹೋರಾಡಲು ಮುಸ್ಲಿಮರನ್ನು ಆಹ್ವಾನಿಸಿದನು. ಯಾರಾದರೂ ನನ್ನೊಡನೆ ಹೋರಾಡಲು ತಯಾರಿದ್ದಾರೆಯೇ? ಎಂದು ಕೇಳುತ್ತಿದ್ದನು. ಕೆಲವು ಸಹಾಬರು ಅವರನ್ನು ಎದುರಿಸಲು ಹಿಂಜರಿಯುತ್ತಿದ್ದರು. ಆದರೆ, ಹಝ್ರತ್ ಪೈಗಂಬರರ(ಸ) ಅನುಮತಿಯಿಂದ ಹಝ್ರತ್ ಅಲಿ(ರ) ಹೋರಾಡಲು ಮುಂದಕ್ಕೆ ಧಾವಿಸಿದರು. ಹಝ್ರತ್ ಪೈಗಂಬರ್(ಸ) ತನ್ನ ಖಡ್ಗವನ್ನು ಅವರಿಗೆ ಕೊಟ್ಟರು. ಅವರಿಗಾಗಿ ದುಆ ಮಾಡಿದರು. ಹಝ್ರತ್ ಅಲಿ(ರ) ಮುಂದಕ್ಕೆ ಧಾವಿಸಿ ಅಮ್ರ್‌ರೊಡನೆ ಹೇಳಿದರು: ಖುರೈಶಿಯರಲ್ಲಿ ಯಾರಾದರೂ ಎರಡು ಸಂಗತಿಗಳನ್ನು ಮಾಡಲು ವಿನಂತಿಸಿದರೆ, ಅವರೊಂದು ಮಾತನ್ನು ನೀನು ಖಂಡಿತ ಅಂಗೀಕರಿಸುತ್ತೀಯ ಎಂದು ನಾನು ಕೇಳಿದ್ದೇನೆ. ಹೌದೆಂದು ಅಮ್ರ್ ಹೇಳಿದನು. ಆಗ ಹಝ್ರತ್ ಅಲಿ(ರ) ಹೇಳಿದರು: ಹಾಗಾದರೆ, ನಾನು ನಿನ್ನೊಡನೆ ಹೇಳುವ ಮೊದಲ ಸಂಗತಿಯೇನೆಂದರೆ, ನೀನು ಮುಸ್ಲಿಮನಾಗು ಮತ್ತು ಹಝ್ರತ್ ಪೈಗಂಬರರನ್ನು(ಸ) ನಂಬಿಕೊಂಡು ದೈವಿಕ ಅನುಗ್ರಹಗಳ ವಾರಸುದಾರನಾಗು. ಹಝ್ರತ್ ಅಮ್ರ್ ಹೇಳಿದನು: ಇದು ಸಾಧ್ಯವಲ್ಲ. ಹಝ್ರತ್ ಅಲಿ(ರ) ಹೇಳಿದರು: ಇದು ಅಂಗೀಕರಿಸಲು ಸಾಧ್ಯವಿಲ್ಲವೆಂದಾದರೆ, ಬಾ, ನನ್ನೊಡನೆ ಕಾದಾಡಲು ತಯಾರಾಗು. ಇದನ್ನು ಕೇಳಿ ಅಮ್ರ್ ನಗಲು ಶುರುಮಾಡಿದನು ಮತ್ತು ಹೀಗೆ ಹೇಳಿದನು: ನನ್ನೊಡನೆ ಹೀಗೆ ಹೇಳಲು ಯಾರಿಗಾದರೂ ಸಾಧ್ಯವೆಂದು ನನಗೆ ತೋರುವುದಿಲ್ಲ. ಅನಂತರ ಅವನು ಹಝ್ರತ್ ಅಲಿಯ(ರ) ಹೆಸರು ಮತ್ತು ಕುಟುಂಬದ ಬಗ್ಗೆ ಕೇಳಿದನು. ಅವರು ಹೇಳಿದಾಗ, ಅವನು ಹೇಳಿದನು: ಎಲೈ ನನ್ನ ಸಹೋದರ ಪುತ್ರ, ನೀನೀಗ ಇನ್ನೂ ಚಿಕ್ಕವನು. ನಾನು ನಿನ್ನ ರಕ್ತವನ್ನು ಸುರಿಸಲು ಬಯಸುವುದಿಲ್ಲ. ನಿಮ್ಮಲ್ಲಿ ದೊಡ್ಡವರಾದ ಯಾರನ್ನಾದರೂ ಕಳುಹಿಸು. ಹಝ್ರತ್ ಅಲಿ(ರ) ಇದಕ್ಕೆ ಉತ್ತರವಾಗಿ ಹೇಳಿದರು: ನೀನು ನನ್ನ ರಕ್ತವನ್ನು ಹರಿಯಲು ಬಯಸುವುದಿಲ್ಲವಾದರೂ ನನಗೆ ನಿನ್ನ ರಕ್ತವನ್ನು ಹರಿಸಲು ಹಿಂಜರಿಕೆಯಿಲ್ಲ. ಇದನ್ನು ಕೇಳಿದಾಗ, ಅಮ್ರ್ ಆವೇಶದಿಂದ ಅಂಧನಾಗಿ ತನ್ನ ಕುದುರೆಯಿಂದ ಕೆಳಗೆ ಜಿಗಿದನು ಮತ್ತು ಕುದುರೆಯಲ್ಲಿ ಭೀರುವಿನಂತೆ ಹಿಮ್ಮೆಟ್ಟಿ ಮರಳಿ ಹೋಗುವವನಲ್ಲ ಎಂದು ತೋರಿಸಲು ಅದರ ಹಿಂಗಾಲನ್ನು ಮುರಿದುಹಾಕಿದನು. ಅನಂತರ ಬೆಂಕಿಯ ಜ್ವಾಲೆಯ ಹಾಗೆ ಹುಚ್ಚನಂತೆ ಹಝ್ರತ್ ಅಲಿಯ(ರ) ಕಡೆಗೆ ಧಾವಿಸಿದನು ಮತ್ತು ಹಝ್ರತ್ ಅಲಿಯ ಮೇಲೆ ಶಕ್ತವಾಗಿ ಖಡ್ಗದಿಂದ ಹಲ್ಲೆ ನಡೆಸಿದನು. ಅದು ಹಝ್ರತ್ ಅಲಿಯ(ರ) ಗುರಾಣಿಯನ್ನು ತುಂಡರಿಸುತ್ತಾ ಅವರ ಹಣೆಗೆ ತಗುಲಿತು ಮತ್ತು ಅಲ್ಪವಾಗಿ ಗಾಯಗೊಳಿಸಿತು. ಆದರೆ ಹಝ್ರತ್ ಅಲಿ(ರ)ಅದೇ ಕ್ಷಣದಲ್ಲಿ, ಅಲ್ಲಾಹು ಅಕ್ಬರ್ ಎಂದು ಘೋಷಿಸುತ್ತಾ ಅವನ ಮೇಲೆ ಹಲ್ಲೆ ನಡೆಸಿದಾಗ, ತನ್ನನ್ನು ರಕ್ಷಿಸಿಕೊಳ್ಳಲು ಅವನಿಗೆ ಸಾಧ್ಯವಾಗಲಿಲ್ಲ. ಹಝ್ರತ್ ಅಲಿಯ(ರ) ಖಡ್ಗ ಅವನ ಭುಜಗಳನ್ನು ಮುರಿಯುತ್ತಾ ಕೆಳಗೆ ಇಳಿಯಿತು. ಹೀಗೆ ಅಮ್ರ್ ನಡುಗುತ್ತಾ ಜೀವತೆತ್ತನು. (ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–588–589)

ಅಮ್ರ್ ಬಿನ್ ಅಬ್ದು ವದ್ದ್ ಕೊಲ್ಲಲ್ಪಟ್ಟ ನಂತರ, ಅವರ ಶವ ಶರೀರವನ್ನು ಹತ್ತು ಸಾವಿರ ದಿರ್ಹಮ್‌ಗೆ ಖರೀದಿ ಮಾಡುವೆವು ಎಂದು ಸತ್ಯನಿಷೇಧಿಗಳು ಹಝ್ರತ್ ಪೈಗಂಬರರಿಗೆ(ಸ) ಸಂದೇಶ ಕಳುಹಿಸಿದರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಅದನ್ನು ತೆಗೆದುಹೋಗಿರಿ. ನಾವು ಶವಶರೀರದ ಮೌಲ್ಯವನ್ನು ಪಡೆಯುವವರಲ್ಲ.
(ಅಲ್‌ಬದಾಯ ವನ್ನಹಾಯ, ಸಂಪುಟ–2, ಭಾಗ–4, ಪುಟ–116, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಹಝ್ರತ್ ಬರಾ ಬಿನ್ ಆಝಿಬ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಹುದೈಬಿಯಾದ ಜನರೊಂದಿಗೆ ಮೈತ್ರಿಸಂಧಾನ ಮಾಡಿದಾಗ, ಹಝ್ರತ್ ಅಲಿ(ರ) ಅವರ ನಡುವೆ ಒಪ್ಪಂದ ಬರೆದಿದ್ದರು. ಅದರಲ್ಲಿ ಹಝ್ರತ್ ಪೈಗಂಬರರ(ಸ) ಹೆಸರು ಮುಹಮ್ಮದ್ ರಸೂಲುಲ್ಲಾಹ್ ಎಂದು ಬರೆದರು. ಮುಹಮ್ಮದ್ ರಸೂಲುಲ್ಲಾಹ್ ಎಂದು ಬರೆಯಬಾರದು, ನೀವು ರಸೂಲ್ ಆಗಿದ್ದರೆ ನಾವು ನಿಮ್ಮ ವಿರುದ್ಧ ಹೋರಾಡುತ್ತಿರಲಿಲ್ಲ ಎಂದು ಮುಶ್ರಿಕರು ಹೇಳಿದರು. ಅದನ್ನು ಅಳಿಸಲು ಹಝ್ರತ್ ಅಲಿಯೊಡನೆ ಹಝ್ರತ್ ಪೈಗಂಬರ್(ಸ) ಹೇಳಿದರು. ಅದನ್ನು ಅಳಿಸಲು ನನಗೆ ಸಾಧ್ಯವೆಂದು ನನಗೆ ಅನಿಸುವುದಿಲ್ಲ ಎಂದು ಹಝ್ರತ್ ಅಲಿ(ರ) ಹೇಳಿದರು. ಆಗ ಹಝ್ರತ್ ಪೈಗಂಬರ್(ಸ) ಅದನ್ನು ತನ್ನ ಕೈಯಿಂದ ಅಳಿಸಿದರು. ಹಝ್ರತ್ ಪೈಗಂಬರ್(ಸ) ಮತ್ತು ಪೈಗಂಬರರ(ಸ) ಸಹಾಬರು ಮೂರು ದಿನಗಳಷ್ಟು ಕಾಲ ಮಾತ್ರ ಮಕ್ಕದಲ್ಲಿ ಇರುವರು ಮತ್ತು ಅಸ್ತ್ರಗಳನ್ನು ಜಲೋಬಾನನಲ್ಲಿ ಇಟ್ಟು ಮಕ್ಕಕ್ಕೆ ಪ್ರವೇಶಿಸುವರು ಎಂಬ ನಿಬಂಧನೆಯೊಂದಿಗೆ ಒಪ್ಪಂದ ಮಾಡಲಾಯಿತು. ವರದಿಗಾರ ಹೇಳುತ್ತಾರೆ: ಜಲೋಬಾನ್ ಎಂದರೆ ಏನೆಂದು ಜನರು ಕೇಳಿದರು. ಖಡ್ಗವನ್ನು ಅದರ ಕವಚದೊಂದಿಗೆ ಇರಿಸಲಾಗುವ ಹೊರಕವಚವೆಂದು ಹೇಳಲಾಯಿತು.
(ಸಹೀಹ್ ಬುಖಾರಿ, ಕಿತಾಬುಸ್ಸುಲಹ್, ಹದೀಸ್–2698, ಉರ್ದು ಅನುವಾದ ಸಹೀಹ್ ಬುಖಾರಿ, ಸಂಪುಟ–5, ಪುಟ–12–13, ಮುದ್ರಣ ನಝಾರತ್ ಇಶಾಅತ್ ರಬ್ವಾಹ್)

ಈ ಘಟನೆಯನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ಸ್ವಲ್ಪ ವಿಶದವಾಗಿ ಹೀಗೆ ವಿವರಿಸಿರುವರು: ಹುದೈಬಿಯಾ ಸಂಧಿಯ ಸಭೆಯಲ್ಲಿ ಹಝ್ರತ್ ಪೈಗಂಬರ್(ಸ) ಕುಳಿತುಕೊಂಡಿದ್ದಾಗ ಮತ್ತು ಸತ್ಯನಿಷೇಧಿಗಳು ಒಪ್ಪಂದದ ಶರತ್ತುಗಳನ್ನು ಮುಂದಿರಿಸುತ್ತಿದ್ದಾಗ, ಸಹಾಬರು ತಮ್ಮ ಹೃದಯಗಳಲ್ಲಿ ಬೆಂಕಿಯನ್ನು ಇರಿಸಿಕೊಂಡಿರುವೆಂಬಂತೆ ಕುಳಿತುಕೊಂಡಿದ್ದರು. ಇಪ್ಪತ್ತು ವರ್ಷಗಳಿಂದ ಮುಸ್ಲಿಮರ ಮೇಲೆ ಸತ್ಯನಿಷೇಧಿಗಳು ಮಾಡುತ್ತಿದ್ದ ಹಿಂಸೆಯ ಬಿಸಿಯಿಂದ ಮುಸ್ಲಿಮರ ಹೃದಯಗಳು ಉರಿಯುತ್ತಿದ್ದುವು. ಮುಸ್ಲಿಮರ ಖಡ್ಗಗಳು ಅವುಗಳ ಕವಚಗಳಿಂದ ಹೊರಗೆ ಬರುತ್ತಿದ್ದುವು. ಸತ್ಯನಿಷೇಧಿಗಳು ಮುಸ್ಲಿಮರ ಮೇಲೆ ಮಾಡಿದ ದೌರ್ಜನ್ಯಗಳ ಪ್ರತಿಕಾರವನ್ನು ಸಂದರ್ಭ ಸಿಕ್ಕರೆ ಮಾಡಲು ಬಯಸುತ್ತಿದ್ದರು. ಆದರೆ ಹಝ್ರತ್ ಪೈಗಂಬರ್(ಸ) ಸತ್ಯನಿಷೇಧಿಗಳ ಮಾತುಗಳನ್ನು ಕೇಳಿದರು. ಬನ್ನಿರಿ ನಾವು ಪರಸ್ಪರ ಮೈತ್ರಿಸಂಧಾನ ಮಾಡುವ ಎಂದು ಸತ್ಯನಿಷೇಧಿಗಳ ಕಡೆಯಿಂದ ಸಲಹೆ ಬಂದಾಗ, ಹಝ್ರತ್ ಪೈಗಂಬರ್(ಸ) ಹೇಳಿದರು: ಬಹಳ ಉತ್ತಮ, ನಾವು ಸಂಧಾಣ ಮಾಡೋಣ. ಸತ್ಯನಿಷೇಧಿಗಳು ಹೇಳಿದರು: ಇದಕ್ಕಿರುವ ಶರತ್ತೇನೆಂದರೆ, ಈ ವರ್ಷ ನೀವು ಉಮ್ರ ಮಾಡುವಂತಿಲ್ಲ. ಹಝ್ರತ್ ಪೈಗಂಬರ್(ಸ) ಹೇಳಿದರು: ಸರಿ, ಈ ವರ್ಷ ನಾವು ಉಮ್ರ ಮಾಡುವುದಿಲ್ಲ. ಅನಂತರ ಅವರು ಹೇಳಿದರು: ನೀವು ಮುಂದಿನ ವರ್ಷ ಉಮ್ರ ಮಾಡಲು ಬರುವಾಗ ನೀವು ಮಕ್ಕದಲ್ಲಿ ಮೂರು ದಿನಗಳಿಗಿಂತ ಹೆಚ್ಚು ಕಾಲ ತಂಗಬಾರದು. ಹಝ್ರತ್ ಪೈಗಂಬರ್(ಸ) ಹೇಳಿದರು: ಬಹಳ ಉತ್ತಮ, ನನಗೆ ಈ ನಿಬಂಧನೆ ಸಹ ಸ್ವೀಕಾರಾರ್ಹವಾಗಿದೆ. ಅನಂತರ ಅವರು ಹೇಳಿದರು: ಅಸ್ತ್ರಗಳೊಂದಿಗೆ ಮಕ್ಕಕ್ಕೆ ಪ್ರವೇಶಿಸಲು ಅನುಮತಿಯಿಲ್ಲ. ಹಝ್ರತ್ ಪೈಗಂಬರ್(ಸ) ಹೇಳಿದರು: ಬಹಳ ಉತ್ತಮ; ನಾವು ಶಸ್ತ್ರಸಜ್ಜಿತರಾಗಿ ಮಕ್ಕಕ್ಕೆ ಪ್ರವೇಶಿಸುವುದಿಲ್ಲ. ಮೈತ್ರಿಯ ಒಪ್ಪಂದ ಮಾಡಲಾಗುತ್ತಿತ್ತು. ಸಹಾಬರ ಹೃದಯಗಳು ಒಳಗಿಂದೊಳಗೆ ಆವೇಶದಿಂದ ಕುದಿಯುತ್ತಿತ್ತು. ಕೋಪದಿಂದ ಕೆಂಡವಾಗುತ್ತಿತ್ತು. ಆದರೆ ಏನೂ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರನ್ನು ಒಪ್ಪಂದ ಬರೆಸಲು ನಿಶ್ಚಯಿಸಲಾಗಿತ್ತು. ಒಂದು ಕಡೆ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮತ್ತು ಅವರ ಸಂಗಡಿಗರ ಹಾಗೂ ಮತ್ತೊಂದು ಕಡೆ ಮಕ್ಕಾದ ಇಂತಿಂತಿಹ ಸರದಾರರು ಮತ್ತು ಮಕ್ಕಾ ನಿವಾಸಿಯರ ನಡುವೆ ಈ ಒಪ್ಪಂದವನ್ನು ಮಾಡಲಾಗುತ್ತಿದೆ ಎಂದು ಅವರು ಬರೆದರು. ಇದರಿಂದ ಸತ್ಯನಿಷೇಧಿಗಳು ಕೋಪಗೊಂಡರು. ಅವರು ಹೇಳಿದರು: ಈ ಪದಗಳನ್ನು ನಮಗೆ ಸಹಿಸಲು ಸಾಧ್ಯವಲ್ಲ. ಏಕೆಂದರೆ, ನಾವು ಮುಹಮ್ಮದನ್ನು (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ರಸೂಲುಲ್ಲಾಹ್ ಎಂದು ಅಂಗೀಕರಿಸುವುದಿಲ್ಲ. ಅಂಗೀಕರಿಸುವರಾದರೆ, ನಾವು ಅವರೊಡನೆ ಯುದ್ಧವನ್ನೇಕೆ ಮಾಡಬೇಕು. ನಾವಂತು ಅವರೊಡನೆ ಮುಹಮ್ಮದ್ ಬಿನ್ ಅಬ್ದುಲ್ಲಾಹ್ ಎಂಬ ನೆಲೆಯಲ್ಲಿ ಒಪ್ಪಂದ ಮಾಡುತ್ತಿದ್ದೇವೆ. ಮುಹಮ್ಮದ್ ರಸೂಲುಲ್ಲಾಹ್ ಎಂಬ ನೆಲೆಯಲ್ಲಿ ಒಪ್ಪಂದ ಮಾಡುತ್ತಿಲ್ಲ. ಆದ್ದರಿಂದ ಈ ಪದಗಳನ್ನು ಒಪ್ಪಂದದಲ್ಲಿ ಬರೆಯಬಾರದು. ಈ ಸಮಯದಲ್ಲಿ ಸಹಾಬರ ಆವೇಶಕ್ಕೆ ಯಾವುದೇ ಮಿತಿಯಿಲ್ಲವಾಯಿತು. ಕೋಪದಿಂದ ನಡುಗಲು ತೊಡಗಿದರು. ಈಗ ಅಲ್ಲಾಹನು ನಮಗೆ ಇನ್ನೊಂದು ಸಂದರ್ಭವನ್ನು ಒದಗಿಸಿ ಕೊಟ್ಟಿದ್ದಾನೆ ಹಾಗೂ ಹಝ್ರತ್ ಪೈಗಂಬರ್(ಸ) ಅವರ ಈ ಮಾತನ್ನು ಅಂಗೀಕರಿಸಲಾರರು ಮತ್ತು ನಮಗೆ ಅವರೊಡನೆ ಯುದ್ಧಮಾಡಿ ನಮ್ಮ ಹೃದಯದ ಕೋಪವನ್ನು ಹೊರಹಾಕುವ ಸಂದರ್ಭ ಲಭಿಸಿದೆ ಎಂದು ಸಹಾಬರು ಭಾವಿಸಿದರು. ಆದರೆ ಹಝ್ರತ್ ಪೈಗಂಬರ್(ಸ) ಹೇಳಿದರು: ಇವರು ಸರಿಯಾಗಿ ಹೇಳುತ್ತಿದ್ದಾರೆ. ಒಪ್ಪಂದದಿಂದ ರಸೂಲುಲ್ಲಾಹ್ ಎಂಬ ಪದವನ್ನು ಅಳಿಸಬೇಕು. ಆ ಪದವನ್ನು ಅಳಿಸಲು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರೊಡನೆ ಹಝ್ರತ್ ಪೈಗಂಬರ್(ಸ) ಹೇಳಿದರು. ಆದರೆ, ಅನುಸರಣೆ ಮತ್ತು ವಿಧೇಯತೆಯ ಅತ್ಯಂತ ಉನ್ನತ ಮಾದರಿಯಾದ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಹೃದಯ ಕೂಡ ಇದರಿಂದ ನಡುಗಲು ಶುರುವಾಯಿತು. ಅವರ ಕಣ್ಣುಗಳಿಂದ ಕಣ್ಣೀರುಬಂತು. ಅವರು ಹೇಳಿದರು: ಯಾ ರಸೂಲಲ್ಲಾಹ್, ನನಗೆ ಈ ಪದವನ್ನು ಅಳಿಸಲು ಸಾಧ್ಯವಾಗುತ್ತಿಲ್ಲ. ಹಝ್ರತ್ ಪೈಗಂಬರ್(ಸ) ಹೇಳಿದರು: ತನ್ನಿರಿ, ನನಗೆ ಆ ಕಾಗದಪತ್ರವನ್ನು

ಕೊಡಿರಿ. ಹಝ್ರತ್ ಪೈಗಂಬರ್(ಸ) ಕಾಗದವನ್ನು ಪಡೆದುಕೊಂಡು ರಸೂಲುಲ್ಲಾಹ್ ಎಂಬ ಪದವನ್ನು ತನ್ನ ಕೈಯಿಂದ ಮಿಟಾಯಿಸಿದರು. (ಖುತ್ಬಾತೆ ಮಹ್ಮೂದ್, ಸಂಪುಟ–20, ಪುಟ–379–381, ಖುತ್ಬ ಜುಮ್‌ಅ 08–12–1939)

ಹಿಜರೀ 7, ಮುಹರ್ರಮ್ ಮತ್ತು ಸಫರ್ ತಿಂಗಳಲ್ಲಿ ಖೈಬರ್ ಯುದ್ಧ ನಡೆದಿತ್ತು. ಇದರ ಬಗ್ಗೆ ಸಹೀಹ್ ಮುಸ್ಲಿಮಿನಲ್ಲಿ ಒಂದು ದೀರ್ಘವಾದ ವರದಿಯಿದೆ. ಹಝ್ರತ್ ಸಲ್ಮಾ ಬಿನ್ ಅಕೂಅ್ ವರದಿ ಮಾಡುತ್ತಾರೆ: ನಾವು ಖೈಬರ್‌ಗೆ ತಲುಪಿದಾಗ, ಅವರ ಸರದಾರ ಮರ್ಹಬ್ ತನ್ನ ಖಡ್ಗವನ್ನು ಎತ್ತಿಹಿಡಿಯುತ್ತಾ ಧಾವಿಸಿದನು ಮತ್ತು ಹೀಗೆ ಹೇಳುತ್ತಿದ್ದನು: ನಾನು ಶಸ್ತ್ರಸಜ್ಜಿತ, ಶೂರ ಮತ್ತು ಅನುಭವಿಯಾದ ಮರ್ಹಬ್ ಆಗಿರುವೆನು ಎಂದು ಖೈಬರ್‌ಗೆ ಗೊತ್ತಿದೆ. ಯುದ್ಧಗಳು ತನ್ನ ಬೆಂಕಿಯ ಜ್ವಾಲೆಯನ್ನು ಜ್ವಲಿಸುತ್ತಾ ಬರುವಾಗ, ನನ್ನ ಶೌರ್ಯ ಬಗ್ಗೆ ಗೊತ್ತಾಗುತ್ತದೆ. ವರದಿಗಾರ ಹೇಳುತ್ತಾರೆ: ಅವರನ್ನು ಎದುರಿಸಲು ನನ್ನ ಚಿಕ್ಕಪ್ಪರಾದ ಆಮಿರ್ ಹೊರಟರು ಮತ್ತು ಹೀಗೆ ಹೇಳಿದರು: "ನಾನು ಶಸ್ತ್ರಸಜ್ಜಿತ, ಶೂರ ಮತ್ತು ಅಪಾಯಗಳಲ್ಲಿ ಸ್ವತಃ ಇಡುವವನಾದ ಆಮಿರ್ ಆಗಿರುವನೆಂದು ಖೈಬರ್‌ಗೆ ಗೊತ್ತಿದೆ." ವರದಿಗಾರ ಹೇಳುತ್ತಾರೆ: ಇಬ್ಬರು ಪರಸ್ಪರ ಹಲ್ಲೆ ನಡೆಸಿದರು. ಮರ್ಹಬಿನ ಖಡ್ಗ ಆಮಿರರ ಗುರಾಣಿಗೆ ತಗುಲಿತು. ಆಮಿರ್ ಅವನ ಮೇಲೆ ಕೆಳಗಿನಿಂದ ಹಲ್ಲೆ ನಡೆಸಲು ತೊಡಗಿದನು. ಆಗ ಅವರ ಖಡ್ಗವೇ ಅವರಿಗೆ ತಗುಲಿ ಅವರ ಒಂದು ನರ ಮುರಿದು ಹೋಯಿತು. ಇದರಿಂದ ಅವರು ಶಹೀದ್ ಆದರು. ಸಲ್ಮಾ ಹೇಳುತ್ತಾರೆ: ಆಮಿರಿನ ಕರ್ಮಗಳು ವ್ಯರ್ಥವಾಯಿತು. ಅವರು ತನ್ನನ್ನು ತಾನೇ ಕೊಂದು ಹಾಕಿದ್ದಾರೆ ಎಂದು ಹಝ್ರತ್ ಪೈಗಂಬರರ(ಸ) ಕೆಲವು ಸಹಾಬಿವರ್ಯರು ಹೇಳುತ್ತಿದ್ದರು. ನಾನು ಅಳುತ್ತಾ ಹಝ್ರತ್ ಪೈಗಂಬರರ(ಸ) ಬಳಿಗೆ ಹೋದೆ. ನಾನು ಹೇಳಿದೆ: ಯಾ ರಸೂಲಲ್ಲಾಹ್. ಆಮಿರಿನ ಕರ್ಮಗಳು ವ್ಯರ್ಥವಾಯಿತೇ? ಹೀಗೆ ಯಾರು ಹೇಳುತ್ತಾರೆಂದು ಹಝ್ರತ್ ಪೈಗಂಬರ್(ಸ) ಕೇಳಿದರು. ನಿಮ್ಮ ಕೆಲವು ಸಹಾಬರು ಎಂದು ನಾನು ಹೇಳಿದೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಹೀಗೆ ಹೇಳಿದವರು ತಪ್ಪಾಗಿ ಹೇಳಿರುವರು. ಆಮಿರ್‌ಗೆ ಇಮ್ಮಡಿ ಪ್ರತಿಫಲವಿದೆ.ಅನಂತರ ಹಝ್ರತ್ ಪೈಗಂಬರ್(ಸ) ನನ್ನನ್ನು ಹಝ್ರತ್ ಅಲಿಯ(ರ) ಬಳಿಗೆ ಕಳುಹಿಸಿದರು. ಹಝ್ರತ್ ಅಲಿಗೆ(ರ) ಕಣ್ಣುಬೇನೆಯಿತ್ತು. ಅವರನ್ನು ಕರೆದುಕೊಂಡು ಹಝ್ರತ್ ಪೈಗಂಬರರ(ಸ) ಬಳಿಗೆ ಹೋದೆನು. ಹಝ್ರತ್ ಪೈಗಂಬರ್(ಸ) ಅವರ ಕಣ್ಣುಗಳಿಗೆ ಲಾಲಾರಸವನ್ನು ಹಾಕಿದಾಗ ಅವುಗಳು ಶಮನಗೊಂಡವು. ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನು ಮತ್ತು ಅವನ ಪ್ರವಾದಿಯನ್ನು ಯಾರು ಪ್ರೀತಿಸುತ್ತಾರೋ ಹಾಗೂ ಅಲ್ಲಾಹನು ಮತ್ತು ಅವನ ಪ್ರವಾದಿ ಯಾರನ್ನು ಪ್ರೀತಿಸುತ್ತಾರೋ ಅವರಿಗೆ ನಾನು ಧ್ವಜವನ್ನು ಕೊಡುವೆನು. ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿಗೆ(ರ) ಧ್ವಜವನ್ನು ಕೊಟ್ಟರು. ಮರ್ಹಬ್ ಧಾವಿಸಿದನು ಮತ್ತು ಹೀಗೆ ಹೇಳಿದನು: ನಾನು ಯುದ್ಧದ ಬೆಂಕಿ ಜ್ವಲಿಸುತ್ತಿರುವಾಗ ಶಸ್ತ್ರಸಜ್ಜಿತನಾಗಿ, ಶೌರ್ಯದಿಂದ ಹೋರಾಡುವ ಅನುಭವಿ ವ್ಯಕ್ತಿಯಾಗಿರುವ ಮರ್ಹಬ್ ಆಗಿರುವೆನು ಎಂದು ಖೈಬರ್‌ಗೆ ಗೊತ್ತಿದೆ. ಹಝ್ರತ್ ಅಲಿ(ರ) ಹೇಳಿದರು:

**ಅನಲ್ಲಧೀ ಸಮ್ಮತನೀ ಉಮ್ಮೀ ಹೈದರ.**
**ಕಲೀಸ ಗಾಬಾತಿನ್ ಕರಿಯಿಹಿಲ್ ಮಂಝುರಾ.**
**ಔಫೀಹಿಂ ಬಿಸ್ಸಾಅ್ ಕೈಲಸ್ಸಂದರ.**

ನನ್ನ ತಾಯಿ ನನಗೆ ಹೈದರ್ ಎಂದು ಹೆಸರು ಇರಿಸಿದ್ದಳು. ಅದು ಭಯಾನಕ ರೂಪದ ಸಿಂಹದ ಹಾಗೆ ಕಾಡುಗಳಲ್ಲಿ ಇರುತ್ತದೆ. ನಿನ್ನ ಒಂದು ಸಾಇನ ಬದಲಿಗೆ ಸಂದ್ರ ಕೊಡುವೆನು. ಎಂದರೆ, ನಿನ್ನ ಒಂದು ಏಟಿನ ಬದಲಿಗೆ ಎರಡು ಏಟುಗಳನ್ನು ಕೊಡುವೆನು ಅಥವಾ ಅದಕ್ಕಿಂತ ಹೆಚ್ಚಿನ ತಿರುಗೇಟನ್ನು ಕೊಡುವೆನು. ಸಂದ್ರ ಎಂದ ಹಿರಿದಾದ ಪರಿಮಾಣಕ್ಕೆ ಹೇಳಲಾಗುತ್ತದೆ. ಸಾಅ್ ಎಂಬುದು ಕೇವಲ ಮೂರು ಸೇರಿಗೆ ಹೇಳಲಾಗುತ್ತದೆ. ವರದಿಗಾರ ಹೇಳುತ್ತಾರೆ: ಹಝ್ರತ್ ಅಲಿ(ರ) ಮರ್ಹಬ್‌ನ ತಲೆಗೆ ಹೊಡೆದು ಅವನನ್ನು ಕೊಂದುಹಾಕಿದರು. ಹಝ್ರತ್ ಅಲಿ(ರ) ಮರ್ಹಬ್‌ನ ತಲೆಗೆ ಹೊಡೆಯುತ್ತಾ ಅವನನ್ನು ಕೊಂದುಹಾಕಿದರು. ಅನಂತರ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಮೂಲಕ ಖೈಬರ್ ಮೇಲೆ ವಿಜಯ ಸಾಧಿಸಲಾಯಿತು. ಇದು ಸಹೀಹ್ ಮುಸ್ಲಿಮಿನ ವರದಿಯಾಗಿದೆ. (ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–837) (ಸಹೀಹ್ ಮುಸ್ಲಿಮ್, ಕಿತಾಬುಲ್ ಜಿಹಾದ್ ವಸ್ಸೈರ್, ಹದೀಸ್–4678, ಸಹೀಹ್ ಮುಸ್ಲಿಮ್ ಉರ್ದು ಅನುವಾದ, ಸಂಪುಟ–9, ಪುಟ–240, ಮುದ್ರಣ ನೂರ್ ಫೌಂಡೇಶನ್ ರಬ್ವಾಹ್)

ಹಝ್ರತ್ ಮುಸ್ಲಿಹ್ ಮೌಊದ್(ರ) ಇದರ ಬಗ್ಗೆ ಪ್ರಸ್ತಾಪಿಸುತ್ತಾ ಹೇಳುತ್ತಾರೆ: ಖೈಬರ್ ದಿನದಂದು ಹಝ್ರತ್ ಅಲಿಗೆ(ರ) ಅವಕಾಶ ಸಿಕ್ಕಿತ್ತು. ಹಝ್ರತ್ ಪೈಗಂಬರ್(ಸ) ಹೇಳಿದರು: ಯಾರು ಅಲ್ಲಾಹನನ್ನು ಪ್ರೀತಿಸುತ್ತಾರೋ ಮತ್ತು ಅಲ್ಲಾಹನು ಯಾರನ್ನು ಪ್ರೀತಿಸುತ್ತಾನೋ ಹಾಗು ಯಾರಿಗೆ ಅಲ್ಲಾಹನು ಶ್ರೇಷ್ಠತೆಯನ್ನು ಕೊಟ್ಟಿದ್ದಾನೋ ಅವರಿಗೆ ನನ್ನ ಖಡ್ಗವನ್ನು ಒಪ್ಪಿಸುವೆನು. ಹಝ್ರತ್ ಉಮರ್(ರ) ಹೇಳುತ್ತಾರೆ: ನಾನು ಸಭೆಯಲ್ಲಿ ಇದ್ದೆ. ನನ್ನನ್ನು ಹಝ್ರತ್ ಪೈಗಂಬರ್(ಸ) ನೋಡಿಕೊಂಡು ನನಗೆ ಆ ಖಡ್ಗವನ್ನು ಕೊಡಲಿಕ್ಕಾಗಿ ನಾನು ತಲೆಯನ್ನು ಮೇಲಕ್ಕೆ ಎತ್ತುತ್ತಿದ್ದೆ. ಆದರೆ ಹಝ್ರತ್ ಪೈಗಂಬರ್(ಸ) ನನ್ನನ್ನು ನೋಡಿಕೊಂಡು ಸುಮ್ಮನಿರುತ್ತಿದ್ದರು. ನಾನು ಪುನಃ ತಲೆಯನ್ನು ಎತ್ತುತ್ತಿದ್ದೆ. ಆಗಲೂ ಹಝ್ರತ್ ಪೈಗಂಬರ್(ಸ) ನನ್ನನ್ನು ನೋಡಿ ಸುಮ್ಮನಿರುತ್ತಿದ್ದರು. ಅಷ್ಟರಲ್ಲಿ ಹಝ್ರತ್ ಅಲಿ(ರ) ಅಲ್ಲಿಗೆ ಬಂದರು. ಅವರಿಗೆ ಕಣ್ಣು ನೋವಿತ್ತು. ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿಯೊಡನೆ(ರ) ಮುಂದಕ್ಕೆ ಬರಲು ಹೇಳಿದರು. ಅವರು ಹಝ್ರತ್ ಪೈಗಂಬರರ(ಸ) ಬಳಿಗೆ ತಲುಪಿದರು. ಹಝ್ರತ್ ಪೈಗಂಬರ್(ಸ) ತನ್ನ ಲಾಲಾರಸವನ್ನು ಅವರ ಕಣ್ಣುಗಳಿಗೆ ಲೇಪಿಸಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನು ನಿನ್ನ ಕಣ್ಣುಗಳಿಗೆ ಶಮನ ನೀಡಲಿ ಮತ್ತು ಈ ಖಡ್ಗವನ್ನು ಪಡೆ. ಅಲ್ಲಾಹನು ಈ ಖಡ್ಗವನ್ನು ನಿನಗೆ ಒಪ್ಪಿಸಿದ್ದಾನೆ. (ಖುತ್‌ಬಾತೆ ಮಹ್ಮೂದ್, ಸಂಪುಟ–19, ಪುಟ–614, ಖುತ್ಬ ಜುಮ್‌ಅ 02–09–1938)

ಇನ್ನೊಂದು ಕಡೆ ಸಹ ಹಝ್ರತ್ ಮುಸ್ಲಿಹ್ ಮೌಊದ್(ರ) ಇದನ್ನು ಹೀಗೆ ವಿವರಿಸಿದ್ದಾರೆ: ಖೈಬರ್‌ನಿಂದ ಕೆಲವು ಮೈಲುಗಳ ದೂರದಲ್ಲಿ ಯಹೂದಿಗಳು ಇದ್ದರು. ಅಲ್ಲಿಂದ ಅವರು ಸುಲಭವಾಗಿ ಮದೀನದ ವಿರುದ್ಧ ಷಡ್ಯಂತ್ರ ಮಾಡಬಹುದಾಗಿತ್ತು. ಆದ್ದರಿಂದ ಹಝ್ರತ್ ಪೈಗಂಬರ್(ಸ) ಹುದೈಬಿಯಾದಿಂದ ಮರಳಿ ಬಂದು ಸುಮಾರು ಐದು ತಿಂಗಳುಗಳ ನಂತರ ಯಹೂದಿಗಳನ್ನು ಅಲ್ಲಿಂದ ಓಡಿಸಲು ತೀರ್ಮಾನಿಸಿದರು. ಹೀಗೆ ಹಝ್ರತ್ ಪೈಗಂಬರ್(ಸ) 1600 ಸಹಾಬರೊಡನೆ ಕ್ರಿ.ಶ. 628 ಆಗಸ್ಟ್ ತಿಂಗಳಲ್ಲಿ ಖೈಬರ್ ಕಡೆಗೆ ಹೊರಟರು. ಖೈಬರ್ ಕೋಟೆಯಿಂದ ಆವರಿಸಲ್ಪಟ್ಟ ಒಂದು ಪಟ್ಟಣವಾಗಿತ್ತು. ಅದರ ನಾಲ್ಕೂ ಕಡೆಗಳ ಬಂಡೆಕಲ್ಲಿನ ಪರ್ವತಗಳಲ್ಲಿ ಕೋಟೆಗಳನ್ನು ನಿರ್ಮಿಸಲಾಗಿತ್ತು. ಇಂತಹ ಶಕ್ತವಾದ ಪಟ್ಟಣವನ್ನು ಕೆಲವೇ ಕೆಲವು ಸೈನಕರ ಮೂಲಕ ಸೋಲಿಸುವುದು ಸುಲಭದ ಕೆಲಸವಾಗಿರಲಿಲ್ಲ. ಸುತ್ತುಮುತ್ತಲಿನ ಸಣ್ಣ ಸಣ್ಣ ಚೌಕಿಗಳನ್ನುಚಿಕ್ಕ ಚಿಕ್ಕ ಯುದ್ಧಗಳ ಮೂಲಕ ಜಯಿಸಲಾಗಿತ್ತು. ಆದರೆ ಯಹೂದಿಯರು ಒಟ್ಟು ಸೇರುತ್ತಾ ಪಟ್ಟಣದ ಮುಖ್ಯವಾದ ಕೋಟೆಯಲ್ಲಿ ಬಂದು ಸೇರಿದರು. ಆದ್ದರಿಂದ ಅದರ ಮೇಲೆ ವಿಜಯ ಸಾಧಿಸುವ ಎಲ್ಲ ತಂತ್ರಗಳು ವ್ಯರ್ಥವಾಗುತ್ತಿತ್ತು. ಒಂದು ದಿನ ಹಝ್ರತ್ ಪೈಗಂಬರ್(ಸ) ಹೇಳಿದರು: ಹಝ್ರತ್ ಅಲಿಯ ಮೂಲಕ ಈ ಪಟ್ಟಣ ಮೇಲೆ ವಿಜಯ ಸಾಧಿಸಲಾಗುವುದು ಎಂದು ವಿಧಿಸಲಾಗಿದೆ. ಹಝ್ರತ್ ಪೈಗಂಬರ್(ಸ) ಬೆಳಿಗ್ಗೆ ಹೀಗೆ ಘೋಷಿಸಿದರು: ಯಾರನ್ನು ಅಲ್ಲಾಹನು, ಅವನ ಪ್ರವಾದಿ ಮತ್ತು ಮುಸ್ಲಿಮರು ಪ್ರೀತಿಸುತ್ತಾರೋ ಅವರಿಗೆ ನಾನಂದು ಇಸ್ಲಾಮಿನ ಕಪ್ಪು ಬಾವುಟವನ್ನು ನೀಡುವೆನು. ಅಲ್ಲಾಹನು ಈ ಕೋಟೆಯ ಮೇಲಿನ ವಿಜಯವನ್ನು ಅವರ ಕೈಗಳಿಂದ ಸಾಧಿಸಲಾಗುವುದು ಎಂದು ವಿಧಿಸಿದ್ದಾನೆ. ಅನಂತರ ಮರುದಿನ ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿಯನ್ನು(ರ) ಕರೆದರು. ಧ್ವಜವನ್ನು ಅವರಿಗೆ ಒಪ್ಪಿಸಿದರು. ಹಝ್ರತ್ ಅಲಿ(ರ) ಸಹಾಬರ ಸೈನ್ಯದೊಂದಿಗೆ ಕೋಟೆಯ ಮೇಲೆ ಆಕ್ರಮಣ ನಡೆಸಿದರು. ಯಹೂದಿಯರು ಕೋಟೆಯ ಒಳಗೆ ಇದ್ದರೂ ಕೂಡ, ಅಲ್ಲಾಹನು ಹಝ್ರತ್ ಅಲಿ(ರ) ಮತ್ತು ಇತರ ಸಹಾಬಿಯರಿಗೆ ಆ ದಿನ ಎಷ್ಟು ಶಕ್ತಿ ಕೊಟ್ಟನೆಂದರೆ, ಸಂಜೆಗೆ ಮುಂಚಿತವಾಗಿ ಕೋಟೆಯ ಮೇಲೆ ವಿಜಯ ಸಾಧಿಸಲಾಯಿತು.

(ದೀಬಾಚ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ–20, ಪುಟ–325–326)

ಇನ್ನೊಂದು ಕಡೆ ಹಝ್ರತ್ ಅಲಿಯವರ ಬಗ್ಗೆ ಪ್ರಸ್ತಾಪಿಸುತ್ತಾ ಈ ಕೋಟೆಯ ಘಟನೆಯನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ಹೀಗೆ ವಿವರಿಸಿದ್ದಾರೆ: ಖೈಬರಿನ ಮೇಲೆ ವಿಜಯ ಸಾಧಿಸುವುದರ ಬಗ್ಗೆ ಚರ್ಚಿಸಲಾಗುತ್ತಿತ್ತು. ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿಯರನ್ನು(ರ) ಕರೆದರು ಮತ್ತು ಇಸ್ಲಾಮಿನ ಸೈನ್ಯದ ಧ್ವಜವನ್ನು ಅವರಿಗೆ ಒಪ್ಪಿಸಲು ಬಯಸಿದರು. ಆದರೆ ಹಝ್ರತ್ ಅಲಿಗೆ(ರ) ಕಣ್ಣು ನೋವಿತ್ತು. ನೋವಿನ ತೀವ್ರತೆಯ ಕಾರಣದಿಂದ ಅದು ಉಬ್ಬಿಕೊಂಡಿತ್ತು. ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿಯನ್ನು(ರ) ಈ ಅವಸ್ಥೆಯಲ್ಲಿ ಕಂಡಾಗ, ಅವರು ತನ್ನ ಬಳಿಗೆ ಕರೆದರು. ಅವರು ಮುಂದಕ್ಕೆ ಬಂದರು. ಹಝ್ರತ್ ಪೈಗಂಬರ್(ಸ) ತನ್ನ ಲಾಲಾರಸವನ್ನು ಹಝ್ರತ್ ಅಲಿಯ(ರ) ಕಣ್ಣುಗಳಿಗೆ ಸವರಿದರು. ಅವರ ಕಣ್ಣುಗಳು ಶಮನಗೊಂಡವು. (ತಫ್ಸೀರೆ ಕಬೀರ್, ಸಂಪುಟ–20, ಪುಟ–398–399)

ಇನ್ನೊಂದು ಕಡೆ ಹಝ್ರತ್ ಪೈಗಂಬರರ(ಸ) ಶಮನದ ಬಗ್ಗೆ ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಯಾವುದೇ ಚಿಕಿತ್ಸಾ ಕ್ರಮಗಳನ್ನು ಉಪಯೋಗಿಸದೇ ಅಥವಾ ಚಿಕಿತ್ಸಾ ರೀತಿಗಳು ಪ್ರಯೋಜನಕಾರಿಯಾಗದ ಸಂದರ್ಭಗಳಲ್ಲೂ ಅಲ್ಲಾಹನ ಅನುಗ್ರಹದಿಂದ ಅಸಾಧಾರಣವಾದ ರೀತಿಯಲ್ಲಿ ಕೆಲವು ರೋಗಿಗಳು ಶಮನಗೊಳ್ಳುವ ದೃಶ್ಯಗಳನ್ನು ಲೋಕದಲ್ಲಿ ಕಾಣುತ್ತೇವೆ. ಹಝ್ರತ್ ಪೈಗಂಬರರ(ಸ) ಜೀವಿತದ ಘಟನೆಗಳಲ್ಲಿ ಈ ರೀತಿಯ ಶಮನದ ಒಂದು ಉದಾಹರಣೆ ಖೈಬರ್ ಯುದ್ಧದ ವೇಳೆಯಲ್ಲಿ ಕಾಣಬಹುದಾಗಿದೆ. ಖೈಬರ್ ಯುದ್ಧದ ಸಂದರ್ಭದಲ್ಲಿ, ಒಂದು ದಿನ ಹಝ್ರತ್ ಪೈಗಂಬರ್(ಸ) ತಮ್ಮ ಸಹಾಬರೊಡನೆ ಹೇಳಿದರು: ಯಾರ ಕೈಯಲ್ಲಿ ನಾನು ಧ್ವಜವನ್ನು ಕೊಡುತ್ತಾನೋ ಅವರ ಕೈಯಿಂದ ಖೈಬರ್ ಮೇಲೆ ವಿಜಯ ಸಾಧಿಸಲಾಗುವುದು ಎಂದು ವಿಧಿಸಲಾಗಿದೆ. ಹಝ್ರತ್ ಉಮರ್(ರ) ಹೇಳುತ್ತಾರೆ: ನಾನು ಆಗ, ಹಝ್ರತ್ ಪೈಗಂಬರ್(ಸ) ಬಹುಶಃ ನನಗೆ ಧ್ವಜವನ್ನು ಕೊಡಬಹುದು ಎಂಬ ಪ್ರತೀಕ್ಷೆಯಿಂದ ತಲೆಯೆತ್ತಿ ನೋಡಲು ಶುರುಮಾಡಿದೆ. ಆದರೆ ಹಝ್ರತ್ ಪೈಗಂಬರ್(ಸ) ನನ್ನನ್ನು ಈ ಕೆಲಸಕ್ಕಾಗಿ ನಿಶ್ಚಯಿಸಲಿಲ್ಲ. ಅಷ್ಟರಲ್ಲಿ ಹಝ್ರತ್ ಅಲಿ(ರ) ಬಂದರು. ಅವರ ಕಣ್ಣುಗಳು ತೀವ್ರವಾಗಿ ನೋವಾಗುತ್ತಿದ್ದುವು. ಹಝ್ರತ್ ಪೈಗಂಬರ್(ಸ) ಅವರ ಕಣ್ಣುಗಳಿಗೆ ತನ್ನ ಲಾಲಾರಸವನ್ನು ಸವರಿದರು. ಅವರು ಕಣ್ಣುಗಳು ಬೇಗನೇ ಗುಣಮುಖವಾದವು. ಹಝ್ರತ್ ಪೈಗಂಬರ್(ಸ) ಅವರ ಕೈಯಲ್ಲಿ ಧ್ವಜವನ್ನು ಕೊಟ್ಟು ಖೈಬರ್ ಮೇಲೆ ಜಯ ಸಾಧಿಸುವ ಕೆಲಸವನ್ನು ಅವರಿಗೆ ಒಪ್ಪಿಸಿದರು. (ಹಸಿ ಬಾರಿ ತಆಲ, ಅನ್ವಾರುಲ್ ಉಲೂಮ್, ಸಂಪುಟ–6, ಪುಟ–327)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಒಂದು ಮಾದರಿ ವಿಶ್ವಾಸವರ್ಧಕವಾದುದಾಗಿದೆ. ಖೈಬರ್ ಯುದ್ಧದಲ್ಲಿ, ಒಬ್ಬ ಯಹೂದಿ ಸೇನಾಧಿಪತಿ ಯುದ್ಧಕ್ಕಾಗಿ ಹೊರಟರು. ಬಹಳ ಸಮಯ ಅವರೊಡನೆ ಹೋರಾಟ ನಡೆಸಲಾಯಿತು. ಏಕೆಂದರೆ ಅವರು ಸಹ ಯುದ್ಧದ ಕಲೆಯಲ್ಲಿ ನಿಪುಣರಾಗಿದ್ದರು. ಆದ್ದರಿಂದ ತುಂಬ ಹೊತ್ತು ಅವರೊಡನೆ ಹೋರಾಟ ನಡೆಸಲಾಯಿತು. ಕೊನೆಗೆ ಹಝ್ರತ್ ಅಲಿ(ರ) ಅವನನ್ನು ನೆಲಕ್ಕೆ ಬೀಳಿಸಿದರು. ಅವನ ಎದೆಯ ಮೇಲೇರಿ ಕುಳಿತುಕೊಂಡರು ಮತ್ತು ಅವನ ಕತ್ತನ್ನು ಮುರಿಯಲು ಉದ್ದೇಶಿಸಿದರು. ಅಷ್ಟರಲ್ಲಿ, ಅವನು ಹಝ್ರತ್ ಅಲಿಯರ(ರ) ಮುಖದ ಮೇಲೆ ಉಗುಳಿದರು. ಆಗ ಹಝ್ರತ್ ಅಲಿ(ರ) ಅವನನ್ನು ಬಿಟ್ಟು ದೂರಸರಿದರು. ಕೊಲ್ಲಲು ಸಾಧ್ಯವಿರುವಾಗ ಏಕೆ ದೂರಸರಿದರು ಎಂದು ಯೋಚಿಸಿ ಯಹೂದಿ ಬಹಳ ಆಶ್ಚರ್ಯಚಕಿತನಾದನು. 'ನನ್ನನ್ನು ಬಿಟ್ಟು ಏಕೆ ದೂರ ಸರಿದಿದ್ದೀರಿ' ಎಂದು ಹಝ್ರತ್ ಅಲಿಯೊಡನೆ ಅವನು ಕೇಳಿದನು. ಹಝ್ರತ್ ಅಲಿ(ರ) ಹೇಳಿದರು: 'ನಾನು ನಿನ್ನೊಡನೆ ಅಲ್ಲಾಹನ ಸಂಪ್ರೀತಿಗಾಗಿ ಹೋರಾಡುತ್ತಿದ್ದೆ. ಆದರೆ ನೀನು ನನ್ನ ಮುಖದ ಮೇಲೆ ಉಗುಳಿದಾಗ ನನಗೆ ಕೋಪಬಂತು. ಈಗ ನಾನು ನಿನ್ನನ್ನು ಕೊಂದರೆ, ಅದು ನನ್ನ ಸ್ವಾರ್ಥಕ್ಕಾಗಿ ಆಗಿರುವುದು, ಅಲ್ಲಾಹನಗಾಗಿ ಆಗಿರುವುದಿಲ್ಲವೆಂದು ನನಗೆ ಅನಿಸುತ್ತಿತ್ತು. ಆದ್ದರಿಂದ ನಾನು ನನ್ನ ಕೋಪವನ್ನು ತಣ್ಣಗಾಗಿಸಲು ಮತ್ತು ನಿನ್ನನ್ನು ಕೊಲ್ಲುವುದು ನನಗಾಗಿ ಆಗದಿರಲು ನಿನ್ನನ್ನು ಬಿಟ್ಟೆ.' (ಸೈರೆ ರೂಹಾನಿ, ಸಂಖ್ಯೆ–2, ಅನ್ವಾರುಲ್ ಉಲೂಮ್, ಸಂಪುಟ–16, ಪುಟ–74)

ಸೂರಃ ತೌಬದ ಆರಂಭದ ವಚನಗಳನ್ನು ಹಜ್ಜಿನ ವೇಳೆಯಲ್ಲಿ ಹಝ್ರತ್ ಅಲಿ(ರ) ಓದಿಹೇಳಿದ್ದರು ಎಂದು ವರದಿಯಲ್ಲಿ ಬಂದಿದೆ. ಅಬೂಜಾಫರ್ ಬಿನ್ ಅಲಿ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರರಿಗೆ(ಸ) ಸೂರಃ ತೌಬ ಅವತೀರ್ಣವಾಯಿತು. ಆ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್‌ರನ್ನು(ರ) ಅಮೀರರನ್ನಾಗಿ

ಮಾಡಿಕೊಂಡು ಹಜ್ಜಿಗೆ ಕಳುಹಿಸಲಾಗಿತ್ತು. ಅಲ್ಲಿಗೆ ಹೋಗಿ ಓದಿ ಹೇಳಲು ಈ ಸೂರತನ್ನು ಹಝ್ರ್‌ರತ್ ಅಬೂಬಕರ್‌ರಿಗೆ(ರ) ಕಳುಹಿಸಲು ವಿನಂತಿಸಲಾಯಿತು. ಹಝ್ರ್‌ರತ್ ಪೈಗಂಬರ್(ಸ) ಹೇಳಿದರು: ನನ್ನ ಅಹ್ಲೇ ಬೈತ್, ಎಂದರೆ ನನ್ನ ಮನೆತನದವರಲ್ಲದೆ ಬೇರೆ ಯಾರೂ ಈ ಕರ್ತವ್ಯವನ್ನು ನಿರ್ವಹಿಸಲಾರರು. ಅನಂತರ ಹಝ್ರ್‌ರತ್ ಅಲಿಯನ್ನು(ರ) ಹಝ್ರ್‌ರತ್ ಪೈಗಂಬರ್(ಸ) ಕರೆದು ಹೀಗೆ ಹೇಳಿದರು: ಸೂರಃ ತೌಬದ ಆರಂಭದಲ್ಲಿ ಇರುವ ವಚನಗಳನ್ನು ಕೊಂಡುಹೋಗು. ಖುರ್ಬಾನಿಯ ದಿನ ಜನರು ಮಿನಾದಲ್ಲಿ ಒಟ್ಟುಗೂಡುವಾಗ, ಹೀಗೆ ಘೋಷಿಸು: ಸ್ವರ್ಗದಲ್ಲಿ ಸತ್ಯನಿಷೇಧಿಯಾದವನು ಪ್ರವೇಶಿಲಾರನು, ಈ ವರ್ಷದ ನಂತರ ಮುಶ್ರಿಕನಾದ ಯಾವನಿಗೂ ಹಜ್ಜ್ ಮಾಡಲು ಅನುಮತಿಯಿರುವುದಿಲ್ಲ. ಯಾರಿಗೂ ಬರೀಮೈಯಲ್ಲಿ ಕಅ್‌ಬ ಬೈತುಲ್ಲಾಹ್‌ದ ತವಾಫ್ ಮಾಡಲು ಅನುಮತಿಯಿಲ್ಲ. ಹಝ್ರ್‌ರತ್ ಪೈಗಂಬರ್(ಸ) ಯಾರೊಡನೆಯೆಲ್ಲ ಒಪ್ಪಂದ ಮಾಡಿರುವರೋ ಅದರ ಕಾಲಾವಧಿಯನ್ನು ಪೂರ್ತಿಮಾಡಲಾಗುವುದು. ಹಝ್ರ್‌ರತ್ ಪೈಗಂಬರರ(ಸ) ಅಝ್ಬಾದ ಎಂಬ ಒಂಟೆಯಲ್ಲಿ ಸವಾರಿ ಮಾಡುತ್ತಾ ಹಝ್ರ್‌ರತ್ ಅಲಿ ಬಿನ್ ಅಬೂತಾಲಿಬ್ ರವಾನೆಯಾದರು. ಮಾರ್ಗ ಮಧ್ಯೆ ಹಝ್ರ್‌ರತ್ ಅಬೂಬಕರ್(ರ) ಭೇಟಿಯಾದರು. ಹಝ್ರ್‌ರತ್ ಅಲಿಯನ್ನು(ರ) ಹಝ್ರ್‌ರತ್ ಅಬೂಬಕರ್(ರ) ಕಂಡಾಗ ಅವರೊಡನೆ ಹೀಗೆ ಕೇಳಿದರು: ನಿಮ್ಮನ್ನು ಅಮೀರನ್ನಾಗಿ ನಿಶ್ಚಯಿಸಲಾಗಿದೆಯೇ ಅಥವಾ ನೀವು ನನ್ನ ಕೆಳಗೆ ಇರುತ್ತೀರಾ? ಹಝ್ರ್‌ರತ್ ಅಲಿ(ರ) ಹೇಳಿದರು: ನಿಮ್ಮ ಅಡಿಯಲ್ಲಿ ಇರುವೆನು. ಅನಂತರ ಇಬ್ಬರೂ ರವಾನೆಯಾದರು. ಹಝ್ರ್‌ರತ್ ಅಬೂಬಕರ್(ರ) ಹಜ್ಜ್ ಕಾರ್ಯಗಳ ಮೇಲ್ನೋಟವನ್ನು ವಹಿಸಿದರು. ಜಾಹಿಲಿಯ್ಯಾ ಕಾಲದಲ್ಲಿ ತಂಗುತ್ತಿದ್ದ ಅದೇ ಸ್ಥಳದಲ್ಲಿ ಆ ವರ್ಷ ಸಹ ಅರೇಬಿಯಾದ ನಿವಾಸಿಗಳು ತಂಗಿದ್ದರು. ಖುರ್ಬಾನಿಯ ದಿನವಾದಾಗ, ಹಝ್ರ್‌ರತ್ ಪೈಗಂಬರ್(ಸ) ಘೋಷಿಸಲು ನಿರ್ದೇಶಿಸಿದ್ದ ಸಂಗತಿಗಳನ್ನು ಹಝ್ರ್‌ರತ್ ಅಲಿ(ರ) ಜನರ ಮುಂದೆ ಘೋಷಿಸುತ್ತಾ ಹೀಗೆ ಹೇಳಿದರು: ಎಲೈ ಜನರೇ, ಸ್ವರ್ಗದಲ್ಲಿ ಯಾವನೇ ಸತ್ಯನಿಷೇಧಿ ಪ್ರವೇಶಿಸಲಾರನು. ಈ ವರ್ಷದ ನಂತರ ಬಹುದೇವಾರಾಧಕನಾದ ಯಾವನೇ ವ್ಯಕ್ತಿ ಹಜ್ಜ್ ಮಾಡುವಂತಿಲ್ಲ. ಬರೀ ಮೈಯಲ್ಲಿ ಕಅ್‌ಬದ ತವಾಫ್ ಮಾಡಲು ಅನುಮತಿಯಿರುವುದಿಲ್ಲ. ಹಝ್ರ್‌ರತ್ ಪೈಗಂಬರ್(ಸ) ಯಾರೊಡನೆಯಾದರೂ ಒಪ್ಪಂದ ಮಾಡಿರುವರಾದರೆ, ಅದರ ಕಾಲಾವಧಿಯನ್ನು ಪೂರ್ತಿಮಾಡಲಾಗುವುದು. ಪ್ರತಿಯೊಂದು ಸಮುದಾಯದವರು ತಮ್ಮ ತಮ್ಮ ಸುರಕ್ಷಿತ ಸ್ಥಳಗಳಿಗೆ ಅಥವಾ ತಮ್ಮ ತಮ್ಮ ಪ್ರದೇಶಗಳಿಗೆ ಮರಳಿ ಹೋಗುವಂತಾಗಲು ಈ ಘೋಷಣೆಯ ನಂತರ ಜನರಿಗೆ ನಾಲ್ಕು ತಿಂಗಳ ಕಾಲಾವಕಾಶ ಕೊಡಲಾಯಿತು. ಹಝ್ರ್‌ರತ್ ಪೈಗಂಬರರೊಂದಿಗೆ(ಸ) ನಿರ್ಧಿಷ್ಟ ಕಾಲಾವಧಿ ವರೆಗೆ ಮೊದಲೇ ಮಾಡಲಾದ ಪ್ರತಿಜ್ಞೆ ಅಥವಾ ಒಪ್ಪಂದ ಹೊರತುಪಡಿಸಿ, ಇದರ ನಂತರ ಯಾವನೇ ಮುಶ್ರಿಕನೊಂದಿಗೆ ಯಾವುದೇ ಪ್ರತಿಜ್ಞೆ ಅಥವಾ ಒಪ್ಪಂದ ಮಾಡಲಾಗುವುದಿಲ್ಲ. ಎಂದರೆ, ಈಗ ಪೂರ್ತಿಯಾಗಲು ಬಾಕಿಯಿರುವ ಒಪ್ಪಂದಗಳ ಹೊರತು ಬೇರೆ ಹೊಸ ಒಪ್ಪಂದ ಮಾಡಲಾಗುವುದಿಲ್ಲ. ಆ ನಿಶ್ಚಿತ ಕಾಲಾವಧಿಯನ್ನು ಪರಿಗಣಿಸಲಾಗುವುದು. ಅನಂತರ ಆ ವರ್ಷದ ನಂತರ ಯಾವನೇ ಮುಶ್ರಿಕ್ ಹಜ್ಜ್ ಮಾಡಲಿಲ್ಲ ಮತ್ತು ಯಾವನೇ ವ್ಯಕ್ತಿ ಬರೀಮೈಯಲ್ಲಿ ಹಜ್ಜ್ ಮಾಡಲಿಲ್ಲ. ಅನಂತರ ಹಝ್ರ್‌ರತ್ ಅಲಿ(ರ) ಮತ್ತು ಹಝ್ರ್‌ರತ್ ಅಬೂಬಕರ್(ರ) ಹಝ್ರ್‌ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಹಾಜರಾದರು. (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್, ಪುಟ–832, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2001)

ಈಗ ನಾನು ಓದಲು ಹೋಗುವ ವರದಿಯನ್ನು ಸಹಾಬಿಯೋರ್ವರ ಪ್ರಸ್ತಾಪದಲ್ಲಿ ಹಿಂದೆ ವಿವರಿಸಿದ್ದೇನೆ. ಆದರೆ ಇಲ್ಲಿ ಹಝ್ರ್‌ರತ್ ಅಲಿಯರ(ರ) ಪ್ರಸ್ತಾಪದಲ್ಲೂ ವಿವರಿಸುತ್ತೇನೆ. ಅದು ಮಕ್ಕಾ ವಿಜಯಕ್ಕೆ ಮುಂಚಿನ ಸಂದರ್ಭವಾಗಿತ್ತು. ಹಿಜರೀ 8, ರಮಝ್ಹಾನ್ ತಿಂಗಳಲ್ಲಿ, ಎಂದರೆ ಕ್ರಿ.ಶ. 630 ಜನವರಿಯ ಘಟನೆಯಾಗಿದೆ. ಹಝ್ರ್‌ರತ್ ಅಲಿ(ರ) ವರದಿ ಮಾಡುತ್ತಾರೆ: ಹಝ್ರ್‌ರತ್ ಪೈಗಂಬರ್(ಸ) ನನ್ನನ್ನು, ಝುಬೇರ್‌ರನ್ನು ಮತ್ತು ಮಿಖ್‌ದಾದ್ ಬಿನ್ ಅಸ್‌ವದ್‌ರನ್ನು ಕಳುಹಿಸುತ್ತಾ ಹೀಗೆ ಹೇಳಿದರು: ನೀವು ಹೋಗಿರಿ. ರೌಝ್ ಖಾಖ್ ಎಂಬ ಜಾಗಕ್ಕೆ ತಲುಪಿರಿ. ಅಲ್ಲಿ ಒಂಟೆಯ ಮೇಲೆ ಸವಾರಿ ಮಾಡಿ ಹೋಗುತ್ತಿರುವ ಒಬ್ಬ ಸ್ತ್ರೀ ನಿಮಗೆ ಸಿಗುವಳು. ಅವಳ ಬಳಿ ಒಂದು ಪತ್ರವಿದೆ. ಆ ಪತ್ರವನ್ನು ನೀವು ಪಡೆಯಬೇಕು. ನಾವು ಹೊರಟೆವು. ನಮ್ಮ ಕುದುರೆಗಳು ಅತಿವೇಗವಾಗಿ ನಮ್ಮನ್ನು ಕೊಂಡು ಹೋಗುತ್ತಿದ್ದುವು. ನಾವು ರೌಝ್ ಖಾಖ್‌ಗೆ ತಲುಪಿದೆವು. ಒಂಟೆಯ ಮೇಲೆ ಸವಾರಿ ಮಾಡುತ್ತಾ ಹೋಗುತ್ತಿರುವ ಒಬ್ಬ ಹೆಂಗಸನ್ನು ನಾವು ಕಂಡೆವು. ಪತ್ರವನ್ನು ಹೊರಗೆ ತೆಗೆಯಲು ನಾವು ಅವಳೊಡನೆ ಹೇಳಿದೆವು. ನನ್ನ ಬಳಿ ಪತ್ರವೇನೂ ಇಲ್ಲವೆಂದು ಅವಳು ಹೇಳಿದಳು. ಪತ್ರವನ್ನು ಹೊರಗೆ ತೆಗೆಯಬೇಕಾಗುವುದು ಇಲ್ಲದಿದ್ದರೆ ನಿನ್ನ ವಸ್ತ್ರಗಳನ್ನು ಕಳಚಿ ನಿನ್ನ ತಪಾಸನೆ ಮಾಡಲಾಗುವುದು ಎಂದು ನಾವು ಅವಳೊಡನೆ ಹೇಳಿದೆವು. ಆಗ ಅವಳು ಆ ಪತ್ರವನ್ನು ತನ್ನ ತಲೆಯ ಜುಟ್ಟಿನಿಂದ ಹೊರತೆಗೆದಳು. ನಾವು ಆ ಪತ್ರವನ್ನು ಹಝ್ರ್‌ರತ್ ಪೈಗಂಬರರ(ಸ) ಬಳಿಗೆ ಕೊಂಡುಹೋದೆವು. ಅದರಲ್ಲಿ ಹೀಗೆ ಬರೆಯಲಾಗಿತ್ತು: ಹಾತಿಬ್ ಬಿನ್ ಅಬೀ ಬಲ್‌ತಅರ ಕಡೆಯಿಂದ ಮಕ್ಕಾ ನಿವಾಸಿಗಳಾದ ಮುಶ್ರಿಕರ ಹೆಸರಲ್ಲಿ. ಹಝ್ರ್‌ರತ್ ಪೈಗಂಬರರ(ಸ) ಒಂದು ಉದ್ದೇಶದ ಬಗ್ಗೆ ಅದರಲ್ಲಿ ಮಾಹಿತಿ ನೀಡಲಾಗಿತ್ತು. ಹಝ್ರ್‌ರತ್ ಪೈಗಂಬರ್(ಸ) ಹಾತಿಬ್ ಬಿನ್ ಅಬೀ ಬಲ್‌ತಅರನ್ನು ಕರೆಸಿದರು. ಇದೇನೆಂದು ಹಾತಿಬ್‌ರೊಡನೆ ಕೇಳಿದರು. ಅವರು ಹೇಳಿದರು: ಯಾ ರಸೂಲಲ್ಲಾಹ್, ನನಗೆ ಸಂಬಂಧಿಸಿ ಅವಸರಪಡಬೇಡಿ. ನಾನು ಖುರೈಶಿಗಳ ಎಡೆಯಲ್ಲಿ ಬಂದುಸೇರಿದ್ದ ಆದರೆ ಖುರೈಶಿಯಲ್ಲದ ವ್ಯಕ್ತಿಯಾಗಿರುವೆನು. ಹಝ್ರ್‌ರತ್ ಪೈಗಂಬರರೊಂದಿಗೆ ಇದ್ದ ಇತರ ಮುಹಾಜಿರರಿಗೆ ಮಕ್ಕಾದ ಜನರೊಡನೆ ಕುಟುಂಬ ಸಂಬಂಧವಿತ್ತು. ಆದ್ದರಿಂದ ಮುಹಾಜಿರರು ಮಕ್ಕಾದ ಸಂಬಂಧಿಕರ ಮುಖಾಂತರ ತಮ್ಮ ಮನೆ, ಸಂಪತ್ತು ಇತ್ಯಾದಿಗಳನ್ನು ಸುರಕ್ಷಿತಗೊಳಿಸುತ್ತಿದ್ದರು. ನನಗೆ ಮಕ್ಕಾದವರೊಡನೆ ಯಾವುದೇ ಕುಟುಂಬ ಸಂಬಂಧವಿಲ್ಲದ ಕಾರಣದಿಂದ ಅವರೊಡನೆ ಔದಾರ್ಯ ಮಾಡಲು ಬಯಸಿದೆ. ಹಾಗಾದರೆ, ಈ ಔದಾರ್ಯದ ಕಾರಣದಿಂದ ಅವರು ನನ್ನನ್ನು ಪರಿಗಣಿಸಲಿ ಎಂದು ನಾನು ಬಯಸಿದೆ. ನಾನು ಇದನ್ನು ಸತ್ಯನಿಷೇಧ ಅಥವಾ ಸತ್ಯಧರ್ಮವನ್ನು ಉಪೇಕ್ಷಿಸುವ ಉದ್ದೇಶದಿಂದ ಮಾಡಲಿಲ್ಲ. ನಾನು ಸತ್ಯನಿಷೇಧಿಯೂ ಅಲ್ಲ, ಸತ್ಯಧರ್ಮವನ್ನು ಉಪೇಕ್ಷಿಸಿದವನೂ ಅಲ್ಲ. ನಾನು ಇಸ್ಲಾಂ ಧರ್ಮವನ್ನು ಉಪೇಕ್ಷಿಸಲೂ ಇಲ್ಲ, ನಾನು ಕಪಟವಿಶ್ವಾಸಿಯೂ ಅಲ್ಲ. ನಾನು ಈ ಕೆಲಸವನ್ನು ಹಾಗೆ ಮಾಡಿಲ್ಲ. ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ನಂತರ ಸತ್ಯನಿಷೇಧವನ್ನು ಇಷ್ಟಪಡಲು ಸಾಧ್ಯವಲ್ಲ. ನಾನು ಹಾಗೆ ಮಾಡುವವನಲ್ಲ ಎಂದು ನಿಮಗೆ ಭರವಸೆ ಕೊಡುತ್ತೇನೆ. ಇದನ್ನು ಕೇಳಿ ಹಝ್ರ್‌ರತ್ ಪೈಗಂಬರ್(ಸ) ಹೇಳಿದರು: ಇವರು ನಿಮ್ಮೊಡನೆ ಸತ್ಯವನ್ನು ಹೇಳುತ್ತಿದ್ದಾರೆ. ಎಂದರೆ ಅವರು ಹೇಳಿದ ಮಾತನ್ನು ಹಝ್ರ್‌ರತ್ ಪೈಗಂಬರ್(ಸ) ಅಂಗೀಕರಿಸಿದರು. (ಸೀರತ್ ಖಾತಮನ್ನಬೀಈನ್, ಹಝ್ರ್‌ರತ್ ಮಿರ್ಝ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–840) (ಸಹೀಹ್ ಬುಖಾರಿ, ಕಿತಾಬುಲ್ ಜಿಹಾದ್, ಹದೀಸ್–3007, ಸಹೀಹ್ ಬುಖಾರಿ ಉರ್ದು ಅನುವಾದ ಅನುವಾದಕರು ಹಝ್ರ್‌ರತ್ ಝ್ಯೆನುಲ್ ಆಬಿದೀನ್ ವಲಿವುಲ್ಲಾಹ್ ಶಾಹ್ ಸಾಹಿಬ್, ಸಂಪುಟ–5, ಪುಟ–350–352, ಮುದ್ರಣ ನಝಾರತ್ ಇಶಾಅತ್ ರಬ್ವಾಹ್)

ಈ ಘಟನೆಯನ್ನು ಪ್ರಸ್ತಾಪಿಸುತ್ತಾ ಹಝ್ರ್‌ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರ್‌ರತ್ ಪೈಗಂಬರ್(ಸ) ಹತ್ತು ಸಾವಿರ ಸೈನಿಕರೊಡನೆ ಹೊರಟಿದ್ದಾರೆಂದು ಕೇವಲ ಒಬ್ಬ ದುರ್ಬಲ ಸಹಾಬಿ ಮಕ್ಕಾ ನಿವಾಸಿಯರಿಗೆ ಪತ್ರವನ್ನು ಬರೆದಿದ್ದರು. ಅವರು ಹೀಗೆ ಬರೆದಿದ್ದರು: ಹಝ್ರ್‌ರತ್ ಪೈಗಂಬರ್(ಸ) ಎಲ್ಲಿಗೆ ಹೋಗುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ಆದರೆ ಬಹುಶಃ ಅವರು ಮಕ್ಕಾದ ಕಡೆಗೆ ಬರುತ್ತಿದ್ದಾರೆಂದು ನನಗೆ ಅನಿಸುತ್ತಿದೆ. ಈ ಕಷ್ಟದ ಸಮಯದಲ್ಲಿ ಮಕ್ಕದಲ್ಲಿರುವ ನನ್ನ ಸಂಬಂಧಿಕರನ್ನು ಮತ್ತು ಆಪ್ತರನ್ನು ಸಹಾಯ ಮಾಡುವಿರಿ ಹಾಗೂ ಅವರಿಗೆ ಯಾವುದೇ ರೀತಿಯ ತೊಂದರೆಗಳು ಉಂಟಾಗದಂತೆ ನೀವು ನೋಡುಕೊಳ್ಳುತ್ತೀರಿ ಎಂದು ನಾನು ಪ್ರತೀಕ್ಷಿಸುತ್ತೇನೆ. ಈ ಪತ್ರ ಮಕ್ಕಕ್ಕೆ ತಲುಪಿರಲಿಲ್ಲ. ಹಝ್ರ್‌ರತ್ ಪೈಗಂಬರ್(ಸ) ಬೆಳಗ್ಗಿನ ಸಮಯದಲ್ಲಿ ಹಝ್ರ್‌ರತ್ ಅಲಿಯನ್ನು(ರ) ಕರೆದು ಹೀಗೆ ಹೇಳಿದರು: ನೀನು ಇಂತಹ ಸ್ಥಳಕ್ಕೆ ಹೋಗಬೇಕು. ಅಲ್ಲಿ ಒಬ್ಬ ಹೆಂಗಸು ಒಂಟೆಯ ಮೇಲೆ ಸವಾರಿ ಮಾಡಿ ಹೋಗುತ್ತಿರುವುದಾಗಿ ನೀವು ಕಾಣುವಿರಿ. ಅವಳ ಬಳಿಯಲ್ಲಿ ಒಂದು ಪತ್ರವಿರುವುದು. ಅವಳು ಅದನ್ನು ಮಕ್ಕಾದ ನಿವಾಸಿಯರ ಕಡೆಗೆ ಕೊಂಡು ಹೋಗುತ್ತಿದ್ದಾಳೆ. ನೀವು ಆ ಪತ್ರವನ್ನು ಆ ಹೆಂಗಸಿನಿಂದ ಪಡೆಯಬೇಕು ಮತ್ತು ಬೇಗನೇ ನನ್ನ ಬಳಿಗೆ ತರಬೇಕು. ಹಝ್ರ್‌ರತ್ ಅಲಿ(ರ) ಹೋಗಲು ಹೊರಟಾಗ ಹಝ್ರ್‌ರತ್ ಪೈಗಂಬರ್(ಸ) ಹೇಳಿದರು: ಅವಳೊಬ್ಬ ಸ್ತ್ರೀಯಾಗಿರುವ ಕಾರಣದಿಂದ ಅವಳೊಡನೆ ಕಠಿಣವಾಗಿ ವರ್ತಿಸಬೇಡಿರಿ. ಅವಳ ಬಳಿ ಪತ್ರವಿದೆ ಎಂದು ಒತ್ತಿ ಹೇಳಿದರಾಯಿತು. ಆದರೆ ಅವಳು ಆಗಲೂ ಸಮ್ಮತಿಸದಿದ್ದರೆ, ನಿಮ್ಮ ವಿನಂತಿ ಮತ್ತು ಒತ್ತಾಯ ಕೆಲಸಕ್ಕೆ ಬಾರದಿದ್ದರೆ, ಕಠಿಣವಾಗಿ ವರ್ತಿಸಬಹುದು. ಕೊಲ್ಲಬೇಕಾಗಿ ಬಂದರೆ, ಕೊಲ್ಲಲೂ ಬಹುದು. ಆದರೆ ಪತ್ರ ವಾಪಾಸ್ಸು ಸಿಗಬೇಕು. ಹೀಗೆ ಹಝ್ರ್‌ರತ್ ಅಲಿ(ರ) ಅಲ್ಲಿಗೆ ತಲುಪಿದರು. ಹೆಂಗಸು ಅಲ್ಲಿದ್ದಳು. ಅವಳು ಅಳಲು ಶುರುಮಾಡಿದಳು. ಆಣೆ ಹಾಕಿದಳು. ನನ್ನನ್ನು ತಪಾಸನೆ ಮಾಡುವಂತಹ ಎಂತಹ ಮೋಸದ ಕೆಲಸವನ್ನು ನಾನು ಮಾಡಿಲ್ಲ ಎಂದು ಹೇಳುತ್ತಿದ್ದಳು. ಅವಳ ಜೇಬುಗಳನ್ನು, ಅವಳ ಸಾಧನ ಸಾಮಗ್ರಿಗಳನ್ನು ಹುಡುಕಲಾಯಿತು. ಆದರೆ ಪತ್ರ ಸಿಗಲಿಲ್ಲ. ಪತ್ರ ಅವಳ ಬಳಿಯಿಲ್ಲವೆಂದು ತೋರುತ್ತದೆ ಎಂದು ಜೊತೆಗಿದ್ದ ಸಹಾಬಿವರ್ಯರು ಹೇಳಿದರು. ಹಝ್ರ್‌ರತ್ ಅಲಿ(ರ) ಆವೇಶದಿಂದ ಹೇಳಿದರು: ನೀವು ಸುಮ್ಮನಿರಿ. ಅಲ್ಲಾಹನಾಣೆ, ಪ್ರವಾದಿ ಎಂದಿಗೂ ಸುಳ್ಳು ಹೇಳಲು ಸಾಧ್ಯವಿಲ್ಲ. ಅವರು ಆ ಸ್ತ್ರೀಯೊಡನೆ ಹೇಳಿದರು: ನಿನ್ನ ಬಳಿ ಪತ್ರವಿದೆ ಎಂದು ಹಝ್ರ್‌ರತ್ ಪೈಗಂಬರ್(ಸ) ಹೇಳಿದ್ದಾರೆ. ನಾನು ಸುಳ್ಳನ್ನು ಹೇಳುತ್ತಿಲ್ಲ. ಅನಂತರ ಅವರ ಖಡ್ಗವನ್ನು ಹೊರತೆಗೆದು ಹೀಗೆ ಹೇಳಿದರು: ಸರಿಯಾಗಿ ಪತ್ರವನ್ನು ಹೊರತೆಗೆ, ಇಲ್ಲದಿದ್ದರೆ ನೆನಪಿಡು, ನಿನ್ನ ವಸ್ತ್ರಗಳನ್ನು ಕಳಚಿ ತಪಾಸನೆ ಮಾಡಬೇಕಾಗಿ ಬಂದರೂ ನಾವು ಹಾಗೆ ಮಾಡುವೆವು. ಏಕೆಂದರೆ, ಹಝ್ರ್‌ರತ್ ಪೈಗಂಬರ್(ಸ) ಸತ್ಯವನ್ನು ಹೇಳಿದ್ದಾರೆ. ನೀನು ಸುಳ್ಳು ಹೇಳುತ್ತಿದ್ದಿಯಾ. ವಸ್ತ್ರ ಕಳಚುವುದಾಗಿ ಹೇಳಿದಾಗ, ಅವಳು ಹೆದರಿದಳು. ಬೇಗನೇ ತನ್ನ ಜುಟ್ಟನ್ನು ಬಿಡಿಸಿಕೊಂಡು ಅಲ್ಲಿ ಇರಿಸಲಾದ ಪತ್ರವನ್ನು ಹೊರಗೆ ತೆಗೆದುಕೊಂಡು ಅವರಿಗೆ ಒಪ್ಪಿಸಿದಳು. (ಖುತ್‌ಬಾತೆ ಮಹ್ಮೂದ್, ಸಂಪುಟ–4, ಪುಟ–182–183, ಖುತ್‌ಬ ಜುಮ್‌ಅ 25–12–1914)

ಮಕ್ಕಾ ವಿಜಯದ ಸಂದರ್ಭದಲ್ಲಿ ಹಝ್ರ್‌ರತ್ ಪೈಗಂಬರ್(ಸ) ಮಸ್ಜಿದ್ ಹರಾಮಿನಲ್ಲಿ ಇದ್ದಾಗ, ಹಝ್ರ್‌ರತ್ ಅಲಿ(ರ) ಪೈಗಂಬರರ(ಸ) ಸನ್ನಿಧಿಗೆ ಬಂದರು. ಅವರ ಕೈಯಲ್ಲಿ ಕಅ್‌ಬದ ಕೀಲಿಗೈಯಿತ್ತು. ಅವರು ಹೇಳಿದರು: ಯಾ ರಸೂಲಲ್ಲಾಹ್, ನಮಗೆ ಹಜ್ಜಿನ ಸಂದರ್ಭದಲ್ಲಿ ನೀರು ಕುಡಿಸುವ ಡ್ಯೂಟಿಯೊಂದಿಗೆ ಕಅ್‌ಬವನ್ನು ತೆರೆಯುವ ಮತ್ತು ಮುಚ್ಚುವ ಡ್ಯೂಟಿಯ ಜವಾಬ್ದಾರಿಯನ್ನು ಸಹ ಒಪ್ಪಿಸಿರಿ. ಉಸ್ಮಾನ್ ಬಿನ್ ತಲ್‌ಹ ಎಲಿದ್ದಾರೆಂದು ಹಝ್ರ್‌ರತ್ ಪೈಗಂಬರ್(ಸ) ಕೇಳಿದರು. ಅವರನ್ನು ಕರೆಯಲಾಯಿತು. ಹಝ್ರ್‌ರತ್ ಪೈಗಂಬರ್(ಸ) ಹೇಳಿದರು: ಹೇ ಉಸ್ಮಾನ್, ಇದು ನಿನ್ನ ಕೀಲಿಗೈಯಾಗಿದೆ. ಇಂದು ಒಳಿತು ಮತ್ತು ನಿಷ್ಠೆಯ ದಿನವಾಗಿದೆ. ಹಝ್ರ್‌ರತ್ ಪೈಗಂಬರ್(ಸ) ಹಝ್ರ್‌ರತ್ ಅಲಿಯೊಡನೆ ಹೇಳಿದರು: ನಿಮಗೆ ಕಷ್ಟತೆ ಮತ್ತು ತೊಂದರೆ ಉಂಟಾಗುವಂತಹ ಸಂಗತಿಯನ್ನು ನಾನು ನಿಮಗೆ ನೀಡುವುದಿಲ್ಲ. ಬದಲಿಗೆ ನಿಮಗೆ ಉತ್ತಮವಾದದ್ದು ಮತ್ತು ಅನುಗ್ರಹದಾಯಕವಾದದ್ದನ್ನು ನೀಡುವೆನು. ನೀವು ಸ್ವತಃ ಜವಾಬ್ದಾರಿ ಪಡೆಯಲು ಇಚ್ಛಿಸುವ ಸಂಗತಿಯನ್ನು ನಾನು ನಿಮಗೆ ಕೊಡುವುದಿಲ್ಲ. ನೀವು ಕೇಳಿ ಪಡೆಯುವುದಾದರೆ, ನಾನು ಕೊಡಲು ತಯಾರಲ್ಲ. (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್, ಪುಟ–744, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2001)

ಹಝ್ರ್‌ರತ್ ಉಮ್ಮೇ ಹಾನಿ ಬಿನ್ತ್ ಅಬೀ ತಾಲಿಬ್ ಹೇಳುತ್ತಾರೆ: ಹಝ್ರ್‌ರತ್ ಪೈಗಂಬರ್(ಸ) ಮಕ್ಕದ ಮೇಲಿನ ಭಾಗದಲ್ಲಿ ತಂಗಿದ್ದಾಗ, ಬನೀ ಮಖ್‌ರೂಮಿನಿಂದ ನನ್ನ ಪತಿಯ ಸಂಬಂಧದಿಂದ ಇಬ್ಬರು ವ್ಯಕ್ತಿಗಳು ಓಡಿಕೊಂಡು ನನ್ನ ಬಳಿಗೆ ಬಂದರು. ಹಝ್ರ್‌ರತ್ ಉಮ್ಮೇ ಹಾನಿ ಹೇಳುತ್ತಾರೆ: ಆಗ ನನ್ನ ಸಹೋದರ ಅಲಿ ನನ್ನ ಬಳಿಗೆ ಬಂದು ಹೇಳಿದರು: ಅಲ್ಲಾಹನಾಣೆ, ನಾನು ಇವರಿಬ್ಬರನ್ನೂ ಕೊಲ್ಲುವೆನು. ಹಝ್ರ್‌ರತ್ ಉಮ್ಮೇ ಹಾನಿ ಹೇಳುತ್ತಾರೆ: ನಾನು ಅವರಿಬ್ಬರ ಸಂರಕ್ಷಣೆಗಾಗಿ ಮನೆಯ ಬಾಗಿಲನ್ನು ಮುಚ್ಚಿದೆನು. ಅನಂತರ ನಾನು ಹಝ್ರ್‌ರತ್ ಪೈಗಂಬರರನ್ನು ಭೇಟಿಯಾಗಲು ಮಕ್ಕದ ಎತ್ತರ ಪ್ರದೇಶಕ್ಕೆ ಹೋದೆ. ಹಝ್ರ್‌ರತ್ ಪೈಗಂಬರ್(ಸ) ಒಂದು ಪಾತ್ರೆಯಲ್ಲಿ ಸ್ನಾನ ಮಾಡುತ್ತಿದ್ದರು. ಆ ಪಾತ್ರೆಯಲ್ಲಿ ಗೋದಿಹಿಟ್ಟು ಅಂಟಿಕೊಂಡಿದ್ದ ಗುರುತುಗಳಿದ್ದುವು. ಹಝ್ರ್‌ರತ್ ಪೈಗಂಬರರ(ಸ) ಮಗಳಾದ ಫಾತಿಮ(ರ) ಒಂದು ಬಟ್ಟೆಯನ್ನು ಹಿಡಿದುಕೊಂಡು ಪೈಗಂಬರರಿಗೆ ಮರೆಯಾಗಿ ನಿಂತಿದ್ದರು. ಸ್ನಾನ ಮಾಡಿದ ನಂತರ ಹಝ್ರ್‌ರತ್ ಪೈಗಂಬರ್(ಸ) ತಮ್ಮ ಬಟ್ಟೆಗಳನ್ನು ಬದಲಾಯಿಸಿದರು. ಅನಂತರ ಸೂರ್ಯೋದಯದ ನಂತರದ ಎಂಟು ರಕಅತ್‌ಗಳ ನಮಾಝ್ ಅನುಷ್ಠಿಸಿದರು. ಅನಂತರ ನನ್ನ ಕಡೆಗೆ ನೋಡುತ್ತಾ ಹೀಗೆ ಹೇಳಿದರು: ಸ್ವಾಗತ, ನೀನು ಇಲ್ಲಿಗೆ ಬಂದ ಕಾರಣವೇನು? ಹಝ್ರ್‌ರತ್ ಉಮ್ಮೇ ಹಾನಿ ಆ ಇಬ್ಬರು ವ್ಯಕ್ತಿಗಳ ಮತ್ತು ಹಝ್ರ್‌ರತ್ ಅಲಿಯ ಬಗ್ಗೆ ಎಲ್ಲ ಸಂಗತಿಯನ್ನು ವಿವರಿಸಿದರು. ಹಝ್ರ್‌ರತ್ ಅಲಿ(ರ) ಅವರಿಬ್ಬರನ್ನು

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.2, Thursday, 14 January 2021, Issue No. 02

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

ಕೊಲ್ಲಲ್ಲು ಉದ್ದೇಶಿಸಿದ್ದರು ಮತ್ತು ನಾನು ಅವರನ್ನು ಮನೆಯಲ್ಲಿ ಅಡಗಿಸಿ ಬಂದಿದ್ದೇನೆ ಎಂದು ಹೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ನೀನು ಯಾರಿಗೆ ಅಭಯ ನೀಡಿದ್ದೀಯೋ ಅವರಿಗೆ ನಾವು ಸಹ ಅಭಯ ನೀಡುತ್ತೇವೆ. ಯಾರಿಗೆ ನೀನು ಸುರಕ್ಷೆ ನೀಡಿದ್ದೀಯೋ ಅವರಿಗೆ ನಾವು ಸಹ ಸುರಕ್ಷೆ ಒದಗಿಸುವೆವು. ಆದ್ದರಿಂದ ಅವರಿಬ್ಬರನ್ನು ಹಝ್ರತ್ ಅಲಿ(ರ) ಕೊಲ್ಲಲಿಕ್ಕಿಲ್ಲ. (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್, ಪುಟ-743-744, ದಾರುಲ್‌ಕುತುಬ್ ಇಲ್ಮಿಯ ಬೈರೂತ್ ಲೆಬನಾನ್ 2001)

ಹುವೈರಿಸ್ ಬಿನ್ ನುಖೈದ್‌ರನ್ನು ಕೊಲ್ಲಲು ಹಝ್ರತ್ ಪೈಗಂಬರ್(ಸ) ಆಜ್ಞಾಪಿದ್ದರು. ಏಕೆಂದರೆ, ಅವನು ಮಕ್ಕದಲ್ಲಿ ಹಝ್ರತ್ ಪೈಗಂಬರರನ್ನು(ಸ) ಉಪದ್ರವ ಮಾಡುತ್ತಿದ್ದನು. ಹಝ್ರತ್ ಪೈಗಂಬರರನ್ನು ಹಿಂಸೆ ಮಾಡಲು ದೊಡ್ಡ ದೊಡ್ಡ ಮಾತುಗಳನ್ನು ಹೇಳುತ್ತಿದ್ದನು ಮತ್ತುದೂಷಿಸುತ್ತಿದ್ದನು. ಹಝ್ರತ್ ಪೈಗಂಬರರ(ಸ) ತಂದೆಯ ಸಹೋದರರಾದ ಹಝ್ರತ್ ಅಬ್ಬಾಸ್(ರ) ಹಝ್ರತ್ ಫಾತಿಮ ಮತ್ತು ಹಝ್ರತ್ ಉಮ್ಮೇ ಮಕ್ತೂಮ್‌ರನ್ನು ಮಕ್ಕದಿಂದ ಮದೀನಕ್ಕೆ ಕಳುಹಿಸಲು ಒಂಟೆಯ ಮೇಲೆ ಕುಳ್ಳಿರಿಸಿದಾಗ, ಹುವೈರಿಸ್ ಆ ಒಂಟೆಯನ್ನು ಬೀಳಿಸಿದ್ದನು. ಮಕ್ಕಾ ವಿಜಯದ ಸಂದರ್ಭದಲ್ಲಿ, ಹುವೈರಿಸ್ ಬಿನ್ ನುಖೈದ್ ಪರಾರಿಯಾಗಲು ಹೊರಟಾಗ ಅವರನ್ನು ಹಝ್ರತ್ ಅಲಿ(ರ) ಕೊಂದರು.
(ಅಸ್ಸೀರತುನ್ನಬವೀಯ, ಸಂಪುಟ-3, ಪುಟ-131, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2002)

ಹುನೈನ್ ಯುದ್ಧ ಶವ್ವಾಲ್ ಹಿಜರೀ 8ರಲ್ಲಿ ನಡೆದಿತ್ತು. ಈ ಸಂದರ್ಭದಲ್ಲಿ ಮುಹಾಜಿರರ ಧ್ವಜ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಬಳಿಯಲ್ಲಿತ್ತು. ಘೋರವಾದ ಯುದ್ಧ ನಡೆದಾಗ, ಸತ್ಯನಿಷೇಧಿಗಳ ಕಠಿಣವಾದ ಆಕ್ರಮಣದ ಕಾರಣದಿಂದ ಹಝ್ರತ್ ಪೈಗಂಬರರ(ಸ) ಕೆಲವೇ ಕೆಲವು ಸಹಾಬರು ಮಾತ್ರ ಅಲ್ಲಿ ಉಳಿದಿದ್ದರು. ಆ ಕೆಲವು ಸಹಾಬರಲ್ಲಿ ಹಝ್ರತ್ ಅಲಿ(ರ) ಇದ್ದರು. (ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ-840) (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ-2, ಪುಟ-325, ದಾರ್ ಅಹ್ಯಾಉತ್ತುರಾಸ್ ಬೈರೂತ್ ಲೆಬಾನ್ 1996)

ಹುನೈನ್ ಯುದ್ಧದ ಸಂದರ್ಭದಲ್ಲಿ ಮುಶ್ರಿಕರ ಪಂಕ್ತಿಗಳ ಮುಂದೆ ಕೆಂಪು ಒಂಟೆಯ ಮೇಲೆ ಸವಾರನಾದ ಒಬ್ಬ ವ್ಯಕ್ತಿಯಿದ್ದನು. ಅವನ ಕೈಯಲ್ಲಿ ಒಂದು ಕಪ್ಪು ಬಾವುಟವಿತ್ತು. ಈ ಬಾವುಟವನ್ನು ಒಂದು ಉದ್ದವಾದ ಈಟಿಯಲ್ಲಿ ಕಟ್ಟಲಾಗಿತ್ತು. ಬನೂ ಹವಾಝಾನಿನ ಜನರು ಈ ವ್ಯಕ್ತಿಯ ಹಿಂದೆ ಇದ್ದರು. ಯಾರಾದರೂ ಅವರ ಮುಂದಕ್ಕೆ ಬಂದರೆ, ಅವರನ್ನು ಬೇಗನೇ ಈ ಈಟಿಯಿಂದ ಕೊಲ್ಲುತ್ತಿದ್ದನು. ಯಾರಾದರೂ ಈ ಈಟಿಯಿಂದ ಕೊಲ್ಲಲ್ಪಡದೆ ಇದ್ದರೆ, ಅವರ ಹಿಂದೆ ಇರುವವರೊಡನೆ ಈಟಿ ಎತ್ತಿಕೊಂಡು ಬೊಟ್ಟು ಮಾಡಿ ತೋರಿಸುತ್ತಿದ್ದರು. ಆಗ ಹಿಂದಿರುವ ಜನರೆಲ್ಲರೂ ಸೇರಿ ಅವರ ಮೇಲೆ ಹಲ್ಲೆ ನಡೆಸುತ್ತಿದ್ದರು. ಈ ವ್ಯಕ್ತಿ ಹೀಗೆಯೇ ಆಕ್ರಮಣ ನಡೆಸುತ್ತಾ ಸುತ್ತುತ್ತಿದ್ದನು. ಅಚಾನಕ್ಕಾಗಿ ಹಝ್ರತ್ ಅಲಿ(ರ) ಮತ್ತು ಒಬ್ಬ ಅನ್ಸಾರಿ ವ್ಯಕ್ತಿ ಅವನನ್ನು ನೋಡಿದರು. ಅವನನ್ನು ಕೊಲ್ಲಲು ಮುಂದಕ್ಕೆ ಧಾವಿಸಿದರು. ಹಝ್ರತ್ ಅಲಿ(ರ) ಅವನ ಹಿಂದಿನಿಂದ ಬಂದು ಅವನ ಒಂಟೆಯ ಸೊಂಟದ ಮೇಲೆ ಹಲ್ಲೆ ನಡೆಸಿದರು. ಅದರ ಕಾರಣದಿಂದ ಒಂಟೆ ಕೆಳಗೆ ಬಿತ್ತು. ಅಷ್ಟರಲ್ಲಿ ಅನ್ಸಾರಿ ವ್ಯಕ್ತಿ ಅವನ ಮೇಲೆ ಜಿಗಿದನು. ಎಷ್ಟು ಶಕ್ತವಾಗಿ ಹಲ್ಲೆ ನಡೆಸಿದರೆ, ಅವನ ಕಾಲು ತೊಡೆಯ ಅರ್ಧ ಭಾಗದಿಂದ ಮುರಿದುಹೋಯಿತು. ಅದೇ ಸಮಯ ಮುಸ್ಲಿಮರು ಮುಶ್ರಿಕರ ಮೇಲೆ ಶಕ್ತವಾದ ಆಕ್ರಮಣ ನಡೆಸಿದರು. (ಅಸ್ಸೀರತುಲ್ ಹಲಬೀಯ, ಸಂಪುಟ-3, ಪುಟ-158, ದಾರು;ಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2002)

ಬನೂ ತಯಿ ಕಡೆಗೆ ಹೋಗಿ ಹಝ್ರತ್ ಅಲಿ(ರ) ಮಾಡಿದ ಯುದ್ಧದ ಬಗ್ಗೆ ವರದಿಯಲ್ಲಿ ಬಂದಿದೆ. ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿಯನ್ನು (ರ) ನೂರೈವತ್ತು ವ್ಯಕ್ತಿಗಳೊಂದಿಗೆ ಬನೂ ತೈಯ ವಿಗ್ರಹವಾದ ಫುಲಸನ್ನು ಬೀಳಿಸಲು ರವಾನೆ ಮಾಡಿದರು. ಬನೂ ತೈಯ ಪ್ರದೇಶ ಮದೀನದ ಶುಮಾಲ್ ಮಶ್ರಿಕ್‌ನಲ್ಲಿ ಇದೆ. ಹಝ್ರತ್ ಪೈಗಂಬರ್(ಸ) ಈ ಯುದ್ಧಕ್ಕಾಗಿ ಹಝ್ರತ್ ಅಲಿಗೆ ಕಪ್ಪು ಬಣ್ಣದ ಒಂದು ದೊಡ್ಡ ಧ್ವಜ ಮತ್ತು ಬಿಳಿ ಬಣ್ಣದ ಸಣ್ಣ ಬಾವುಟವನ್ನು ನೀಡಿದರು. ಹಝ್ರತ್ ಅಲಿ(ರ) ಬೆಳಗ್ಗಿನ ಸಮಯದಲ್ಲಿ ಹಾತಮ್‌ರ ಜನರ ಮೇಲೆ ಹಲ್ಲೆ ನಡೆಸಿದರು. ಅವರ ವಿಗ್ರಹವಾದ ಫುಲಸ್‌ನನ್ನು ಬೀಳಿಸಿದರು. ಹಝ್ರತ್ ಅಲಿ(ರ) ಬನೂ ತೈಯಿಂದ ಧಾರಾಳ ಯುದ್ಧ ಸಂಪತ್ತು ಮತ್ತು ಕೈದಿಗಳನ್ನು ಹಿಡಿದುಕೊಂಡು ಮದೀನಕ್ಕೆ ಮರಳಬಂದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ-2, ಪುಟ-331, ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್ ಲೆಬನಾನ್ 1996)

ತಬೂಕ್ ಯುದ್ಧ ಹಿಜರೀ 9, ರಜಬ್‌ನಲ್ಲಿ ನಡೆದಿತ್ತು. ಇದರ ಬಗ್ಗೆ ಮುಸ್‌ಅಬ್ ಬಿನ್ ಸಅದ್ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ತಬೂಕಿಗೆ ಹೋಗಲು ಹೊರಟರು ಮತ್ತು ಹಝ್ರತ್ ಅಲಿಯನ್ನು(ರ) ತನ್ನ ಪ್ರತಿನಿಧಿಯನ್ನಾಗಿ ಮಾಡಿದರು. ನೀವು ನನ್ನನ್ನು ಮಕ್ಕಳು ಮತ್ತು ಸ್ತ್ರೀಯರೊಂದಿಗೆ ಬಿಟ್ಟು ಹೋಗುತ್ತಿದ್ದೀರ ಎಂದು ಹಝ್ರತ್ ಅಲಿ(ರ) ಕೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಹಾರೂನಗೆ ಮೂಸಾರೊಂದಿಗೆ ಇದ್ದ ಅದೇ ಸ್ಥಾನ ನಿನಗೆ ನನ್ನೊಡನೆ ಇದೆ ಎಂಬ ಕಾರಣದಿಂದ ನೀನು ಸಂತೋಷಗೊಳ್ಳುವುದಿಲ್ಲವೇ? ಆದರೆ ನನ್ನ ಅನುಪಸ್ಥಿತಿಯಲ್ಲಿ ನೀನು ನಬಿಯಾಗಿರುವುದಿಲ್ಲ. (ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝ ಬಶೀರ್ ಅಹ್ಮದ್ ಸಾಃಇಬ್ ಎಂ.ಎ, ಪುಟ-842) (ಸಹೀಹ್ ಬುಖಾರಿ, ಕಿತಾಬುಲ್ ಮಗಾಝಿ, ಹದೀಸ್-4416)

ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಘಟನೆಯನ್ನು ವಿವರಿಸುತ್ತಾ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಒಂದು ಬಾರಿ ಯುದ್ಧ ಮಾಡಲು ಹೋದರು. ಹೋಗುವಾಗ ಹಝ್ರತ್ ಅಲಿಯನ್ನು ತನ್ನ ಪ್ರತಿನಧಿಯನ್ನಾಗಿ ಮಾಡಿದರು. ಅಲ್ಲಿ ಕೇವಲ ಮುನಾಫಿಕರು ಮಾತ್ರ ಬಾಕಿಯುಳಿದಿದ್ದರು. ಇದರಿಂದ ಅವರು ಗಾಬರಿಗೊಂಡರು. ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಹಾಜರಾಗಿ ತನ್ನನ್ನು ಸಹ ಕೊಂಡುಹೋಗಲು ಹೇಳಿದರು. ಹಝ್ರತ್ ಪೈಗಂಬರ್(ಸ) ಸಮಾಧಾನಪಡಿಸುತ್ತಾ ಹೇಳಿದರು: **ಅಲ್ಲಾ ತರ್‌ಝಾ ಅನ್‌ತಕೂನ ಮಿನ್ನೀ ಬಿಮಂಝಿಲತಿ ಹಾರೂನ ಮಿನ್ ಮೂಸಾ ಇಲ್ಲಾ ಅನ್ನಹೂ ಲೈಸ ನಬಿಯ್ಯನ್ ಬಅ್‌ದೀ.** ಎಂದರೆ ಹಾರೂನಿಗೆ ಮೂಸಾರೊಂದಿಗೆ ಇದ್ದ ಅದೇ ಸಂಬಂಧ ನಿನಗೆ ನನ್ನೊಡನೆ ಇದೆ. ಒಂದು ದಿನ ನೀನೂ ನನ್ನ ಖಲೀಫನಾಗುತ್ತಿಯ. ಆದರೆ ಈ ಸಂಬಂಧವಿದ್ದರೂ ನೀನು ನಬಿಯಾಗಲಿಕ್ಕಿಲ್ಲ. (ಖೀಲಾಫತೆ ರಾಶಿದ, ಅನ್ವಾರುಲ್ ಉಲೂಮ್, ಸಂಪುಟ-15, ಪುಟ-579)

ಹಿಜರೀ ಹತ್ತರಲ್ಲಿಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರನ್ನು ಹಝ್ರತ್ ಪೈಗಂಬರ್(ಸ) ಯಮನ್ ಕಡೆಗೆ ಕಳುಹಿಸಿದ ಬಗ್ಗೆ ವರದಿಯಿದೆ. ಹಿಜರೀ ಹತ್ತರಲ್ಲಿ, ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿಯನ್ನು(ರ) ಯಮನ್ ಕಡೆಗೆ ಕಳುಹಿಸಿದರು. ಅದಕ್ಕಿಂತ ಮುಂಚೆ ಹಝ್ರತ್ ಖಾಲಿದ್ ಬಿನ್ ವಲೀದ್‌ರನ್ನು ಯಮನ್ ನಿವಾಸಿಗಳ ಬಳಿಗೆ, ಅವರನ್ನು ಇಸ್ಲಾಂ ಕಡೆಗೆ ಆಮಂತ್ರಿಸಲು ಕಳುಹಿಸಿದರು. ಆದರೆ ಅಲ್ಲಿಯ ಜನರು ನಿರಾಕರಿಸಿದರು. ಆಗ ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿಯನ್ನು(ರ) ಕಳುಹಿಸಿದರು. ಹಝ್ರತ್ ಅಲಿ(ರ) ಯಮನ್ ನಿವಾಸಿಗಳಿಗೆ ಹಝ್ರತ್ ಪೈಗಂಬರರ(ಸ) ಪತ್ರ ಓದಿ ಹೇಳಿದರು. ಆಗ ಹಮ್‌ದಾನಿನ ಎಲ್ಲರೂ ಒಂದೇ ದಿನದಲ್ಲಿ ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. ಅವರು ಇಸ್ಲಾಂ ಧರ್ಮ ಸ್ವೀಕರಿಸಿದ್ದ ಬಗ್ಗೆ ಹಝ್ರತ್ ಅಲಿ(ರ) ಹಝ್ರತ್ ಪೈಗಂಬರರಿಗೆ(ಸ) ಪತ್ರ ಬರೆದರು. ಹಝ್ರತ್ ಪೈಗಂಬರ್(ಸ) ಮೂರು ಸಲ ಹಂದಾನಿನ ಮೇಲೆ ಶಾಂತಿ, ಸಮಾಧಾನ ವರ್ಷಿಸಲಿ ಎಂದು ಹೇಳಿದರು. ಹಂದಾನ್ ಎಂಬುದು ಯಮನಿನ ಒಂದು ಪಟ್ಟಣವಾಗಿದೆ. ಅದರು ಮದೀನದಿಂದ ಸುಮಾರು 1150 ಕಿ.ಮಿ. ದೂರದಲ್ಲಿ ಪೂರ್ವ ದಿಕ್ಕಿನಲ್ಲಿ ಇದೆ. ಅನಂತರ ಯಮನಿನ ನಿವಾಸಿಗಳು ಸಹ ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. ಹಝ್ರತ್ ಅಲಿ(ರ) ಅದರ ಬಗ್ಗೆ ಹಝ್ರತ್ ಪೈಗಂಬರರಿಗೆ ಪತ್ರ ಬರೆದರು. ಆಗ ಹಝ್ರತ್ ಪೈಗಂಬರ್(ಸ) ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತಾ ಸಜ್‌ದ ಮಾಡಿದರು. (ಅಲ್‌ಕಾಮಿಲ್ ಫಿತ್ತಾರೀಖ್, ಸಂಪುಟ-2, ಪುಟ-168, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2006) (ಗಝುವಾತ್ ವ ಸರಾಯಾ, ಲೇಖಕ ಅಲ್ಲಾಮ ಮುಹಮ್ಮದ್ ಅಔಹರ್ ಫರೀದ್ ಶಾಹ್, ಪುಟ-550, ಫರೀದ್ ಪಬ್ಲೀಶರ್ಸ್ ಸಾಹೇವಾಲ್ 2018)

ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನನ್ನನ್ನು ಯಮನಿನ ಖಾಝಿಯನ್ನಾಗಿ ಮಾಡಿ ಕಳುಹಿಸಿದರು. ನಾನು ಹೇಳಿದೆ: ಯಾ ರಸೂಲಲ್ಲಾಹ್, ನೀವು ನನ್ನನ್ನು ಅಲ್ಲಿಗೆ ಕಳುಹಿಸುತ್ತಿದ್ದೀರಿ. ನಾನು ಯುವಕನಾಗಿರುವೆನು. ನನಗೆ ಖಝಾದ ಎಂದರೆ, ನ್ಯಾಯವಿಧಿಯ ಯಾವುದೇ ತಿಳುವಳಿಕೆಯಿಲ್ಲ. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ನಿಶ್ಚಯವಾಗಿಯೂ ಅಲ್ಲಾಹನು ನಿನ್ನ ಹೃದಯವನ್ನು ಸರಿಯಾದ ಮಾರ್ಗದಲ್ಲಿ ನಡೆಸುವನು ಮತ್ತು ನಿನ್ನ ನಾಲಗೆಯನ್ನು ಸ್ಥಿರಗೊಳಿಸುವನು. ಆದ್ದರಿಂದ ಜಗಳಾಡುವ ಇಬ್ಬರು ನಿನ್ನ ಮುಂದೆ ಕುಳಿತುಕೊಂಡರೆ, ಮೊದಲ ವ್ಯಕ್ತಿಯಿಂದ ಆಲಿಸಿದ ಹಾಗೆಯೇ ಎರಡನೇ ವ್ಯಕ್ತಿಯಿಂದ ಆಲಿಸುವ ವರೆಗೆ ತೀರ್ಮಾನ ಮಾಡಬೇಡ. ಇದರಿಂದ ನಿನಗೆ ಸರಿಯಾಗಿ ತೀರ್ಮಾನ ಮಾಡಲು ಸಾಧ್ಯವಾಗುವುದು. ಹಝ್ರತ್ ಅಲಿ(ರ) ಹೇಳುತ್ತಾರೆ: ಇದರ ನಂತರ ನಾನು ತೀರ್ಮಾನ ಮಾಡುವಾಗ ಎಂದಿಗೂ ಸಂಶಯಕ್ಕೆ ಒಳಪಡಲಿಲ್ಲ. (ಸುನನ್ ಅಬುದಾವೂದ್, ಕಿತಾಬುಲ್ ಅಖಝಿಯ, ಹದೀಸ್-3582)

ಹುದೈಬಿಯಾ ಸಂಧಿಯ ವೇಳೆಯಲ್ಲಿ ಹಾಜರಿದ್ದ ಹಝ್ರತ್ ಅಮ್ರ್ ಬಿನ್ ಶೇಶ್ ಅಸ್‌ಲಮಿ ವರದಿ ಮಾಡುತ್ತಾರೆ: ನಾನು ಹಝ್ರತ್ ಅಲಿಯೊಡನೆ(ರ) ಯಮನಿನ ಕಡೆಗೆ ರವಾನೆಯಾದೆ. ಯಾತ್ರೆಯ ಮಧ್ಯೆ ಅವರು ನನ್ನೊಡನೆ ಕಠಿಣವಾಗಿ ವರ್ತಿಸಿದರು. ನಾನು ಅವರ ಬಗ್ಗೆ ಸ್ವಲ್ಪ ಕೆಟ್ಟದ್ದಾಗಿ ಭಾವಿಸಲು ತೊಡಗಿದೆ. ಅನಂತರ ಯಮನಿನಿಂದ ಮರಳಿ ಬಂದಾಗ, ನಾನು ಅವರ ವಿರುದ್ಧ ಮಸೀದಿಯಲ್ಲಿ ದೂರುಕೊಟ್ಟೆ. ಕೊನೆಗೆ ಈ ಸುದ್ದಿ ಹಝ್ರತ್ ಪೈಗಂಬರರಿಗೆ(ಸ) ತಲುಪಿತು. ಒಂದು ದಿನ ನಾನು ಮಸೀದಿಗೆ ಪ್ರವೇಶಿಸಿದಾಗ, ಹಝ್ರತ್ ಪೈಗಂಬರ್(ಸ) ಕೆಲವು ಸಹಾಬಿಯುರೊಂದಿಗೆ ಮಸೀದಿಯಲ್ಲಿ ಕುಳಿತುಕೊಂಡಿರುವುದನ್ನು ಕಂಡೆನು. ಹಝ್ರತ್ ಪೈಗಂಬರರ(ಸ) ದೃಷ್ಟಿ ನನ್ನ ಮೇಲೆ ಪಟ್ಟಾಗ, ಹಝ್ರತ್ ಪೈಗಂಬರ್(ಸ) ನನ್ನನ್ನು ಗಮನವಿಟ್ಟು ನೋಡಿದರು. ಹಝ್ರತ್ ಪೈಗಂಬರ್(ಸ) ನನ್ನನ್ನು ತೀಕ್ಷ್ಣ ದೃಷ್ಟಿಯಿಂದ ನೋಡಿದರು. ನಾನು ಅಲ್ಲಿ ಕುಳಿತುಕೊಂಡೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಅಮ್ರ್ ನೀನು ನನಗೆ ದುಃಖವನ್ನು ಉಂಟುಮಾಡಿದ್ದಿಯಾ. ನಾನು ಹೇಳಿದೆ: ನಿಮಗೆ ನಾನು ಕಷ್ಟತೆ ಕೊಡುವುದರಿಂದ ನಾನು ಅಲ್ಲಾಹನ ಅಭಯ ಯಾಚಿಸುತ್ತೇನೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಯಾಕಿಲ್ಲ? ಯಾರು ಅಲಿಗೆ ತೊಂದರೆ ಕೊಡುತ್ತಾನೋ ಅವನು ನನಗೆ ತೊಂದರೆ ಕೊಡುತ್ತಾನೆ. ಇದು ಮುಸ್ನದ್ ಅಹ್ಮದ್ ಬಿನ್ ಹಂಬಲಿನ ವರದಿಯಾಗಿದೆ. (ಮುಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ-5, ಪುಟ-478-479, ಹದೀಸ್-16056, ಆಲಿಮುಲ್ ಕುತುಬ್ ಬೈರೂತ್ 1998)

ಹಝ್ರತ್ ಅಬೂ ಸಈದ್ ಖುದ್‌ರಿ ವರದಿ ಮಾಡುತ್ತಾರೆ: ಒಂದು ಸಂದರ್ಭದಲ್ಲಿ ಜನರು ಹಝ್ರತ್ ಅಲಿಯ(ರ) ಬಗ್ಗೆ ದೂರು ಕೊಟ್ಟರು. ಆಗ ಹಝ್ರತ್ ಪೈಗಂಬರ್(ಸ)

*(ಪುಟ ಸಂಖೆ 07 ರಲ್ಲಿ ಮುಂದುವರಿಸಲಾಗಿದೆ)*

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.